# ಕರ್ನಾಟಕ ವಿಧಾನ ಸಭೆ

## ಮಂಗಳವಾರ 6ನೇ ಜನವರಿ 2004 ರಂದು

## ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

## ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು

## ಅಧ್ಯಕ್ಷರು (ಶ್ರೀ ಎಂ. ವಿ. ವೆಂಕಟಪ್ಪ) ರವರು

## ಪೀಠವನ್ನು ಅಲಂಕರಿಸಿದ್ದರು

## 1) ಸಂತಾಪ ಸೂಚನೆ

### ಶ್ರೀ ವೈ.ಕೆ. ರಾಮಯ್ಯ ಮತ್ತು ಇತರರ ನಿಧನದ ಬಗ್ಗೆ

ವಿಧಾನ ಸಭೆಯ ಸದಸ್ಯರುಗಳಾದ ಶ್ರೀಯುತರುಗಳಾದ ವೈ.ಕೆ. ರಾಮಯ್ಯ ಮತ್ತು ಅಶೋಕ್ ನಾರಾಯಣ ಪಾಟೀಲ್, ಲೋಕಸಭಾ ಸದಸ್ಯರಾದ ಶ್ರೀ ಜಿ. ಮಲ್ಲಿಕಾರ್ಜುನಪ್ಪ, ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀಯುತರುಗಳಾದ ಮುದ್ದರಾಮಯ್ಯ, ಪಿ.ಎ. ಪಾವಶೆ, ಎ. ಆರ್. ಬದರಿನಾರಾಯಣ್, ಎಸ್.ಬಿ. ವಸ್ತ್ರದ್, ಎಸ್. ಗೋವಿಂದೇಗೌಡ, ಎಸ್.ಎಸ್. ಕಾಂಬಳೆ, ಕೆ.ಪಿ. ಶಾಂತಮೂರ್ತಿ, ಬಿ. ಅಪ್ಪಾಜಿ ಗೌಡ, ಪಿ.ಸಿ. ಶೆಟ್ಟರ್, ಟಿ. ಚೌಡಯ್ಯ, ಎಂ. ವಿರುಪಾಕ್ಷಪ್ಪ, ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀಮತಿ ಗಂಗಾಂಬಿಕ ಮಲ್ಲಿಕಾರ್ಜುನಯ್ಯ ಹಾಗೂ ಗಣ್ಯವ್ಯಕ್ತಿಗಳಾದ ಶ್ರೀ ಜಿ.ವಿ. ಐಯ್ಯರ್, ಶ್ರೀ ಕೆ.ಎಸ್. ನರಸಿಂಹಸ್ವಾಮಿ, ಶ್ರೀ ಎ.ಎನ್. ಮೂರ್ತಿ ರಾವ್ ಹಾಗೂ ಶ್ರೀ ಆರ್.ಕೆ. ಸೂರ್ಯನಾರಾಯಣ್ ಅವರುಗಳು ನಿಧನರಾಗಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

### 1. ಶ್ರೀ ವೈ.ಕೆ. ರಾಮಯ್ಯ

ವಿಧಾನ ಸಭೆಯ ಮಾಜಿ ಸಚಿವರು ಹಾಗೂ ಹಾಲಿ ಸದಸ್ಯರಾಗಿದ್ದ ಶ್ರೀ ವೈ.ಕೆ. ರಾಮಯ್ಯ ಅವರು, 1939ನೇ ಇಸವಿ ಆಗಸ್ಟ್ 5 ರಂದು ಯಲೆಕಡಕಲು ಗ್ರಾಮದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ವಕೀಲರಾದ ಶ್ರೀಯುತರು ಕೃಷಿಯಲ್ಲಿ ಆಸಕ್ತಿಯುಳ್ಳವರು. ತುಮಕೂರಿಗೆ ಹೇಮಾವತಿಯಿಂದ ನೀರು ತರುವಲ್ಲಿ ರೈತರ ಪರ ಹೋರಾಟ ನಡೆಸಿ, ರೈತರ ಮತ್ತು ಕೃಷಿ ಕಾರ್ಮಿಕರ ಏಳಿಗೆಗೆ ಹಾಗೂ ರೇಷ್ಮೆ ಕೈಗಾರಿಕೆಯ ಬಗ್ಗೆ ಶ್ರಮವಹಿಸಿ ದುಡಿದವರು. ಕರ್ನಾಟಕ ಗೃಹ ನಿರ್ಮಾಣ ಮಂಡಳಿಯ ಅಧ್ಯಕ್ಷರಾಗಿದ್ದರು. ಕುಣಿಗಲ್ ಕ್ಷೇತ್ರದಿಂದ 7ನೇ ವಿಧಾನ ಸಭೆಗೆ, ನಂತರ 1985ರಲ್ಲಿ 8ನೇ ವಿಧಾನಸಭೆಗೆ ಪುನರ್ ಆಯ್ಕೆಯಾಗಿ, ಶ್ರೀ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ರೇಷ್ಮೆಖಾತೆ ರಾಜ್ಯ ಸಚಿವರಾಗಿದ್ದ ಶ್ರೀಯುತರು "ನಾನು ಮತ್ತು ರೇಷ್ಮೆ" ಎಂಬ ಪುಸ್ತಕವನ್ನು ಪ್ರಕಟಿಸಿದ್ದರು. 9ನೇ ವಿಧಾನ ಸಭೆಗೆ 1992ರ ಉಪಚುನಾವಣೆಯಲ್ಲಿ ಆಯ್ಕೆಯಾಗಿದ್ದರು. 1999ರಲ್ಲಿ ಹುಲಿಯೂರು ದುರ್ಗ ಕ್ಷೇತ್ರದಿಂದ 11ನೇ ವಿಧಾನ ಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 3ನೇ ಜನವರಿ 2004 ರಂದು ನಿಧನ ಹೊಂದಿದರು.

### 2. ಶ್ರೀ ಅಶೋಕ ನಾರಾಯಣ ಪಾಟೀಲ್

ವಿಧಾನ ಸಭೆಯ ಹಾಲಿ ಸದಸ್ಯರಾದ ಶ್ರೀ ಅಶೋಕ ನಾರಾಯಣ ಪಾಟೀಲ್‌ರವರು ದಿನಾಂಕ 1ನೇ ಜನವರಿ 1951 ರಂದು ಮುತ್ತಗೆ ಗ್ರಾಮದಲ್ಲಿ ಜನಿಸಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದರು.

ಶ್ರೀಯುತರು ಮಲಪ್ರಭಾ ಸಕ್ಕರೆ ಕಾರ್ಖಾನೆ ಮತ್ತು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಬೆಳಗಾಂ ಕೋ. ಆಪರೇಟಿವ್ ಯೂನಿಯನ್ ನಿರ್ದೇಶಕರಾಗಿ, ಬೆಳಗಾಂ ಜಿಲ್ಲೆಯ ಅಮೆಚೂರ ಬಾಡಿ ಬಿಲ್ಡರ್ಸ್‌ನ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಕರ್ನಾಟಕ ಮಹಾರಾಷ್ಟ್ರದ ಗಡಿ ಸಮಸ್ಯೆಯ ನಡುವೆಯೂ ಅವರ ಕ್ಷೇತ್ರದ ಮತದಾರರ ಅಭಿಪ್ರಾಯಕ್ಕೆ ತಕ್ಕಂತೆ ಕಾರ್ಯ ನಿರ್ವಹಿಸಿ ಜನಪ್ರಿಯರಾಗಿದ್ದರು. ಶ್ರೀಯುತರು ಖಾನಾಪುರ ತಾಲ್ಲೂಕಿನ ಅಭಿವೃದ್ಧಿಗೆ ಪ್ರಮುಖ ಪಾತ್ರವನ್ನು ವಹಿಸಿರುವುದಲ್ಲದೆ, ಭಾಗ್ಯಲಕ್ಷ್ಮಿ ಸಕ್ಕರೆ ಕಾರ್ಖಾನೆಯ ಸ್ಥಾಪನೆಗೆ ಕಾರಣಕರ್ತರಾಗಿದ್ದರು. ಶ್ರೀಯುತರು 10ನೇ ವಿಧಾನಸಭೆಯ ಸದಸ್ಯರಾಗಿದ್ದು 11ನೇ ವಿಧಾನಸಭೆಗೆ ಖಾನಾಪುರ ಕ್ಷೇತ್ರದಿಂದ ಪುನರ್ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 29ನೇ ಅಕ್ಟೋಬರ್, 2003 ರಂದು ನಿಧನ ಹೊಂದಿದರು.

## 3. ಶ್ರೀ ಜಿ. ಮಲ್ಲಿಕಾರ್ಜುನಪ್ಪ

ಲೋಕಸಭೆಯ ಹಾಲಿ ಸದಸ್ಯರಾದ ಶ್ರೀ ಜಿ. ಮಲ್ಲಿಕಾರ್ಜುನಪ್ಪ, ಅವರು 27ನೇ ಜೂನ್ 1929 ರಲ್ಲಿ ಚಿತ್ರದುರ್ಗದ ತಾಲ್ಲೂಕಿನ ಭೀಮ ಸಮುದ್ರದಲ್ಲಿ ಜನಿಸಿದ್ದರು. ಕೃಷಿಕರಾದ ಶ್ರೀಯುತರು, ಭೀಮಸಮುದ್ರದಲ್ಲಿ 1957 ರಲ್ಲಿ ಅಡಿಕೆ ಮಾರುಕಟ್ಟೆಯನ್ನು ಪ್ರಾರಂಭಿಸಿ, 1972–73ರಲ್ಲಿ ನಿಯಂತ್ರಿತ ಮಾರುಕಟ್ಟೆ ಸ್ಥಾಪನೆಗೆ ನೆರವಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಹೆಚ್ಚಿನ ಕಾಳಜಿ ಹೊಂದಿದವರಾದ ಶ್ರೀಯುತರು 1962 ರಲ್ಲಿ ಭೀಮ ಸಮುದ್ರದಲ್ಲಿ ಶ್ರೀಶೈಲ ವಿದ್ಯಾಸಂಸ್ಥೆ ಸ್ಥಾಪಿಸಿ, 2001 ರಲ್ಲಿ ದಾವಣಗೆರೆಯ ಜಿ.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಪ್ರಾರಂಭಿಸಿದರು. 1952 ರಲ್ಲಿ ಚಿತ್ರದುರ್ಗ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕ್‌ನ ನಿರ್ದೇಶಕರಾಗಿ, 1992 ರಲ್ಲಿ ತಾಲ್ಲೂಕು ಬಿಜೆಪಿ ಅಧ್ಯಕ್ಷರಾಗಿ, ಸಿರಿಗೆರೆಯ ಶ್ರೀ ತರಳಬಾಳು ಬೃಹನ್ಮಠದ ಸಾದು ಸದ್ಧರ್ಮ ವೀರಶೈವ ಸಮಾಜದ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. 1992 ರಿಂದ 1994ರ ವರೆವಿಗೆ ಚಿತ್ರದುರ್ಗದಲ್ಲಿ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದರು. ಹಾಗೂ ಕನ್ನಡ ಸಾಹಿತ್ಯ ಪರಿಷತ್‌ನ ಅನೇಕ ಲೇಖನಗಳ ಪ್ರಕಟಣೆಗೆ ಕಾರಣಕರ್ತರಾಗಿದ್ದರು. ಶ್ರೀಯುತರು 11ನೇ ಲೋಕಸಭೆಯಲ್ಲಿ ಸೇವೆ ಸಲ್ಲಿಸಿ, ಪುನಃ ಹಾಲಿ 13ನೇ ಲೋಕಸಭೆಗೆ ದಾವಣಗೆರೆ ಕ್ಷೇತ್ರದಿಂದ ಆಯ್ಕೆಯಾಗಿದ್ದರು.

ಶ್ರೀಯುತರು 30ನೇ ನವೆಂಬರ್ 2003 ರಂದು ನಿಧನ ಹೊಂದಿದರು.

## 4. ಶ್ರೀ ಎಸ್. ಮುದ್ದರಾಮಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಮುದ್ದರಾಮಯ್ಯ ಅವರು 1918 ನೇ ಇಸವಿಯಲ್ಲಿ ತುಮಕೂರಿನ ಕೊರಟಗೆರೆ ತಾಲ್ಲೂಕಿನ ವಡ್ಡಗೇರಿ ಗ್ರಾಮದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯ ಪಾತ್ರ ವಹಿಸಿದ್ದು, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಜೈಲುವಾಸ ಅನುಭವಿಸಿದ್ದರು. ಮೈಸೂರು ಶಾಸನ ಮಂಡಳಿಗೆ 1950 ರಲ್ಲಿ ನಾಮಕರಣಗೊಂಡಿದ್ದ ಶ್ರೀಯುತರು 1952 ರಿಂದ 1957, 1972 ರಿಂದ 1977 ಹಾಗೂ 1978 ರಿಂದ 1983 ರವರೆಗೆ ಕೊರಟಗೆರೆಯಿಂದ ವಿಧಾನಸಭೆಗೆ ಚುನಾಯಿತರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 20ನೇ ಆಗಸ್ಟ್ , 2003 ರಂದು ನಿಧನ ಹೊಂದಿದರು.

## 5. ಶ್ರೀ ಪಿ. ಎ. ಪಾವಶೆ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಪಿ.ಎ. ಪಾವಶೆ ಅವರು 17ನೇ ಅಕ್ಟೋಬರ್ 1927 ರಂದು ಬೆಳಗಾವಿಯ ಉಚ್ಚಗಾಂವ್‌ನಲ್ಲಿ ಜನಿಸಿದ್ದರು. ಕಾನೂನು ಪದವೀಧರರಾಗಿದ್ದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರಾಗಿದ್ದರು. ಶ್ರೀಯುತರು 1972 ರಿಂದ 77 ರವರೆಗೆ ಹಾಗೂ ಪುನಃ 1978 ರಿಂದ 83 ರ ಅವಧಿಗೆ ಉಚ್ಚಗಾಂವ್ ಕ್ಷೇತ್ರದಿಂದ ಎಂಇಎಸ್ ನಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು 25ನೇ ಸೆಪ್ಟೆಂಬರ್ 2003 ರಂದು ನಿಧನ ಹೊಂದಿದರು

## 6. ಶ್ರೀ ಎ. ಆರ್. ಬದರಿನಾರಾಯಣ

ಲೋಕಸಭೆಯ ಮತ್ತು ವಿಧಾನ ಸಭೆಯ ಮಾಜಿ ಸದಸ್ಯರು ಹಾಗೂ ರಾಜ್ಯದ ಮಾಜಿ ಶಿಕ್ಷಣ ಸಚಿವರಾದ ಶ್ರೀ ಎ. ಆರ್. ಬದರಿನಾರಾಯಣ ಅವರು 1908ನೇ ಇಸವಿಯಲ್ಲಿ ಸಾಗರ್ ತಾಲ್ಲೂಕಿನ ಆನಂದಪುರಂ ನಲ್ಲಿ ಜನಿಸಿದ್ದರು. ಕಾನೂನು ಪದವೀಧರರಾದ ಶ್ರೀಯುತರು ವೃತ್ತಿಯಲ್ಲಿ ಸಮಾಜ ಸೇವಕರಾಗಿದ್ದರು. ಕೃಷಿ ಕುಟುಂಬದಿಂದ ಬಂದು, ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತರು ಹಲವಾರು ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದರು. 1957 ರಿಂದ 62 ರವರೆಗೆ ವಿಧಾನ ಸಭೆಯ ಸದಸ್ಯರಾಗಿ, 1962 ರಿಂದ 67 ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ, 1967 ರಿಂದ 71ರ ವರೆಗೆ ಪುನಃ ವಿಧಾನ ಸಭೆಯ ಸದಸ್ಯರಾಗಿ, 1972 ರಲ್ಲಿ ಐದನೇ ವಿಧಾನ ಸಭೆಗೆ ಪುನರ್ ಆಯ್ಕೆಗೊಂಡು ದೇವರಾಜು ಅರಸು ಅವರ ಮಂತ್ರಿಮಂಡಲದಲ್ಲಿ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದು, 1977 ರಿಂದ 79 ರವರೆಗೆ ಲೋಕಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು

ಶ್ರೀಯುತರು ದಿನಾಂಕ 06ನೇ ಅಕ್ಟೋಬರ್, 2003ರಂದು ನಿಧನ ಹೊಂದಿದರು.

## 7. ಶ್ರೀ ಎಸ್.ಬಿ. ವಸ್ತ್ರದ್

ವಿಧಾನ ಸಭೆಯ ಮಾಜಿ ಶಾಸಕರಾದ ಶ್ರೀ ಎಸ್.ಬಿ. ವಸ್ತ್ರದ್ ಅವರು 7ನೇ ಮಾರ್ಚ್, 1917 ರಂದು ಬಿಜಾಪುರ ಜಿಲ್ಲೆಯ ಲಕ್ಕುಂಡಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾಗಿದ್ದ ಶ್ರೀಯುತರು ಉಪಾಧ್ಯಾಯ ಹುದ್ದೆಗೆ ರಾಜೀನಾಮೆ ನೀಡಿ, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಸುಮಾರು 4 ವರ್ಷಗಳ ಕಾಲ ಸೆರೆಮನೆವಾಸ ಅನುಭವಿಸಿದ್ದರು. ಶ್ರೀಯುತರು 1963ರಲ್ಲಿ ಮೂರನೇ ವಿಧಾನ ಸಭೆಯ ಉಪ ಚುನಾವಣೆಯಲ್ಲಿ ತಿಕೋಟಾ ವಿಧಾನ ಸಭಾ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಪುನಃ ನಾಲ್ಕನೇ ವಿಧಾನ ಸಭೆಗೆ ಅದೇ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13ನೇ ಅಕ್ಟೋಬರ್ 2003 ರಂದು ನಿಧನ ಹೊಂದಿದರು.

## 8. ಶ್ರೀ ಎಸ್. ಗೋವಿಂದಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್. ಗೋವಿಂದಗೌಡ ಅವರು, ದಿನಾಂಕ 16ನೇ ಜೂನ್ 1936 ರಲ್ಲಿ ಕೋಲಾರ ತಾಲ್ಲೂಕಿನ ಅಂಕತತಿ ಹಳ್ಳಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು ಹಲವು ಸಂಘ ಸಂಸ್ಥೆಗಳ ಅಧ್ಯಕ್ಷರಾಗಿದ್ದರು. ಶ್ರೀಯುತರು 1978 ರಿಂದ 83 ರ ಅವಧಿಯಲ್ಲಿ ವೇಮಗಲ್ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 13ನೇ ಅಕ್ಟೋಬರ್ 2003 ರಂದು ನಿಧನ ಹೊಂದಿದರು.

## 9. ಶ್ರೀ ಎಸ್.ಎಸ್. ಕಾಂಬಳೆ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಸ್.ಎಸ್. ಕಾಂಬಳೆ ಅವರು, 1ನೇ ಜೂನ್ 1954 ರಲ್ಲಿ ಬೆಳಗಾಂ ಜಿಲ್ಲೆಯ ರಾಯ್‌ಬಾಗ್‌ನಲ್ಲಿ ಜನಿಸಿದ್ದರು. ಪದವೀಧರರಾದ ಶ್ರೀಯುತರು ಹಿಂದುಳಿದ ಹಾಗೂ ಪರಿಶಿಷ್ಟ ಜಾತಿಯ ಪಂಗಡಗಳ ಜನರ ಏಳ್ಗೆಗಾಗಿ ಹೋರಾಟ ಮಾಡಿದ್ದರು. ಬೆಳಗಾಂ ಜಿಲ್ಲೆಯ ರಾಯ್‌ಬಾಗ್ ಕ್ಷೇತ್ರದಿಂದ 1983 ರಿಂದ 84ರ ಅವಧಿಯಲ್ಲಿ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30ನೇ ಅಕ್ಟೋಬರ್, 2003 ರಂದು ನಿಧನ ಹೊಂದಿದರು.

## 10. ಶ್ರೀ ಕೆ. ಪಿ. ಶಾಂತಮೂರ್ತಿ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಕೆ. ಪಿ. ಶಾಂತಮೂರ್ತಿ ಯವರು, 6ನೇ ಫೆಬ್ರವರಿ 1929ರಲ್ಲಿ ಮೈಸೂರು ಜಿಲ್ಲೆಯ ಯಲಂದೂರ್ ತಾಲ್ಲೂಕಿನ ಕಿನಕ ಹಳ್ಳಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರು ಹಾಗೂ ಸಮಾಜ ಸೇವಕರು. ಪದವೀಧರರಾದ ಶ್ರೀಯುತರು ವಿದ್ಯಾರ್ಥಿ ಜೀವನದಿಂದ ರಾಜಕೀಯಕ್ಕೆ ಪ್ರವೇಶ ಮಾಡಿದ್ದು 1979 ರಿಂದ 1981 ರವರೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಣಿ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದರು. ಶ್ರೀಯುತರು 1983 ರಿಂದ 84 ರ ಅವಧಿಯಲ್ಲಿ ಹನೂರು ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿದ್ದರು.

ಶ್ರೀಯುತರು ದಿನಾಂಕ 2ನೇ ನವೆಂಬರ್ 2003 ರಂದು ನಿಧನ ಹೊಂದಿದರು.

## 11. ಶ್ರೀ ಬಿ. ಅಪ್ಪಾಜಿ ಗೌಡ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಬಿ. ಅಪ್ಪಾಜಿ ಗೌಡ ಅವರು, 10ನೇ ಮೇ 1919ರಲ್ಲಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬೆಸಗರ ಹಳ್ಳಿಯಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಕೃಷಿಕರಾದ ಶ್ರೀಯುತರು 1985ರಿಂದ 89 ರ ಅವಧಿಯಲ್ಲಿ, ಮದ್ದೂರು ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 2ನೇ ನವೆಂಬರ್ 2003 ರಂದು ನಿಧನ ಹೊಂದಿದರು.

## 12. ಶ್ರೀ ಪಿ.ಸಿ. ಶೆಟ್ಟರ್

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಪಿ.ಸಿ. ಶೆಟ್ಟರ್ ಅವರು 16ನೇ ಜೂನ್ 1933ರಲ್ಲಿ ಜನಿಸಿದ್ದರು. ಕಾನೂನು ಪದವೀಧರರಾದ ಶ್ರೀಯುತರು ವೃತ್ತಿಯಲ್ಲಿ ಕೃಷಿಕರು ಹಾಗೂ ವಕೀಲರಾಗಿದ್ದರು. ರಾಜಕೀಯದಲ್ಲಿ ಹೆಚ್ಚಿನ ಆಸಕ್ತಿ ಹೊಂದಿದವರಾದ ಶ್ರೀಯುತರು 1972 ರಿಂದ 77ರ ಅವಧಿಗೆ ಹಾನಗಲ್ ವಿಧಾನ ಸಭಾ ಕ್ಷೇತ್ರದಿಂದ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು 14ನೇ ನವೆಂಬರ್ 2003 ರಂದು ನಿಧನ ಹೊಂದಿದರು.

## 13. ಶ್ರೀ ಟಿ. ಚೌಡಯ್ಯ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಟಿ. ಚೌಡಯ್ಯ ಅವರು, 26ನೇ ಸೆಪ್ಟೆಂಬರ್ 1926 ರಂದು ಚಿತ್ರದುರ್ಗದ ಜಾಜೂರಿನಲ್ಲಿ ಜನಿಸಿದ್ದರು. ಕಾನೂನು ಪಧವೀಧರರಾದ ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಸಮಾಜ ಸೇವಕರಾದ ಶ್ರೀಯುತರು ಕಾಫಿ ಬೋರ್ಡ್‌ನಲ್ಲಿ ಮತ್ತು ಸಮಾಜ ಕಲ್ಯಾಣ ಹಾಗೂ ಶಿಕ್ಷಣ ಇಲಾಖೆಗಳ ಪತ್ರಾಂಕಿತ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು.

ಶ್ರೀಯುತರು 1978 ರಿಂದ 83ರ ಅವಧಿಯಲ್ಲಿ ಭರಮಸಾಗರ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 30ನೇ ನವೆಂಬರ್ 2003 ರಂದು ನಿಧನ ಹೊಂದಿದರು.

## 14. ಶ್ರೀ ಎಂ. ವಿರುಪಾಕ್ಷಪ್ಪ

ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ವಿರುಪಾಕ್ಷಪ್ಪ ಅವರು 24ನೇ ಅಕ್ಟೋಬರ್ 1926 ರಂದು ಕೊಪ್ಪಳದಲ್ಲಿ ಜನಿಸಿದ್ದರು. ರೈತ ಕುಟುಂಬದವರಾದ ಶ್ರೀಯುತರು ಕಾನೂನು ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರಾದ ಶ್ರೀಯುತರು 1972 ರಿಂದ 1977 ರ ವರೆಗೆ ಕೊಪ್ಪಳ ಕ್ಷೇತ್ರದಿಂದ ವಿಧಾನ ಸಭೆಗೆ ಆಯ್ಕೆಯಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ: 29ನೇ ಡಿಸೆಂಬರ್ 2003 ರಂದು ನಿಧನ ಹೊಂದಿದರು.

## 15. ಶ್ರೀಮತಿ ಗಂಗಾಂಬಿಕ ಮಲ್ಲಿಕಾರ್ಜುನಯ್ಯ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾದ ಶ್ರೀಮತಿ ಗಂಗಾಂಬಿಕ ಮಲ್ಲಿಕಾರ್ಜುನಯ್ಯ ಅವರು ಚಿಕ್ಕಮಗಳೂರಿನವರಾಗಿದ್ದರು. 1941 ರಿಂದ 1945ರ ವರೆಗೆ ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಮತಿ ಗಂಗಾಂಬಿಕ ಮಲ್ಲಿಕಾರ್ಜುನಯ್ಯ ಅವರು ದಿನಾಂಕ 23ನೇ ಸೆಪ್ಟೆಂಬರ್ 2003 ರಂದು ನಿಧನ ಹೊಂದಿದರು.

## 16 ಶ್ರೀ ಜಿ. ವಿ. ಅಯ್ಯರ್

ಕನ್ನಡ ಚಲನ ಚಿತ್ರರಂಗದ "ಆಚಾರ್ಯ" ಎಂದೇ ಖ್ಯಾತರಾದ, ಹಿರಿಯ ನಿರ್ದೇಶಕ, ನಿರ್ಮಾಪಕ ಮತ್ತು ನಟರಾದ ಶ್ರೀ ಜಿ.ವಿ. ಅಯ್ಯರ್ ಅವರು 1917 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡಿನಲ್ಲಿ ಜನಿಸಿದ್ದರು. ಬಾಲ್ಯದಲ್ಲಿಯೇ ಗುಬ್ಬಿ ಕಂಪನಿಯಲ್ಲಿ ಪರಿಚಾರಕರಾಗಿ ಸೇರಿಕೊಂಡು, ಪೋಸ್ಟರ್ ಬರೆಯುತ್ತಿದ್ದರು. ತದನಂತರ ಪುಣೆಯಲ್ಲಿ ಚಲನಚಿತ್ರದಲ್ಲಿ ತರಬೇತಿ ಪಡೆದು, ಮೊಟ್ಟ ಮೊದಲು 1942ರಲ್ಲಿ "ರಾಧಾರಮಣ" ಚಿತ್ರದಲ್ಲಿ ನಟಿಸಿದ್ದರು. ಒಟ್ಟು 22 ಚಿತ್ರಗಳನ್ನು ನಿರ್ದೇಶಿಸಿದ ಶ್ರೀ ಅಯ್ಯರ್ ಅವರು "ಹಂಸಗೀತೆ" ಚಿತ್ರಕ್ಕೆ ರಾಷ್ಟ್ರಖ್ಯಾತಿ ಗಳಿಸಿದ್ದರು. ಶ್ರೀಯುತರು "ಆದಿಶಂಕರಾಚಾರ್ಯ" ಮತ್ತು "ಭಗವದ್ಗೀತೆ" ಚಿತ್ರಗಳನ್ನು ಸಂಸ್ಕೃತದಲ್ಲಿ ನಿರ್ದೇಶಿಸಿ, ನಿರ್ಮಿಸಿ, ರಾಷ್ಟ್ರಪತಿಗಳ ಸ್ವರ್ಣಕಮಲ ಪ್ರಶಸ್ತಿ ಪಡೆದಿದ್ದರು. 1987–88 ರಲ್ಲಿ ರಾಜ್ಯಸರ್ಕಾರ ಪ್ರತಿಷ್ಠಿತ ಪುಟ್ಟಣ್ಣ ಕಣಗಾಲ್ ಪ್ರಶಸ್ತಿ ನೀಡಿ ಗೌರವಿಸಿದೆ. ಕನ್ನಡ ಚಿತ್ರಲೋಕದ ಹಿರಿಯ ಚೇತನ, ಮಹಾನ್ ಪ್ರತಿಭೆಯಾದ ಶ್ರೀ ಅಯ್ಯರ್‌ರವರು ಇಳಿಯ ವಯಸ್ಸಿನಲ್ಲೂ ಕಷ್ಟಕಾರ್ಪಣ್ಯಗಳನ್ನು ಮೆಟ್ಟಿ ನಿಂತು ಕಲಾತ್ಮಕ ಚಿತ್ರಗಳನ್ನು ನಿರ್ಮಿಸಿದ ಧೀರರಾಗಿರುತ್ತಾರೆ.

ಶ್ರೀಯುತರು ದಿನಾಂಕ 21ನೇ ಡಿಸೆಂಬರ್, 2003 ರಂದು ನಿಧನ ಹೊಂದಿದರು.

## 17. ಶ್ರೀ ಕೆ.ಎಸ್. ನರಸಿಂಹಸ್ವಾಮಿ

ಕನ್ನಡ ನಾಡಿನ ಹಿರಿಯ ಹಾಗೂ ಖ್ಯಾತ ಕವಿ ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರು 26ನೇ ಜನವರಿ 1915ರಲ್ಲಿ ಮಂಡ್ಯ ಜಿಲ್ಲೆಯ ಕಿಕ್ಕೇರಿಯಲ್ಲಿ ಜನಿಸಿದ್ದರು. ಶ್ರೀಯುತರು ಇಂಜಿನಿಯರಿಂಗ್ ವಿದ್ಯಾರ್ಥಿಯಾಗಿದ್ದು, ಕಾವ್ಯದ ಸೆಳೆತದಿಂದ ಇಂಜಿನಿಯರಿಂಗ್ ಬಿಟ್ಟು ಕಲಾಶಿಕ್ಷಣದತ್ತ ಒಲವು ತೋರಿದ್ದು ವಿದ್ಯಾರ್ಥಿಯಾಗಿದ್ದಾಗಲೇ ಅವರ ಮೊದಲನೆ ಸಂಕಲನ "ಕಬ್ಬಿಗನ

ಕೂಗು" ಬಿಡುಗಡೆಗೊಂಡಿದೆ. ಶ್ರೀಯುತರು ಗೃಹಮಂಡಳಿಯಲ್ಲಿ ಸೂಪರಿಂಟೆಂಡೆಂಟ್ ಹುದ್ದೆಯಲ್ಲಿ ಕಾರ್ಯನಿರ್ವಹಿಸಿದ್ದರು. 1943ರಲ್ಲಿ ಜನಪ್ರಿಯವಾದ "ಮೈಸೂರು ಮಲ್ಲಿಗೆ" ಕವನ ಸಂಕಲನ ಮುದ್ರಣ ಕಂಡಿತು.

1990 ರಲ್ಲಿ 60ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಗೌರವ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿದ್ದವು. 1977ರಲ್ಲಿ 'ತೆರೆದ ಬಾಗಿಲು' ಸಂಕಲನಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1973ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1995ರಲ್ಲಿ ಪಂಪ ಪ್ರಶಸ್ತಿ, 1957ರಲ್ಲಿ 'ಶಿಲಾಲತೆ' ಕೃತಿಗೆ ಮೈಸೂರು ರಾಜ್ಯದ ಸಂಸ್ಕೃತಿ ಪ್ರಸರಣ ಪ್ರಶಸ್ತಿಗಳನ್ನು ಶ್ರೀಯುತರು ಪಡೆದಿದ್ದರು.

ಶ್ರೀಯುತರು ದಿನಾಂಕ : 28.12.2003 ರಂದು ನಿಧನ ಹೊಂದಿದರು.

## 18. ಶ್ರೀ ಎ.ಎನ್. ಮೂರ್ತಿರಾವ್

ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಎಂದೇ ಖ್ಯಾತರಾದ ಶತಾಯುಷಿ ಶ್ರೀ ಎ.ಎನ್.ಮೂರ್ತಿರಾವ್ ಅವರು 16ನೇ ಜೂನ್ 1900 ರಲ್ಲಿ ಮಂಡ್ಯ ಜಿಲ್ಲೆಯ ಅಕ್ಕಿಹೆಬ್ಬಾಳದಲ್ಲಿ ಜನಿಸಿದ್ದರು. ಅವರು ಮೂಲತ: ಇಂಗ್ಲೀಷ್ ಪ್ರಾಧ್ಯಾಪಕರಾಗಿದ್ದರೂ ಸಹ ಕನ್ನಡದಲ್ಲಿ ಹಲವಾರು ಕೃತಿಗಳನ್ನು ರಚಿಸಿದ್ದರು. 'ದೇವರ' ಕೃತಿಗೆ ಪಂಪ ಪ್ರಶಸ್ತಿ ದೊರಕಿದೆ. ಅವರು ದೇವರನ್ನು ತಿರಸ್ಕರಿಸುವಂತೆ ಕಂಡರು ನಿಜವಾದ ಅರ್ಥದಲ್ಲಿ ಇಡೀ ಲೋಕವನ್ನು ನಿಯಂತ್ರಿಸುವ ಅಗೋಚರ ಶಕ್ತಿ ಪಡೆದಿದ್ದರು. ಅವರು ರಚಿಸಿದ ಕೃತಿಗಳ ಪೈಕಿ ವಿವಾದಕ್ಕಿಂತ ಹೆಚ್ಚಾಗಿ ಚರ್ಚೆಗೆ ಸಾರ್ವಜನಿಕವಾಗಿ ಎಡೆ ಮಾಡಿಕೊಟ್ಟದ್ದು "ದೇವರು" ಎಂಬ ಕೃತಿ.

ಕನ್ನಡ ಚಲನಚಿತ್ರರಂಗದಲ್ಲಿ ಹೊಸ ಅಲೆಯ ಚಿತ್ರ ಸುಬ್ಬಾಶಾಸ್ತ್ರಿಯ ನಿರ್ಮಾಣಕ್ಕೆ ಮೂರ್ತಿರಾಯರ ಸಾಹಿತ್ಯ ಕೃತಿಯೇ ಪ್ರೇರಣೆ. ಇವರು ರಚಿಸಿದ ಜನಪ್ರಿಯ ನಾಟಕ "ಆಷಾಡಭೂತಿ" ಬೆಳ್ಳಿತೆರೆಯ ಮೇಲೆ ಮೂಡಿದ್ದು, ಇದರಿಂದ ಪ್ರಶಸ್ತಿಗಳ ಸರಮಾಲೆಗಳು ಲಭಿಸಿವೆ. ಶ್ರೀಯುತರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಹಾಗೂ ಮೈಸೂರು ಆಕಾಶವಾಣಿಯ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದರು.

ಶ್ರೀಯುತರು ದಿನಾಂಕ 23.08.2003 ರಂದು ನಿಧನ ಹೊಂದಿದರು.

## 19. ಶ್ರೀ ಆರ್.ಕೆ. ಸೂರ್ಯನಾರಾಯಣ್

ಪ್ರಖ್ಯಾತ ವೀಣಾ ವಿದ್ವಾನ್ ಶ್ರೀ ಆರ್.ಕೆ. ಸೂರ್ಯನಾರಾಯಣ್ ಅವರು ಹಾಸನ ಜಿಲ್ಲೆಯ ರುದ್ರಪಟ್ನ ಗ್ರಾಮದಿಂದ ಬಂದವರು. ಇವರು ಅನೇಕ ಸಂಗೀತಗಾರರನ್ನು ಬೆಳೆಸಿದರು. ತಮ್ಮ ತಂದೆಯಿಂದ ಸಂಗೀತವನ್ನು ಕಲಿತು 7 ವರ್ಷ ವಯಸ್ಸಿನವರಿದ್ದಾಗಲೇ ತಮ್ಮ ಸಂಗೀತ ಜ್ಞಾನವನ್ನು ಪ್ರದರ್ಶಿಸಿದರು. ಇವರಿಗೆ 1976ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಲಭಿಸಿತ್ತು. ಇದರ ಜೊತೆಗೆ ಕಲಾಪೂರ್ಣ, ನಾಡಜ್ಯೋತಿ, ವೀಣಾವಾದನ, ಗಂಧರ್ವ ಮತ್ತು ವೀಣಾಚಕ್ರವರ್ತಿ ಬಿರುದುಗಳು ಇವರ ಪಾಲಿಗೆ ದಕ್ಕಿದ್ದವು. ವಿದೇಶ ಪ್ರವಾಸಗಳನ್ನು ಅನೇಕ ಬಾರಿ ಕೈಗೊಂಡು ಅಮೇರಿಕ, ಸಿಂಗಪೂರ್, ಮಲೇಷಿಯಾ, ಇಂಡೋನೇಷಿಯಾ, ಇರಾನ್, ಈಜಿಪ್ಟ್ ಮತ್ತು ಬ್ರಿಟನ್ ಮುಂತಾದ ದೇಶಗಳಲ್ಲಿ ತಮ್ಮಲ್ಲಿರುವ ಸಂಗೀತ ಜ್ಞಾನವನ್ನು ಪ್ರದರ್ಶಿಸಿದರು.

ಶ್ರೀಯುತರು ದಿನಾಂಕ 25–12–2003 ರಂದು ನಿಧನಹೊಂದಿದರು.

+ **ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)** : ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಸೇರುವ ಮುನ್ನ ಇತ್ತೀಚಿನ ದಿನಗಳಲ್ಲಿ ನಮ್ಮ ರಾಜ್ಯದ ಹಲವಾರು ಪ್ರತಿಭಾನ್ವಿತ ವ್ಯಕ್ತಿಗಳು ನಮ್ಮನ್ನು ಅಗಲಿದ್ದಾರೆ. ಅವರಿಗೆ ಸಂತಾಪವನ್ನು ಸೂಚನೆ ಮಾಡಿ ಈ ಸದನದ ಗೌರವವನ್ನು ಪ್ರಣಾಮಗಳನ್ನು ಅವರಿಗೆ ಅರ್ಪಿಸುವ ತಮ್ಮ ನಿರ್ಣಯವನ್ನು ನಾನು ಅನುಮೋದಿಸಲಿಕ್ಕೆ ನಿಂತಿದ್ದೇನೆ. ಕೆಲವೊಂದು ಸಾರಿ ಕೆಲವು ಘಟನೆಗಳು ನಡೆದಿದ್ದನ್ನು ನಂಬಲಿಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ, ಮಾನ್ಯ ವೈ.ಕೆ. ರಾಮಯ್ಯನವರ ಹಠಾತ್ ನಿರ್ಗಮನ. ಕಳೆದ ತಿಂಗಳ 29ನೇ ತಾರೀಖು ಮಹಾಕವಿ ಕುವೆಂಪುರವರ ಜನ್ಮಶತಾಬ್ದಿಯನ್ನು ಆಚರಿಸುವ ಸಂದರ್ಭದ ಸಮಯ, ನ್ಯಾಷನಲ್ ಕಾಲೇಜ್ ಮೈದಾನದಲ್ಲಿ ಕುವೆಂಪು ಜ್ಯೋತಿಯನ್ನು ಅವರು ತಂದು ಮಾನ್ಯ ರಾಜ್ಯಪಾಲರ ಕೈಗೆ ಕೊಟ್ಟರು. ಸಮಾರಂಭಕ್ಕೆ ಕೆಲವು ನಿಮಿಷಗಳ ಮುನ್ನ ನನ್ನ ಜೊತೆಯಲ್ಲಿ ಅವರು ಬಹಳ ಆತ್ಮೀಯವಾಗಿ ಮಾತನಾಡುತ್ತಾ, ಹಲವಾರು ಸಮಸ್ಯೆಗಳನ್ನು ನಿಮ್ಮ ಜೊತೆಯಲ್ಲಿ ನಾನು ಚರ್ಚಿಸಬೇಕಾಗಿದೆ. ಮುಂದಿನವಾರ ಬರುತ್ತೇನೆಂದು ಹೇಳಿದ್ದರು. ಭಾವನಾತ್ಮಕವಾಗಿ ಮತ್ತು ಸೈದ್ಧಾಂತಿಕವಾಗಿ ಶ್ರೀ ರಾಮಯ್ಯನವರ ಮತ್ತು ನನ್ನ ನಡುವೆ ಒಂದು ಸಂಬಂಧವಿತ್ತು. ಅವರ ಜನಪರ ಕಾಳಜಿ, ಮತ್ತು ಕೆಲವು ವಿಚಾರಗಳ ಬಗ್ಗೆ ಅವರು ತೆಗೆದುಕೊಂಡ ನಿಷ್ಠೂರ ನಿಲುವುಗಳು, ಕೆಲವೊಂದು ಸಾರಿ ಪಕ್ಷದ ನಾಯಕತ್ವವನ್ನು ಕೂಡ ಮುಜಗರಕ್ಕೆ ಒಳಪಡಿಸತಕ್ಕಂಥ ಒಳಪಡಿಸುವಂಥ ನಿಲುವುಗಳನ್ನು ಅವರು ತೆಗೆದುಕೊಂಡಿದ್ದರು. ಅವರು ಇದ್ದ ಯಾವುದೇ ಪಕ್ಷದಲ್ಲಿ ಅವರೊಬ್ಬ ಸಮಸ್ಯಾತ್ಮಕ ವ್ಯಕ್ತಿಯಾಗಿದ್ದರು. ಆದರೆ, ತಾವು ನಂಬಿದ ವಿಚಾರಗಳ ಪರವಾಗಿ ಧೀರೋದ್ದಾತ್ತವಾದ ಹೋರಾಟವನ್ನು ಮಾಡತಕ್ಕಂಥ ಪ್ರವೃತ್ತಿಯನ್ನು ಕೊನೆಯ ಉಸಿರು ಇರುವವರೆವಿಗೂ ಕೂಡ ಅವರು ಮಾಡಿದರು. ಅವರು ಒಂದನೇ ತಾರೀಖು ನನಗೆ ಫೋನ್ ಮಾಡಿದ್ದರು. ಆಗ ನಾನು ದೇಶದಲ್ಲಿ ಇರಲಿಲ್ಲ. 1991–92ನೇ ಇಸ್ವಿಯಲ್ಲಿ ಅವರ ಮತ್ತು ನನ್ನ ನಿಕಟವಾದಂಥ ಪರಿಚಯ ಆಗಿತ್ತು. ಆಗ ನಾನು ನೀರಾವರಿ ಸಚಿವನಾಗಿದ್ದೆ. ಹೇಮಾವತಿ ನಾಲೆ ಕೆಲಸಗಳ ಬಗ್ಗೆ ಅಪಾರವಾದಂಥ ಕಾಳಜಿ ಅವರಿಗೆ ಇತ್ತು, ಆ ಸಮಯದಲ್ಲಿ ನನ್ನನ್ನು ಹಲವಾರು ಬಾರಿ ಆ ಕ್ಷೇತ್ರಕ್ಕೆ ಕರೆದುಕೊಂಡು ಹೋಗಿ ತುಮಕೂರು ಜಿಲ್ಲೆಗೆ ಹೇಮಾವತಿ ಹರಿಸುವಲ್ಲಿ ಶ್ರೀ ವೈ.ಕೆ. ರಾಮಯ್ಯನವರ ಪಾತ್ರ ಅತ್ಯಂತ ಮಹತ್ವದ್ದು ಮತ್ತು ಅದು ಹೇಮಾವತಿಯ ಇತಿಹಾಸದ ಒಂದು ಎಕ್ಸ್‌ಟೆನ್‌ಷನ್. ಕೆಲವೊಂದು ಸಾರಿ ಏಕಾಂಗಿಯಾಗಿ ಹೋರಾಟ ಮಾಡುತ್ತಿದ್ದರು. ಮತ್ತು ಕ್ರಿಯಾಶೀಲರಾಗಿರತಕ್ಕಂಥ ವ್ಯಕ್ತಿಯಾಗಿದ್ದರು. ಹಾಗೆಯೇ, ರೇಷ್ಮೆ ಕೃಷಿ ಬಗ್ಗೆ ಅಪಾರವಾದಂಥ ಜ್ಞಾನವನ್ನು ಪಡೆದಿದ್ದರು. ನೀರಾವರಿ ಮತ್ತು ಕೃಷಿ ವಿಚಾರಗಳ ಬಗ್ಗೆ ಅತ್ಯಂತ ಅಧಿಕಾರಯುಕ್ತವಾಗಿ ಮಾತನಾಡಬಲ್ಲ ಹಲವು ಸದಸ್ಯರುಗಳ ಪೈಕಿ ಶ್ರೀ ವೈ.ಕೆ. ರಾಮಯ್ಯನವರು ಒಬ್ಬರು ಎನ್ನತಕ್ಕಂಥದ್ದು ನಾವೆಲ್ಲರೂ ಸಹ ಒಪ್ಪಿಕೊಳ್ಳಬೇಕಗಿರತಕ್ಕಂಥ ಮಾತು. ಕೆಲವು ರಾಜಕಾರಣಿಗಳು ಕೇವಲ ರಾಜಕಾರಣಕ್ಕೆ ಸೀಮಿತಗೊಂಡಿರುತ್ತಾರೆ. ಅವರಿಗೆ ಪರಿಸರದ ಬಗ್ಗೆಯಾಗಲಿ ಅಥವಾ ಸಾಹಿತ್ಯ ಮತ್ತು ಸಂಸ್ಕೃತಿಯ ಬಗ್ಗೆ ಆಗಲಿ ಆಸಕ್ತಿ ಬಹಳ ಕಡಿಮೆ ಇರುತ್ತದೆ. ಆದರೆ, ಮಾನ್ಯ ವೈ.ಕೆ. ರಾಮಯ್ಯನವರು ಈ ಅಪವಾದಕ್ಕೆ ದೂರವಾಗಿದ್ದರು. ಶ್ರೀಯುತರು ಪರಿಸರದ ಬಗ್ಗೆ ಬಹಳ ವಿಶ್ವಾಸವನ್ನು ಹೊಂದಿದ್ದರು. ಶ್ರೀ ಕುವೆಂಪುರವರ ಚಿಂತನೆಗಳ ಬಗ್ಗೆ ಮತ್ತು ಅವರ ಸಾಹಿತ್ಯದ ಬಗ್ಗೆ ಅಪಾರವಾದಂಥ ಅಧ್ಯಯನ ಮಾಡಿದ್ದರು. ಸುಮಾರು ಎರಡು ವರ್ಷಗಳ ಹಿಂದೆ ಅವರ ತಾಲ್ಲೂಕಿನಲ್ಲಿ ನಡೆದಂಥ ಸಸ್ಯ ಸಂರಕ್ಷಣೆ ಮಾಡತಕ್ಕಂಥ ಒಂದು ಕಾರ್ಯಕ್ರಮಕ್ಕೆ ನನ್ನನ್ನು

ಅವರು ಕರೆದುಕೊಂಡು ಹೋಗಿದ್ದರು. ಪರಿಸರದ ಬಗ್ಗೆ ಅವರಿಗಿದ್ದಂಥ ಆಗಾಧವಾದಂಥ ಆಸಕ್ತಿ ಆ ಸಂದರ್ಭದಲ್ಲಿ ನನಗೆ ಪರಿಚಯವಾಯಿತು. ಕೆಲವೊಂದು ಸಾರಿ ಅವರ ಮಾತಿನಲ್ಲಿ ಮತ್ತು ಧ್ವನಿಯಲ್ಲಿ ಗ್ರಾಮೀಣ ಸೊಗಡು ಮತ್ತು ಸಾತ್ವಿಕ ಸಿಟ್ಟು ಇರುತ್ತಿತ್ತು. ಈ ಸದನ ಅದನ್ನು ಹಲವಾರು ಸಾರಿ ಕಂಡಿದೆ. ಆದರೆ, ದ್ವೇಷದ ಕಿಡಿ ಅವರಲ್ಲಿ ಇರಲಿಲ್ಲ. ಬಾಹ್ಯದಲ್ಲಿ ಒರಟರಂತೆ ಕಂಡರೂ ಕೂಡಾ ಆಂತರ್ಯದಲ್ಲಿ ನಯವಂತಿಕೆಯ ಮಾಧುರ್ಯ ಅವರ ಹೃದಯದಲ್ಲಿ ತುಂಬಿಕೊಂಡಿತ್ತು. ಶ್ರೀಮಾನ್ ಲೋಹಿಯ ಅವರು ಮತ್ತು ಜೆ.ಪಿ.ಯವರು ಹಾಗೂ ಇತರರಿಂದ ಅವರು ಪ್ರಭಾವಿತರಾಗಿದ್ದರು. ಯಾವುದೇ ಒಂದು ಸಮಸ್ಯೆಯ ಬಗ್ಗೆ ಆಳವಾದಂಥ ಅಧ್ಯಯನ ಮಾಡುತ್ತಿದ್ದರು ಮತ್ತು ಅದರ ಬಗ್ಗೆ ತಮ್ಮ ಶಕ್ತಿಯುತವಾದಂಥ ಧ್ವನಿಯನ್ನು ಅವರು ಈ ಸದನಕ್ಕೆ ಕೊಟ್ಟಿದ್ದರು. ಅಂಥ ಒಬ್ಬ ಚಿಂತನಾಶೀಲ ಸ್ನೇಹಿತನನ್ನು ನಾವೆಲ್ಲರೂ ಕಳೆದುಕೊಂಡಿದ್ದೇವೆ. ಶ್ರೀಯುತರು ನಿಧನ ಹೊಂದಿದ ಹಿಂದಿನ ರಾತ್ರಿ ಬಹಳ ಹೊತ್ತಿನವರೆಗೆ ಅವರ ತಾಲ್ಲೂಕಿನ ಹಲವಾರು ಸಮಾರಂಭಗಳಲ್ಲಿ ನನ್ನ ಜೊತೆ ಭಾಗವಹಿಸಿದ್ದರೆಂದು, ಶ್ರೀಯುತರು ತೀರಿ ಹೋದ ಮೂರನೇ ದಿವಸ ಅವರ ಊರಿಗೆ ಹೋದಾಗ ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಗಳು ನನಗೆ ಹೇಳಿದರು. ಶ್ರೀ ರಾಮಯ್ಯನವರು ಭಾಗವಹಿಸಿದಂಥ ಸಂದರ್ಭದಲ್ಲಿ ಡ್ರಿಪ್ ಹಾಕಿಸಿಕೊಂಡಿದ್ದಂಥ ನೀಡಲ್ ಅವರ ಕೈಯಲ್ಲಿತ್ತಂತೆ ಡ್ರಿಪ್ ಹಾಕಿಸಿಕೊಂಡ ನಂತರ ನನ್ನ ಜೊತೆಯಲ್ಲಿ ಸಮಾರಂಭದಲ್ಲಿದ್ದರೆಂದು ಜಿಲ್ಲಾಧಿಕಾರಿಗಳು ಹೇಳಿದರು. ಡ್ರಿಪ್ ಹಾಕಿಸಿಕೊಂಡಿರುವ ಬಗ್ಗೆ ಜಿಲ್ಲಾಧಿಕಾರಿಗಳು ಕೇಳಿದ್ದಕ್ಕೆ, ಅದರ ಪಾಡಿಗೆ ಅದು ಕೆಲಸ ಮಾಡುತ್ತದೆ. ಆದರೆ, ನಾನು ಶಾಸಕನಾಗಿ ಮತ್ತು ಪ್ರಜಾಪ್ರತಿನಿಧಿಯಾಗಿ ನನ್ನ ಕೆಲಸವನ್ನು ಮಾಡುತ್ತಿದ್ದೇನೆ ಎನ್ನತಕ್ಕಂಥ ವಿಷಯವನ್ನು ಹಿಂದಿನ ರಾತ್ರಿ ಸುಮಾರು 10.30 ಗಂಟೆಗೆ ಹೇಳಿದರು ಎನ್ನತಕ್ಕಂಥ ಮಾಹಿತಿಯನ್ನು ಜಿಲ್ಲಾಧಿಕಾರಿಗಳು ನನಗೆ ಕೊಟ್ಟರು. ನನಗೂ ಮತ್ತು ಅವರಿಗೂ ವ್ಯಕ್ತಿಗತವಾದ ಸಂಬಂಧವಿತ್ತು. ಶ್ರೀಯುತರು ನನ್ನ ಪಕ್ಕದ ಕ್ಷೇತ್ರದವರಾಗಿದ್ದರು. ನಾನು ಮುಖ್ಯಮಂತ್ರಿಯಾದ ಮೇಲೆ ನನ್ನ ಕ್ಷೇತ್ರಕ್ಕೆ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ನನ್ನ ಕ್ಷೇತ್ರವನ್ನು ತಾವು ಸ್ವಲ್ಪ ನೋಡಿಕೊಳ್ಳಬೇಕೆಂದು ನಾನು ಅವರನ್ನು ಕೇಳಿದ್ದುಂಟು. ಆ ಕೆಲಸವನ್ನು ಅವರು ಬಹಳ ಗಂಭೀರವಾಗಿ ಮಾಡುತ್ತಿದ್ದರು. ಇಚ್ಛಾಶಕ್ತಿ ಮತ್ತು ನೈತಿಕ ಶಕ್ತಿಗಳೆರಡರಲ್ಲಿಯೂ ಪಳಗಿದಂಥ ಶ್ರೀ ವೈ.ಕೆ. ರಾಮಯ್ಯನವರ ನಿಧನ ಈ ಸದನವನ್ನು ಬಡ ಮಾಡಿದೆ. ಅವರ ಸ್ಥಾನವನ್ನು ತುಂಬಲಿಕ್ಕೆ ಇನ್ನೂ ಬಹಳ ಕಾಲ ನಾವು ಕಾಯಬೇಕಾಗುತ್ತದೆ. ಶ್ರೀಯುತರು ಹತ್ತಾರು ವರ್ಷಗಳ ಅನುಭವದಲ್ಲಿ ಕಹಿ-ಸಿಹಿಗಳೆಲ್ಲವನ್ನೂ ಕೂಡ ಜೀರ್ಣಿಸಿಕೊಂಡು ಈ ಸದನದ ಸದಸ್ಯರಾಗಿ ಬಂದರು. ಸೌಜನ್ಯಕ್ಕೆ ಮತ್ತೊಂದು ಹೆಸರಾದಂಥ ಶ್ರೀ ಜಿ. ಮಲ್ಲಿಕಾರ್ಜುನಪ್ಪನವರು ನಾನು ಕಳೆದ ನಾಲ್ಕೂವರೆ ವರ್ಷಗಳಲ್ಲಿ ಅವರನ್ನು ಕಂಡ ಮೇಲೆ ಮತ್ತು ಅವರು ಸಂಸತ್ತಿನ ಸದಸ್ಯರಾಗಿ ಅತ್ಯಂತ ಸಮರ್ಪಣ ಭಾವನೆಯಿಂದ ನಮ್ಮ ರಾಜ್ಯದ ಪ್ರತಿನಿಧಿಯಾಗಿ ಮಾನ್ಯ ಪ್ರಧಾನ ಮಂತ್ರಿಯವರನ್ನು ಮತ್ತು ಇತರೇ ಕೇಂದ್ರ ಸಚಿವರನ್ನು ಭೇಟಿ ಮಾಡಲು ನಾನು ಕರೆದುಕೊಂಡು ಹೋಗತಕ್ಕಂಥ ನಿಯೋಗದಲ್ಲಿ ಶ್ರೀಯುತರು ನಮ್ಮ ಜೊತೆ ಬಂದು ಪೂರ್ಣ ಸಹಕಾರವನ್ನು ಕೊಟ್ಟಿದ್ದರು. ಮತ್ತೆ ನಿಷ್ಕಪಟವಾದ ವ್ಯಕ್ತಿತ್ವವನ್ನು ಅವರು ಪಡೆದಿದ್ದರು ಮತ್ತೆ ಅವರಲ್ಲಿ ಬದ್ಧತೆ ಇತ್ತು. ಭೀಮ ಸಮುದ್ರ ಲಕ್ಷ್ಮೀ ಪುತ್ರ ಊರು ದೇಶದಲ್ಲಿಯೇ ದೊಡ್ಡ ಹೆಸರು ಮಾಡಿದ್ದರು. ಕೇವಲ ಅಡಿಕೆ ವ್ಯಾಪಾರದಿಂದ ಈ ಹೆಸರು ಬಂತೆಂದು ನಾನು ಹೇಳುವುದಿಲ್ಲ. ಶೈಕ್ಷಣಿಕವಾಗಿ ಮತ್ತು ಸಾಮಾಜಿಕ ವಲಯದಲ್ಲಿ ಅವರ ಗ್ರಾಮದಲ್ಲಿ ಆಗಿರತಕ್ಕಂಥ ಮಹತ್ತರವಾದ ರೂಪಾಂತರವೇ ಇದಕ್ಕೆ ಕಾರಣವಾಗಿದೆ. ಈ ರೀತಿ ಬದಲಾವಣೆಯಾಗುವುದಕ್ಕೆ

ಶ್ರೀ ಮಲ್ಲಿಕಾರ್ಜುನಪ್ಪನವರು ಸಹ ಒಬ್ಬರು ಕಾರಣ ಎನ್ನತಕ್ಕಂಥದ್ದನ್ನು ಬಹಳ ಕೃತಜ್ಞತೆಯಿಂದ ನಾವು ನೆನೆಸಿಕೊಳ್ಳಬೇಕಾಗಿದೆ. ಅವರ ಸರಳ ಮತ್ತು ಶುದ್ಧ ಬದುಕು ಸಾರ್ವಜನಿಕ ಜೀವನವನ್ನು ಪ್ರವೇಶಿಸುವ ಅಥವಾ ಸಾರ್ವಜನಿಕ ಜೀವನದಲ್ಲಿ ಮುಂದುವರಿಯುವಂಥ ನಮ್ಮೆಲ್ಲರಿಗೂ ಕೂಡ ಒಂದು ಮಾದರಿಯಾಗಬೇಕೆಂದು ನಾನು ಬಯಸುತ್ತೇನೆ. ಶ್ರೀ ಎ.ಆರ್. ಬದರಿನಾರಾಯಣ್‌ರವರು ನನ್ನ ಜೊತೆಯಲ್ಲಿ 1972 ನೇ ಇಸವಿಯಲ್ಲಿ ಮಾನ್ಯ ದೇವರಾಜ ಅರಸುರವರ ಸಂಪುಟದಲ್ಲಿ ವಿದ್ಯಾ ಸಚಿವರಾಗಿದ್ದರು. ನನ್ನ ಮತ್ತು ಶ್ರೀ ಬದರಿನಾರಾಯಣ್‌ರವರ ಸ್ನೇಹ ನನ್ನ ತಂದೆಯವರ ಕಾಲದಲ್ಲಿಯೇ ಪ್ರಾರಂಭವಾಗಿತ್ತು ಮತ್ತೆ ಇಬ್ಬರೂ ಕೂಡ ಪ್ರಜಾಪ್ರತಿನಿಧಿ ಸದಸ್ಯರಾಗಿದ್ದೆವು. ಆ ಸಂದರ್ಭದಲ್ಲಿ ಇವರು ಬದರಿನಾರಾಯಣ ಅಯ್ಯಂಗಾರ್ ಎಂದು ಪ್ರಸಿದ್ಧರಾಗಿದ್ದರು. ಅನಂತರ, ಅಯ್ಯಂಗಾರ್ ಎನ್ನತಕ್ಕಂಥದ್ದನ್ನು ಬಿಟ್ಟು ಕೇವಲ ಬದರಿನಾರಾಯಣ್ ಎಂದು ಈ ಕನ್ನಡ ನಾಡಿನಲ್ಲಿ ಹೆಸರಾಂತ ಒಬ್ಬ ಸಾರ್ವಜನಿಕ ವ್ಯಕ್ತಿಯಾಗಿದ್ದರು, ಮತ್ತು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಅಲ್ಲದೆ, ವಿಧಾನಸಭೆ ಮತ್ತು ವಿಧಾನಪರಿಷತ್‌ನ ಸದಸ್ಯರೂ ಕೂಡ ಆಗಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ನೀತಿಬದ್ಧ ಮತ್ತು ನಿಸ್ಪೃಹ ಜೀವನ ಶೈಲಿಯ ಮಾದರಿಯ ಸಮಾಜ ಸೇವಕರಾಗಿದ್ದರು ಶ್ರೀ ಬದರಿನಾರಾಯಣ ಅವರು ಶ್ರೀಯುತರ ನಿಧನದಿಂದ ಗಾಂಧಿಯುಗದ ಮತ್ತೊಂದು ಕೊಂಡಿ ಕಳಚಿದಂತಾಗಿದೆ.

**11.30 ಎ.ಎಂ**

ಶ್ರೀ ಅಶೋಕ ನಾರಾಯಣ ಪಾಟೀಲ್ ಅವರು ಮಲಪ್ರಭಾ ಸಕ್ಕರೆ ಕಾರ್ಖಾನೆ ಮತ್ತು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕ್‌ನ ಅಧ್ಯಕ್ಷರಾಗಿ, ಬೆಳಗಾಂ ಕೋ-ಆಪರೇಟೀವ್ ಯೂನಿಯನ್ ನಿರ್ದೇಶಕರಾಗಿ ಒಟ್ಟು ಸಹಕಾರಿ ಕ್ಷೇತ್ರದಲ್ಲಿ ಬಹಳ ದೊಡ್ಡ ವ್ಯಕ್ತಿಯಾಗಿ ಇವರು ಮೆರೆದರು. ಕರ್ನಾಟಕ ಮಹಾರಾಷ್ಟ್ರ ಗಡಿ ವಿಚಾರ ಬಂದಾಗಲೂ ಕೂಡ ಜನಪ್ರಿಯರಾಗಿದ್ದರು. ಖಾನಾಪುರ ತಾಲ್ಲೂಕಿನ ಸರ್ವೋತೋಮುಖ ಅಭಿವೃದ್ಧಿಗೆ ಶ್ರೀ ಅಶೋಕ ನಾರಾಯಣ ಪಾಟೀಲ್‌ರವರು ಬಹಳ ಶ್ರಮಿಸಿದರು. ಶ್ರೀ ಎಸ್. ಮುದ್ದರಾಮಯ್ಯನವರು, ಶ್ರೀ ಪಿ.ಎ. ಪಾವಶೆಯವರು, ಶ್ರೀ ಎಸ್.ಬಿ. ವಸ್ತ್ರದ್‌ದವರು, ಶ್ರೀ ಎಸ್. ಗೋವಿಂದಗೌಡರವರು, ಶ್ರೀ ಎಸ್.ಎಸ್. ಕಾಂಬಳೆಯುವರು, ಶ್ರೀ ಕೆ.ಪಿ. ಶಾಂತಮೂರ್ತಿಯವರು ಮತ್ತು ಈ ಸಭೆಯ ಮತ್ತೊಬ್ಬ ಮಾಜಿ ಸದಸ್ಯರಾದ ಶ್ರೀ ಬೆಸಗರಹಳ್ಳಿ ಅಪ್ಪಾಜಿಗೌಡರು, ಶ್ರೀಯುತರು ಸ್ವಾತಂತ್ರ ಹೋರಾಟಗಾರರ ವಂಶದಿಂದ ಮೂಡಿಬಂದ ಒಬ್ಬ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು. ಕಾಂಗ್ರೆಸ್ ಸಂಸ್ಥೆಗೆ ತಮ್ಮ ಇಡೀ ಜೀವಮಾನವನ್ನು ಅವರು ತೇಯ್ದರು. ಒಂದು ಸಮಾಧಾನವೆಂದರೆ, ಅವರು ಒಂದು ಅವಧಿಗಾದರೂ ಕೂಡ ಈ ಸದನದ ಸದಸ್ಯರಾಗಿ ಬಂದದ್ದು, ಅವರು ಸ್ವಾತಂತ್ರ್ಯ ಪೂರ್ವದಲ್ಲಿ ಮಾಡಿದಂತಹ ಕೆಲಸ ಕಾರ್ಯಗಳಿಗೆ ಸಿಕ್ಕ ಜನಮನ್ನಣೆ ಎಂದು ನಾನು ಭಾವಿಸುತ್ತೇನೆ. ಹಲವಾರು ವಿದ್ಯಾಸಂಸ್ಥೆಗಳನ್ನು ಸ್ಥಾಪನೆ ಮಾಡಿದರು, ಮತ್ತು ಸಾರ್ವಜನಿಕ ಜೀವನದಲ್ಲಿ ಒಂದು ರೀತಿ ಮಾದರಿಯಾಗಿ ಬೆಸಗರಹಳ್ಳಿ ಅಪ್ಪಾಜಿಗೌಡರು ತಮ್ಮ ಜೀವನವನ್ನು ನಡೆಸಿದರು. ಶ್ರೀ ಪಿ.ಸಿ. ಶೆಟ್ಟರ್‌ರವರು ಹುಬ್ಬಳ್ಳಿ ಧಾರವಾಡದಿಂದ : ಹಾನಗಲ್ ಭಾಗದಿಂದ ಮೂಡಿಬಂದಂತಹ ಮತ್ತೊಂದು ಪ್ರತಿಭೆ. ಶ್ರೀಯುತರು 1972-77 ರಲ್ಲಿ ನನ್ನ ಜೊತೆಯಲ್ಲಿ ಸದಸ್ಯರಾಗಿದ್ದರು. ಅವರ ಎತ್ತರ ಮತ್ತು ಅವರ ಟೋಪಿ ಇವೆರಡನ್ನು ನಾವು ಗಮನಿಸಿದಾಗ ಕಾರ್ಟೂನ್ ಬರೆಯುವುದಕ್ಕೆ ಬಹಳ ಯೋಗ್ಯವಾದಂತಹ ಒಂದು ಮುಖ. ಅವರಲ್ಲಿ ಅಪಾರವಾದಂತಹ ಕಾನೂನು

ಪಾಂಡಿತ್ಯ ಇತ್ತು. ಅವರು ಕ್ಲಿಷ್ಟಕರವಾದಂತಹ ಸಮಸ್ಯೆಗಳನ್ನು ಆಗಿನ ವಿರೋಧ ಪಕ್ಷದವರು ಈ ಸದನದಲ್ಲಿ ಮಂಡಿಸಿದಂತಹ ಕಾಲದಲ್ಲಿ ನಾವು ಈ ಸಾಲುಗಳಲ್ಲಿ ಕುಳಿತುಕೊಂಡಿದ್ದೆವು, ನಾವು ಯಾವಾಗಲೂ ಶ್ರೀ ಪಿ.ಸಿ. ಶೆಟ್ಟರ್ ಕಡೆಗೆಯೇ ನಾವು ನೋಡುತ್ತಿದ್ದೆವು. ಅದಕ್ಕೆ ರೆಸ್ಪಾನ್ಸ್ ಮಾಡಿ ಎಂದು ಹೇಳುತ್ತಿದ್ದರು. ಅತ್ಯಂತ ಸಮರ್ಥನೀಯವಾಗಿ ವಾದವನ್ನು ಮಂಡಿಸಬಲ್ಲ ಶಕ್ತಿ ಶ್ರೀ ಪಿ.ಸಿ. ಶೆಟ್ಟರ್‌ರವರಲ್ಲಿತ್ತು. ಸಮಾಜವಾದಿ ಚಿಂತನೆ ಅವರ ಜೀವನದ ಒಂದು ಕ್ರಮವಾಗಿತ್ತು ಎಂದು ನನ್ನ ಒಟ್ಟಾರೆ ಚಿಂತನೆ. ಶ್ರೀ ಟಿ. ಚೌಡಯ್ಯನವರು ಶ್ರೀ ಎಂ. ವಿರೂಪಾಕ್ಷಪ್ಪನವರು, ಶ್ರೀಮತಿ ಗಂಗಾಂಬಿಕಾ, ಮಲ್ಲಿಕಾರ್ಜುನಯ್ಯನವರು ಈ ಮೂವರು ಸಾಹಿತ್ಯ ಮತ್ತು ಚಲನಚಿತ್ರರಂಗದಲ್ಲಿ ಅತಿ ಎತ್ತರಕ್ಕೆ ಬೆಳೆದಿದ್ದಂತಹ ವ್ಯಕ್ತಿಗಳಾಗಿದ್ದು ಇಂದು ನಮ್ಮಿಂದ ಕಣ್ಮರೆಯಾಗಿದ್ದಾರೆ. ಶ್ರೀ ಎ.ಎನ್. ಮೂರ್ತಿರಾಯರು ಮಂಡ್ಯ ಜಿಲ್ಲೆಯ ಅಕ್ಕಿ ಹೆಬ್ಬಾಳ್ ಗ್ರಾಮದವರು ಅವರ ಬಗ್ಗೆ ಆಗಾಧವಾದಂತಹ ಹೆಮ್ಮೆ ನಮಗೆ ಇದೆ. ಹಾಗೆಯೇ ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರು ಕಿಕ್ಕೇರಿಯವರು ಅಕ್ಕಿ ಹೆಬ್ಬಾಳ್ ಮತ್ತು ಕಿಕ್ಕೇರಿ ಇವೆರಡು ಕೆ.ಆರ್. ಪೇಟೆಯಲ್ಲಿ ಇರತಕ್ಕಂತಹ ಎರಡು ಹಳ್ಳಿಗಳು. ಈ ಬಗ್ಗೆ ನನಗೆ ಒಂದೊಂದು ಸಾರಿ ಅನ್ನಿಸುತ್ತದೆ, ಆ ಮಣ್ಣಿನ ಫಲ ಆ ಮಣ್ಣಿನಲ್ಲಿ ಏನಿದೆಯೋ ಗೊತ್ತಿಲ್ಲ, ಇಂತಹ ಶ್ರೇಷ್ಠ ಸಾಹಿತಿಗಳನ್ನು ಈ ಕನ್ನಡ ನಾಡಿಗೆ ಆ ನೆಲ ಕೊಟ್ಟಿತು ಎನ್ನತಕ್ಕಂಥದ್ದನ್ನು ದೈನ್ಯತಾ ಭಾವನೆಯಿಂದ ನಾವು ಸ್ಮರಿಸಿಕೊಳ್ಳಬೇಕಾಗಿದೆ. ಶ್ರೀ ಮೂರ್ತಿರಾಯರನ್ನು ನಾನು ಎರಡು ಮೂರು ಸಲ ಭೇಟಿ ಮಾಡಿದ್ದೆ, ಅವರಿಗೆ 100 ವರ್ಷ ತುಂಬಿದಂತಹ ಕಾಲದಲ್ಲಿ ಅವರಿಗೆ ನನ್ನ ಮತ್ತು ರಾಜ್ಯ ಸರ್ಕಾರದ ಗೌರವವನ್ನು ಕೊಡುವುದಕ್ಕೆ ಅವರ ಮನೆಗೆ ಹೋಗಿದ್ದಾಗ, ನನ್ನ ಊರಿನಲ್ಲಿ ರಸ್ತೆ ಹೇಗಿದೆ ಎಂದು ನನ್ನನ್ನು ಕೇಳಿದರು. ಅಂತಹ ಅಗಾಧವಾದಂತಹ ಪ್ರೀತಿವಿಶ್ವಾಸಗಳು ಯಾವ ನೆಲ ಜನ್ಮವನ್ನು ಕೊಟ್ಟಿತೋ ಅದರ ಬಗ್ಗೆ ಅವರಿಗೆ ಕಾಳಜಿ ಮತ್ತು ಆಸಕ್ತಿ ಇತ್ತು ಎಂಬುದಕ್ಕೆ ಇದಕ್ಕಿಂತ ಉತ್ತಮವಾದ ಬೇರೆ ನಿದರ್ಶನಗಳು ಸಿಗುವುದಿಲ್ಲ. ಶ್ರೀಯುತರು ಇಂಗ್ಲೀಷ್ ಮತ್ತು ಕನ್ನಡ ಎರಡರಲ್ಲೂ ಕೂಡ ಪ್ರತಿಭಾನ್ವಿತ ವಾದಂತಹ ಪಾಂಡಿತ್ಯವನ್ನು ಅವರು ಪಡೆದಿದ್ದರು. ನಾವು ವಿದ್ಯಾರ್ಥಿಗಳಾಗಿದ್ದಂತಹ ಕಾಲದಲ್ಲಿ "ಮೈಸೂರು ಮಲ್ಲಿಗೆ" ನಮಗೆ ಅಂತ:ಕರಣಕ್ಕೆ ಹಿಡಿಸತಕ್ಕಂತಹ ಒಂದು ಗೀತಸಂಕಲನವಾಗಿತ್ತು. ಅವರ "ಕಬ್ಬಿಗನ ಕೂಗು" ಮಂಡ್ಯ ಜಿಲ್ಲೆಯ ಮಣ್ಣು ಅದು ಪ್ರತಿಬಿಂಬಿಸತಕ್ಕಂತಹ ವ್ಯಕ್ತಿತ್ವವನ್ನು ಅದು ಚಿತ್ರಣವನ್ನು ಕೊಟ್ಟಿತು. ಅವರು ಗೃಹ ಮಂಡಳಿಯಲ್ಲಿ ಸೂಪರಿಂಟೆಂಡೆಂಟ್ ಆಗಿದ್ದರು, ಆದರೂ ಕೂಡ ಆ ಕಾಲದಲ್ಲಿಯೇ ಅವರ ಜನಪ್ರಿಯ "ಮೈಸೂರು ಮಲ್ಲಿಗೆ" ಪ್ರಕಟಿತವಾಯಿತು. ಶ್ರೀ ಆರ್.ಕೆ. ಸೂರ್ಯನಾರಾಯಣ ಅವರು ಪ್ರಖ್ಯಾತ ವೀಣಾವಾದಕರಾಗಿದ್ದರು. ಬಹಳ ಸಣ್ಣ ವಯಸ್ಸಿನಲ್ಲಿಯೇ ಅವರು ನಮ್ಮನ್ನು ಬಿಟ್ಟುಹೋಗಿದ್ದಾರೆ. ಇವರೆಲ್ಲರಿಗೂ ಕೂಡ ಈ ಸದನದ ಹಾಗೂ ನಮ್ಮ ಪಕ್ಷದ ಪರವಾಗಿ ನಮ್ಮ ತೀವ್ರ ಸಂತಾಪವನ್ನು ಮತ್ತು ಅವರ ಆತ್ಮಗಳಿಗೆ ಶಾಂತಿ ಸಿಗಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**+ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು)** : ಮಾನ್ಯ ಅಧ್ಯಕ್ಷರೆ, ತಾವು ತಂದಂತಹ ಸಂತಾಪ ಸೂಚನೆಗೆ ಬೆಂಬಲವನ್ನು ಕೊಡುತ್ತಾ, ಇವತ್ತು ನಮ್ಮ ಮಧ್ಯದಲ್ಲಿ ಅಗಲಿ ಹೋದಂತಹ ನಾಯಕರುಗಳ ಬಗ್ಗೆ ಕೆಲವೊಂದು ವಿಚಾರಗಳನ್ನು ನಾನು ಹೇಳ ಬಯಸುತ್ತೇನೆ. ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ವೈ.ಕೆ. ರಾಮಯ್ಯನವರು ಒಂದು ವಿಚಾರಗಳನ್ನು ಅವರ ಒಂದು ಅನುಭವದ ಮಾತುಗಳನ್ನು ಕೇಳಿದ್ದೆವು ಇವತ್ತು ನಡೆಯುವಂತಹ ಅಧಿವೇಶನದಲ್ಲಿ ಅವರ ನಮ್ಮ

ಜೊತೆಯಲ್ಲಿ ಇಲ್ಲವೆಂದು ನಮ್ಮ ಮನಸ್ಸಿಗೆ ಬಹಳಷ್ಟು ಆಘಾತವಾಗುತ್ತಿದೆ. ಇತ್ತೀಚಿನ ದಿನಗಳಲ್ಲಿ ಈ ರೀತಿಯಾದಂತಹ ಒಂದು ಜನಪರ ಕಾಳಜಿ ಇದ್ದಂತಹ ವ್ಯಕ್ತಿಗಳನ್ನು ಕಳೆದುಕೊಳ್ಳುವಂತಹದ್ದು ಎರಡನೇ ಬಾರಿಯಾಗಿದೆ. ಕಳೆದ ಅಧಿವೇಶನ ನಡೆದಂತಹ ಸಂದರ್ಭದಲ್ಲಿ ಒಬ್ಬ ಹಿರಿಯ ನಾಯಕರಾದ ಶ್ರೀ ಸಿ. ಭೈರೇಗೌಡರನ್ನು ನಾವು ಕಳೆದುಕೊಂಡಿದ್ದೆವು. ಶ್ರೀ ಸಿ. ಭೈರೇಗೌಡರು ಯಾವ ರೀತಿಯಾಗಿ ಕೃಷಿಯ ಬಗ್ಗೆ, ರೈತರ ಬಗ್ಗೆ ಏನು ಕಳಕಳಿ ಇತ್ತೋ ಅಂತಹದೇ ವ್ಯಕ್ತಿತ್ವದ ಶ್ರೀ ವೈ.ಕೆ. ರಾಮಯ್ಯನವರನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಇದು ಬಹಳ ಆಘಾತ ತರುವಂತಹ ವಿಷಯವೆಂದು ನಾನು ಹೇಳಬಯಸುತ್ತೇನೆ. ಶ್ರೀ ವೈ.ಕೆ. ರಾಮಯ್ಯನವರು ಮಾತನಾಡುವುದಕ್ಕೆ ಎದ್ದು ನಿಂತರೆ ಅವರ ವಿಚಾರಗಳನ್ನು ನಮಗೆ ಕೇಳಬೇಕೆನಿಸುತ್ತದೆ. ಒಂದೊಂದು ಸಂದರ್ಭದಲ್ಲಿ ಅವರು ಮುಂಗೋಪದಿಂದ ಒಂದು ಕ್ಷಣದಲ್ಲಿಯೇ ಸಿಟ್ಟಿಗೆದ್ದುಬಿಡುತ್ತಿದ್ದರು. ಆದರೆ ಆ ಮುಂಗೋಪ ಮತ್ತು ಆ ಸಿಟ್ಟು ಅದು ಸಾತ್ವಿಕವಾದಂತಹ ಸಿಟ್ಟು, ಸಾತ್ವಕ ಮುಂಗೋಪವೆಂದು ನಾವು ತಿಳಿದುಕೊಳ್ಳಬೇಕು. ಅವರಿಗೆ ಏನು ಹೇಳಬೇಕೆಂದು ಅನಿಸುತ್ತದೆಯೋ ಅದನ್ನು ನೇರವಾಗಿ ಹೇಳುವಂತಹದ್ದು, ಬಹಳ ನಿರ್ಭಯವಾದಂತಹ ವ್ಯಕ್ತಿಯಾಗಿದ್ದರು. ಅವರು ಯಾವುದಕ್ಕೂ ಹಿಂದು-ಮುಂದು ನೋಡುತ್ತಿರಲಿಲ್ಲ. ಶ್ರೀಯುತರು ತಾವಿದ್ದ ಸರ್ಕಾರ ತಪ್ಪು ಮಾಡಿದಾಗಲೂ ಕೂಡ ಅದನ್ನು ತಪ್ಪೆಂದು ಹೇಳುವಂತಹ ನಿರ್ಭಯವಾದಂತಹ ವ್ಯಕ್ತಿಯಾಗಿದ್ದರು. ಇವತ್ತಿನ ರಾಜಕೀಯದ ಒಂದು ವ್ಯವಸ್ಥೆಯಲ್ಲಿ ಈ ರೀತಿಯಾಗಿ ವ್ಯಕ್ತಿತ್ವವನ್ನು ಹೊಂದಿದಂತಹ ವ್ಯಕ್ತಿಗಳು ಕಡಿಮೆಯಾಗುತ್ತಿದ್ದಾರೆ. ನಮ್ಮ ಶಾಸಕರು ಆ ಭಾಗದಿಂದ ಬಂದಂತಹವರು ಭಾರತೀಯ ಜನತಾಪಾರ್ಟಿ ಶಾಸಕರಾದ ಶ್ರೀ ಶಿವಣ್ಣನವರು ಆಗಲೇ ಹೇಳುತ್ತಿದ್ದರು. ಶ್ರೀ ಎಂ.ಡಿ. ಲಕ್ಷ್ಮಿ ನಾರಾಯಣ್‌ರವರು, ಅವರ ದಿನದ ಒಂದು ಚಟುವಟಿಕೆ ಮತ್ತು ಜಿಲ್ಲೆಯಲ್ಲಿ ಅವರ ಒಂದು ಕ್ರಿಯಾಶೀಲತೆಯನ್ನು ನೋಡಿಕೊಂಡು ನಮ್ಮ ಪಕ್ಷದ ಒಂದು ಸಭೆಗಳಲ್ಲಿ ಹೇಳುತ್ತಿದ್ದರು. ನಮ್ಮ ಜೊತೆಯಲ್ಲಿ ಮಾತನಾಡುವಾಗಲೂ ಹೇಳುತ್ತಿದ್ದರು. ಅವರಿಗೆ ಇರುವಂತಹ ಒಂದು ಜನಪರ ಮತ್ತು ನಿಜವಾದಂತಹ ರೈತರ ಮತ್ತು ಬಡವರ ನಾಯಕರಾಗಿ ಅವರು ಬೆಳೆದಿದ್ದರು ಎನ್ನುವಂತಹ ಮಾತನ್ನು ಆಗಾಗ್ಗೆ ಹೇಳುತ್ತಿದ್ದರು. ಮತ್ತು ಇನ್ನೊಂದು ಅವರ ಅನುಭವಕ್ಕೆ ತಕ್ಕಂತಹ ಸ್ಥಾನಮಾನ ಸಿಗಲಿಲ್ಲವೇನೋ ಎಂದು ನಮಗೂ ಕೂಡ ಅನಿಸುತ್ತಿದೆ ಮಾನ್ಯ ಮುಖ್ಯಮಂತ್ರಿಗಳು ಈ ದಿಶೆಯಲ್ಲಿ ಒಂದಿಷ್ಟು ತಪ್ಪು ಮಾಡಿದ್ದಾರೆ ಎಂದು ನನಗೆ ಅನ್ನಿಸುತ್ತದೆ. 48 ಜನರನ್ನು ಮಂತ್ರಿಗಳನ್ನಾಗಿ ಮಾಡಿದ್ದಾರೆ. ಈ ಬಗ್ಗೆ ನಾವು ಸ್ವಲ್ಪ ಟೀಕೆ ಮಾಡಿರಬಹುದು, ಆದರೆ ಶ್ರೀ ವೈ.ಕೆ. ರಾಮಯ್ಯನವರನ್ನು ಮಂತ್ರಿಯನ್ನಾಗಿ ಮಾಡಿದ್ದರೆ ನಾವೇನೂ ಟೀಕೆ ಮಾಡುತ್ತಿರಲಿಲ್ಲ. ಒಬ್ಬ ಮಂತ್ರಿಯಾಗಲಿಕ್ಕೆ ಅತ್ಯಂತ ಯೋಗ್ಯವಾದಂತಹ, ಅನುಭವವಿದ್ದಂತಹ ವ್ಯಕ್ತಿ ಶ್ರೀ ವೈ.ಕೆ. ರಾಮಯ್ಯನವರು ಅವರ ಅನುಭವವನ್ನು ನಾವು ತೆಗೆದುಕೊಳ್ಳಬೇಕಾಗಿತ್ತು, ಇವತ್ತು ಕೃಷಿ, ಅದರಲ್ಲಿಯೂ ರೇಷ್ಮೆ ಕೃಷಿಯ ಬಗ್ಗೆ ಆಳವಾದಂತಹ ಅಭ್ಯಾಸವನ್ನು ಮಾಡಿದಂತಹವರು, ನೀರಾವರಿ ಯೋಜನೆಗಳ ಬಗ್ಗೆ ಆಳವಾಗಿ ಅಭ್ಯಾಸ ಮಾಡಿದಂತಹವರು. ಶ್ರೀ ವೈ.ಕೆ. ರಾಮಯ್ಯನವರು. ಅವರು ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ತರಲು ಸತತವಾಗಿ ಹೋರಾಟವನ್ನು ಮಾಡಿದಂತಹ ವ್ಯಕ್ತಿ. ಇಂತಹ ವ್ಯಕ್ತಿತ್ವ ಇದ್ದಂತಹ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ. ಕೇವಲ ಕೆಲವೇ ಅಂತರದಲ್ಲಿ ಶ್ರೀ ವೈ.ಕೆ. ರಾಮಯ್ಯನವರು ಹಾಗೂ ಶ್ರೀ ಭೈರೇಗೌಡ ಅವರುಗಳನ್ನು ಕಳೆದುಕೊಂಡಿರುವುದು ಈ ಸದನಕ್ಕೆ ಬಹಳಷ್ಟು ಕೊರತೆಯಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯನವರ ದಿಟ್ಟತನ, ರಾಜಕೀಯದಲ್ಲಿದ್ದು ನೇರವಾಗಿ ಮಾತನಾಡುವಂತಹ ಸ್ವಭಾವ ಮತ್ತು ರೈತರ ಹಾಗೂ ಬಡವರ ಸಮಸ್ಯೆಗಳ ಬಗ್ಗೆ ಅವರಿಗೆ ಬಹಳಷ್ಟು ಕಳಕಳಿ ಇತ್ತು, ಅದನ್ನು ನಾವು ಜೀವನದಲ್ಲಿ ಅಳವಡಿಕೆ ಮಾಡಿಕೊಂಡರೆ ನಿಜವಾಗಿ ನಾವು ಅವರಿಗೆ ಸಲ್ಲಿಸುವ ಗೌರವ, ಅವರ ಆತ್ಮಕ್ಕೆ ಸಲ್ಲಿಸುವ ಶ್ರದ್ಧಾಂಜಲಿ ಎಂದು ಭಾವಿಸಿ ಅವರ ಕುಟುಂಬಕ್ಕೆ ಅವರ ಅಗಲಿಕೆಯನ್ನು ತುಂಬುವಂತಹ ಧೈರ್ಯವನ್ನು ಕೊಡಲಿ ಎಂದು ನಾನು ಈ ಸಂದರ್ಭದಲ್ಲಿ ನನ್ನ ವಿಚಾರಗಳನ್ನು ವ್ಯಕ್ತಪಡಿಸುತ್ತಿದ್ದೇನೆ. ಮಾನ್ಯ ಶ್ರೀ ಜಿ.ಮಲ್ಲಿಕಾರ್ಜುನಪ್ಪನವರು ದಾವಣಗೆರೆಯ ಸಂಸತ್ ಸದಸ್ಯರಾಗಿದ್ದು, ಅವರು ತಮ್ಮ ವ್ಯವಹಾರದಲ್ಲಿ ತಮ್ಮ ಬುದ್ಧಿವಂತಿಕೆ ಮತ್ತು ತಮ್ಮ ಪರಿಶ್ರಮದಿಂದ ಇವತ್ತು ಸಾಕಷ್ಟು ಮುಂದೆ ಬಂದಿದ್ದು ಸಾಕಷ್ಟು ಶ್ರೀಮಂತರಾಗಿದ್ದರೂ ಅವರಲ್ಲಿ ಅಹಂಕಾರ, ಅವರ ಶ್ರೀಮಂತಿಕೆ ಅವರ ದಿನನಿತ್ಯದ ಚಟುವಟಿಕೆಗಳಲ್ಲಿ ಕಾಣುತ್ತಿರಲಿಲ್ಲ. ಅವರು ಒಬ್ಬ ಸರಳ, ಸೌಜನ್ಯದ ವ್ಯಕ್ತಿಯಾಗಿದ್ದವರು, ಭಾರತೀಯ ಜನತಾ ಪಾರ್ಟಿಯ ನಾಯಕರಾಗಿ ಆ ಭಾಗದಲ್ಲಿ ಸಾಮಾಜಿಕ ಹಾಗೂ ಧಾರ್ಮಿಕ ಚಟುವಟಿಕೆಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡವರು; ಅಷ್ಟೇ ಅಲ್ಲ, ಹಲವಾರು ಶಿಕ್ಷಣ ಸಂಸ್ಥೆಗಳನ್ನು ಕಟ್ಟಿ ಬೆಳೆಸಿದಂತಹ ಕೀರ್ತಿ ಅವರಿಗೆ ಸಲ್ಲುತ್ತದೆ. ಇತ್ತೀಚೆಗೆ ಅವರು ಒಂದು ಬೃಹತ್ತಾದ ಇಂಜಿನಿಯರಿಂಗ್ ಕಾಲೇಜನ್ನು ಹೊಸದಾಗಿ ಕಟ್ಟಿ ಅದರ ಉನ್ನತಿಗಾಗಿ, ಅಭಿವೃದ್ಧಿಗಾಗಿ ಹೆಚ್ಚಿನ ಕಳಕಳಿಯನ್ನು ಅವರಲ್ಲಿ ನಾವು ನೋಡುತ್ತಿದ್ದೆವು. ಇಂತಹ ಒಬ್ಬ ಸರಳ ಹಾಗು ಸಜ್ಜನ ವ್ಯಕ್ತಿಯಾದ ಶ್ರೀ ಮಲ್ಲಿಕಾರ್ಜುನಪ್ಪನವರನ್ನು ನಾವು ಕಳೆದುಕೊಂಡಿರುವುದರಿಂದ ಸಮಾಜ ಸಾಕಷ್ಟು ಬಡವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇನ್ನು ಶ್ರೀ ಎ. ಆರ್. ಬದರಿನಾರಾಯಣ ಅವರು ಹಳೆಯ ಕಾಲದ ರಾಜಕಾರಣ, ಗಾಂಧೀಜಿಯವರ ಆದರ್ಶಗಳನ್ನು ತಮ್ಮ ಜೀವನದಲ್ಲಿ ಅಳವಡಿಕೆ ಮಾಡಿಕೊಂಡಿದ್ದರು, ಶಿಕ್ಷಣ ಸಚಿವರಾಗಿ ಉತ್ತಮವಾದಂತಹ ಕೆಲಸಗಳನ್ನು ಮಾಡಿದಂತಹವರು. ಶ್ರೀ ಪಿ.ಸಿ. ಶೆಟ್ಟರ್ ಅವರು ಬಹಳ ಕುಳವಾದಂತಹ ವ್ಯಕ್ತಿತ್ವವುಳ್ಳವರು, ಶ್ರೀ ಬಿ.ಡಿ. ಜತ್ತಿಯವರ ವ್ಯಕ್ತಿತ್ವವಷ್ಟೇ ಸಮಾನಾಂತರ ಹೊಂದಿದ್ದಂತಹ ವ್ಯಕ್ತಿತ್ವ ಇವರದು ಇವರ ವ್ಯಕ್ತಿತ್ವ ನೋಡಿದಾಗ ಶ್ರೀಮಾನ್ ಬಿ.ಡಿ. ಜತ್ತಿಯವರು ನೆನಪಾಗುತ್ತಾರೆ. ಜನರ ಬಗ್ಗೆ ಹೆಚ್ಚು ಕಾಳಜಿ ಹಾಗು ಮುತುವರ್ಜಿ ವಹಿಸಿ ಅವರ ಸಮಸ್ಯೆಗಳ ಬಗ್ಗೆ ಹೆಚ್ಚು ಹೋರಾಟವನ್ನು ಕೊನೆಯ ದಿನಗಳವರೆಗೂ ಮಾಡಿದಂತಹ ವ್ಯಕ್ತಿ. ನಾನು ಕಳೆದ ಬಾರಿ ಶಾಸಕನಾದಾಗ ಅವರು ಸಾಕಷ್ಟು ಸಲ ಶಾಸಕರ ಭವನಕ್ಕೆ ಬರುತ್ತಿದ್ದರು, ಹಾಗೆ ನಮ್ಮ ರೂಮಿಗೂ ಬಂದು ನೀವು ಹೊಸದಾಗಿ ಆರಿಸಿ ಬಂದಂತಹ ಶಾಸಕರು, ಆದರ್ಶವಾದ ರಾಜಕಾರಣವನ್ನು ತಾವು ಪಾಲಿಸಿಕೊಂಡು ಹೋಗಬೇಕೆಂದು ಬುದ್ಧಿವಾದವನ್ನು ಹೇಳುತ್ತಿದ್ದರು. ಅವರು ತಮ್ಮ ಯಾವುದೇ ವೈಯಕ್ತಿಕ ಸಮಸ್ಯೆಯನ್ನು ತೆಗೆದುಕೊಂಡು ಬರುತ್ತಿರಲಿಲ್ಲ. ತಮ್ಮ ಭಾಗದ ರೈತರ, ಜನಸಾಮಾನ್ಯರ ಸಮಸ್ಯೆಗಳಿಗೆ ಪರಿಹಾರ ನಮ್ಮಿಂದ ಸಿಗಲಿ ಎಂದು ಕೆಲವು ಮಾಹಿತಿಗಳನ್ನು ನಮಗೆ ತಂದುಕೊಡುತ್ತಿದ್ದರು. ಈ ರೀತಿಯ ವ್ಯಕ್ತಿತ್ವ ಶ್ರೀ ಪಿ.ಸಿ. ಶೆಟ್ಟರ್ ಅವರದು, ಹೀಗಾಗಿ ಅವರ ಅಗಲಿಕೆಯಿಂದ ಆ ಭಾಗದಲ್ಲಿ, ಸಮಾಜದ ವ್ಯವಸ್ಥೆಯಲ್ಲಿ ಕೊರತೆಯಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮತ್ತು ಅದೇ ರೀತಿಯಲ್ಲಿ ಶ್ರೀ ಅಶೋಕ ನಾರಾಯಣ ಪಾಟೀಲ್ ಅವರು ಸದನದಲ್ಲಿ ಶಾಸಕರಾಗಿದ್ದು, ಹೋರಾಟಗಾರರು, ಆಗಿದ್ದು, ಸಹಕಾರ ರಂಗದಲ್ಲಿ ಹೆಚ್ಚು ಉತ್ಸುಕತೆಯಿಂದ ಕೆಲಸ ಮಾಡಿದಂತಹವರು. ಖಾನಾಪುರದಲ್ಲಿ ಅವರೇ ಕಟ್ಟಿ ಬೆಳೆಸಿದಂಥ ಭಾಗ್ಯಲಕ್ಷ್ಮಿ ಶುಗರ್ ಫ್ಯಾಕ್ಟರಿ ಇವತ್ತು ಮುಚ್ಚುವಂತಹ ಸ್ಥಿತಿಯಲ್ಲಿದೆ. ಅದರ ಪುನಃಶ್ಚೇತನಕ್ಕೆ ವಿಚಾರ

ಮಾಡಬೇಕಾಗುತ್ತದೆ. ಅವರ ಹೋರಾಟ ವ್ಯರ್ಥವಾಗದ ಹಾಗೆ ಸರ್ಕಾರ ಗಮನಹರಿಸಬೇಕು ಎನ್ನುವ ಮಾತನ್ನು ಹೇಳಬಯಸುತ್ತೇನೆ. ಶ್ರೀ ಜಿ.ವಿ. ಅಯ್ಯರ್ ಅವರು, ಬಹಳ ವಿಶೇಷವಾದ ವ್ಯಕ್ತಿತ್ವ ಹೊಂದಿರತಕ್ಕಂತಹವರಾಗಿದ್ದರು. ಏಕೆಂದರೆ ನಾವು ಇವತ್ತು ಅನೇಕ ನಿರ್ಮಾಪಕರು ನಿರ್ದೇಶಕರನ್ನು ಕಾಣುತ್ತೇವೆ. ಆದರೆ ಶ್ರೀ ಜಿ.ವಿ. ಅಯ್ಯರ್ ಅವರ ವ್ಯಕ್ತಿತ್ವವೇ ವಿಶೇಷವಾದದ್ದು, ಅವರು ಒಳ್ಳೆಯ ಕಲಾತ್ಮಕ ಚಿತ್ರಗಳನ್ನು ನಿರ್ಮಾಣ ಮಾಡಿದ್ದರು. ಇವತ್ತಿನ ಸಮಾಜದ ವ್ಯವಸ್ಥೆ, ಚಿತ್ರರಂಗದ ವ್ಯವಸ್ಥೆಯಲ್ಲಿ ಕೇವಲ ಮಸಾಲೆ ಚಿತ್ರಗಳನ್ನು ಮಾಡಿ ಕೋಟ್ಯಾಂತರ ರೂಪಾಯಿಗಳನ್ನು ಗಳಿಸುವುದು ಸಾಮಾನ್ಯವಾಗಿದೆ. ಆದರೆ ಶ್ರೀ ಜಿ.ವಿ. ಅಯ್ಯರ್ ಅವರು ಬರೇ ಹಣ ಮಾಡುವ ಸಲುವಾಗಿ ಚಿತ್ರ ತಯಾರಿಸುವುದಿಲ್ಲ. ಕಲೆಗೆ ಪ್ರೋತ್ಸಾಹ ನೀಡಬೇಕು ಸದಭಿರುಚಿಯುಳ್ಳ ಚಿತ್ರಗಳು ಬರಬೇಕು. ಆ ಒಂದು ದಿಸೆಯಲ್ಲಿ ಜನರನ್ನು ಆಕರ್ಷಿಸುವಂತಹ ವಿಚಾರಗಳನ್ನು, ಭಾರತೀಯ ಸಂಸ್ಕೃತಿಯನ್ನು ಬಿಂಬಿಸುವಂತಹ ವಿಚಾರಗಳನ್ನು ಚಿತ್ರಗಳಲ್ಲಿ ಅಳವಡಿಸಿ ಜನಸಾಮಾನ್ಯರಿಗೆ ಚಿತ್ರಗಳ ಮೂಲಕ ಅವು ತಲುಪಬೇಕು ಎನ್ನುವ ದೃಷ್ಟಿಯಿಂದ ಹಲವಾರು ಕಲಾತ್ಮಕ ಚಲನಚಿತ್ರಗಳನ್ನು ನಿರ್ದೇಶನ ಮಾಡಿದರು, ನಿರ್ಮಾಣವನ್ನು ಕೂಡ ಮಾಡಿದರು. ಹಾಗಾಗಿ ಈ ರೀತಿಯ ಅಪರೂಪದ ವ್ಯಕ್ತಿತ್ವವುಳ್ಳ ವ್ಯಕ್ತಿಗಳು ಇಂದಿನ ವ್ಯವಸ್ಥೆಯಲ್ಲಿ ಸಿಗಲಿಕ್ಕೆ ಸಾಧ್ಯವಿಲ್ಲ. ಅವರ "ಹಂಸಗೀತೆ" ಅತ್ಯಂತ ಕಲಾತ್ಮಕವಾದ ಚಿತ್ರ, ಆ ರೀತಿ ಚಿತ್ರವನ್ನು ಯಾರೂ ನೋಡದೆ ಇರಲಾರರು, ಅಂತಹ ಚಿತ್ರಗಳು ಮನಸ್ಸಿಗೆ ಸಂತೋಷ ತರುವಂತಹವು. ಇಂತಹ ಕಲಾತ್ಮ ಚಿತ್ರಗಳನ್ನು ನಿರ್ಮಾಣ ಮಾಡಿದವರು. ಶ್ರೀ ಜಿ.ವಿ. ಅಯ್ಯರ್ ಅವರು ತಮ್ಮ ಕೊನೆಯ ಉಸಿರು ಇರುವವರೆಗೂ ಇಂತಹ ಚಲನಚಿತ್ರಗಳನ್ನು ತಯಾರು ಮಾಡುವಂತಹ ಕೆಲಸವನ್ನು ಮಾಡಿದರು ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಶ್ರೀ ಕೆ.ಎಸ್. ನರಸಿಂಹಸ್ವಾಮಿ ಅವರ ಹೆಸರು ಹೇಳಿದರೆ ಮೈಸೂರು ಮಲ್ಲಿಗೆಯ ಜೋಡಣೆಯಾಗಿತ್ತೆ ಮೈಸೂರು ಮಲ್ಲಿಗೆ ಅಂದರೆ ಕೆ.ಎಸ್. ನರಸಿಂಹಸ್ವಾಮಿ ಎಂದು ನಾವು ಹೇಳಬಹುದಾಗಿತ್ತು. ಏಕೆಂದರೆ ಕವಿಗಳು ಬರೆದಂತಹ ಪುಸ್ತಕಗಳು, ಕವನ ಸಂಕಲನಗಳು ಇಷ್ಟೊಂದು ಪ್ರಸಿದ್ಧಿಯಾಗುವುದು ಅಪರೂಪ, ಅವರ ಮೈಸೂರು ಮಲ್ಲಿಗೆಯ ಕವನ ಸಂಕಲನವು ಜೀವನದಲ್ಲಿ ತೋರ್ಪಡಿಸುವ ಪ್ರೀತಿಗಳ ಬಗ್ಗೆ ಅತ್ಯಂತ ಕಾವ್ಯಮಯವಾಗಿ ವರ್ಣಿತವಾಗಿದ್ದು ಅತ್ಯಂತ ಜನಪ್ರಿಯವಾಗಲು ಕಾರಣವಾಯಿತು. ಈ ಕವನ ಸಂಕಲನ ಸಾಕಷ್ಟು ಯುವ ಪ್ರೇಮಿಗಳನ್ನು, ಯುವಕರನ್ನು ಆಕರ್ಷಣೆ ಮಾಡಿದಂತಹ ಕವನ ಸಂಕಲನವಾಯಿತೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇಂತಹ ಪ್ರಬುದ್ಧತೆ ಹೊಂದಿದ್ದ ಕವಿ ತಮ್ಮ ಕೊನೆಯ ಉಸಿರು ಇರುವವರೆಗೆ ಕವನಗಳನ್ನು ಬರೆಯುವುದನ್ನು ನಿಲ್ಲಿಸಿರಲಿಲ್ಲ. ಹಾಗಾಗಿ ಇಂಥಾ ಪ್ರಬುದ್ಧ ಕವಿ ಇವತ್ತು ನಮ್ಮೊಂದಿಗಿಲ್ಲ ಎಂದು ಹೇಳಬಯಸುತ್ತೇನೆ. ಶ್ರೀ ಎ.ಎನ್. ಮೂರ್ತಿರಾವ್ ಅವರು ವೈಚಾರಿಕ ಲೇಖನಗಳನ್ನು ಬರೆಯುವಂತಹ ವ್ಯಕ್ತಿತ್ವ ಹೊಂದಿದ್ದಂತಹ ವ್ಯಕ್ತಿ. ಇವರು ಬರೆದ ಕೃತಿ 'ದೇವರು' ಅದನ್ನು ನಾನು ಓದಿದ್ದೇನೆ. ಒಳ್ಳೆಯ ವೈಚಾರಿಕತೆ ಇರುವಂತಹ ಪುಸ್ತಕ, ಅದು ಸಾಕಷ್ಟು ವಿವಾದಗಳನ್ನು ಸೃಷ್ಟಿ ಮಾಡಿರಬಹುದು, ಆದರೆ ಅದು ಪ್ರತಿಯೊಬ್ಬರೂ ಓದಲೇ ಬೇಕಾದಂತಹ ಪುಸ್ತಕ. ಇವತ್ತು ದೇವರಲ್ಲಿ ನಂಬಿಕೆಯ ಅವಾಂತರಗಳು ದೇವರನ್ನು ನಂಬಬೇಕೋ, ಬೇಡವೋ, ಜನರಲ್ಲಿ ಈ ಬಗ್ಗೆ ಯಾವ ರೀತಿ ಪದ್ಧತಿಗಳಿವೆ, ಅಭಿಪ್ರಾಯವಿದೆ ಅದರ ಬಗ್ಗೆ ಸಾಕಷ್ಟು ವಿಚಾರಗಳು, ಪ್ರಚೋದನೆಗಳನ್ನು ಹೊಂದಿರುವಂತಹ ಕೃತಿ. ವೈಚಾರಿಕತೆಯ ಭಾವನೆಗಳಿರುವ ವ್ಯಕ್ತಿಗಳು ಓದುವಂತಹ ಅವಶ್ಯಕತೆ

ಹೊಂದಿರುವಂತಹ ಹಲವಾರು ವೈಚಾರಿಕ ಲೇಖನಗಳನ್ನು ಅವರು ರಚಿಸಿದ್ದಾರೆ. ಇದರ ಬಗ್ಗೆ ಹೆಚ್ಚು ಚಿಂತನೆ ಮಾಡುವಂತೆ ಲೇಖನಗಳನ್ನು ಸಹ ರಚಿಸಿದ್ದಾರೆ. ಹೀಗೆ ನೂರಾರು ವರ್ಷಗಳ ಕಾಲ ಬಾಳಿದ ಶ್ರೀ ಎ.ಎನ್. ಮೂರ್ತಿರಾವ್ ಅವರು ತಮ್ಮ ವಿಚಾರಗಳಿಂದಲೇ, ವೈಚಾರಿಕ ಲೇಖನಗಳಿಂದಲೇ ಕರ್ನಾಟಕದಲ್ಲಿ ಪ್ರಸಿದ್ಧಿಯಾಗಿದ್ದರು. ಎಂದು ಈ ಸಂದರ್ಭದಲ್ಲಿ ಹೇಳಿ ಅದೇ ರೀತಿ ಇನ್ನೂ ಇತರೆ ಧುರೀಣರಾದ ಸರ್ವಶ್ರೀ ಪಿ.ಎ. ಪಾವಶೆ ಯವರು ಎಸ್. ಮುದ್ದರಾಮಯ್ಯನವರು ವಸ್ತ್ರದರವರು, ಶಾಂತಮೂರ್ತಿಯವರು, ಕಾಂಬಳೆಯವರು, ಅಪ್ಪಾಜಿಗೌಡರು, ವಿರೂಪಾಕ್ಷನವರು ಗೋವಿಂದಗೌಡರು, ಶ್ರೀಮತಿ ಗಂಗಾಂಬಿಕ ಮಲ್ಲಿಕಾರ್ಜುನಯ್ಯ ಅವರು ಶ್ರೀ ಚೌಡಯ್ಯನವರು ಹಾಗೂ ಶ್ರೀ ಸೂರ್ಯನಾರಾಯಣರವರು, ಇವರೆಲ್ಲರೂ ಹಲವಾರು ಸಾಮೂಹಿಕ, ರಾಜಕೀಯ ಮತ್ತು ಇತರೆ ರಂಗಗಳಲ್ಲಿ ಕೆಲಸ ಮಾಡಿ ತಮ್ಮ ಕಳಕಳಿಯನ್ನು ವ್ಯಕ್ತಪಡಿಸಿದಂತಹ ವ್ಯಕ್ತಿಗಳನ್ನು ನಾವು ಇವತ್ತಿನ ದಿವಸ ಕಳೆದುಕೊಂಡಿದ್ದೇವೆ. ಅವರುಗಳ ಅಗಲುವಿಕೆಯಿಂದ ಆದಂಥ ಆಘಾತವನ್ನು ಭರಿಸುವಂತಹ ಶಕ್ತಿ ಅವರ ಕುಟುಂಬಗಳಿಗೆ ಸಿಗಲಿ ಮತ್ತು ಇವರೆಲ್ಲರ ಆತ್ಮಗಳಿಗೆ ಶಾಂತಿಯನ್ನು ದೇವರು ದಯಪಾಲಿಸಲಿ ಎಂದು ನಾನು ಪ್ರಾರ್ಥನೆ ಮಾಡಿ ಇವತ್ತೇನು ತಾವು ಸಂತಾಪ ಸೂಚನೆಯನ್ನು ತಂದಿದ್ದೀರಿ, ಇದಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನು ಮುಗಿಸುತ್ತಿದ್ದೇನೆ.

**+ ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :** ಮಾನ್ಯ ಸಭಾಧ್ಯಕ್ಷರೇ, ತಾವು ಈ ಸದನದಲ್ಲಿ ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಮ್ಮ ಪಕ್ಷದ ವತಿಯಿಂದ ಬೆಂಬಲವನ್ನು ಸೂಚಿಸುತ್ತಾ ಮೃತರ ಬಗ್ಗೆ ಕೆಲವು ಮಾತುಗಳನ್ನು ಹೇಳಬೇಕೆಂದು ನಾನು ಇಲ್ಲಿ ನಿಂತಿದ್ದೇನೆ. ಕಳೆದ ಅಧಿವೇಶನಕ್ಕೂ ಈ ಅಧಿವೇಶನಕ್ಕೂ ನಡುವೆ ಸುಮಾರು ಹದಿನೈದು ಮಂದಿ ಸಾರ್ವಜನಿಕ ಮುಖಂಡರುಗಳು ತೀರಿಕೊಂಡಿದ್ದಾರೆ. ಮತ್ತು ಸುಮಾರು ನಾಲ್ಕು ಜನ ಗಣ್ಯ ವ್ಯಕ್ತಿಗಳು ಸಾಹಿತ್ಯ ಹಾಗೂ ಬೇರೆ ಬೇರೆ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದವರು ದಿವಂಗತರಾಗಿದ್ದಾರೆ. ಆದರೆ ಇವರಲ್ಲಿ ಶ್ರೀ ವೈ.ಕೆ. ರಾಮಯ್ಯ ಅವರ ಸಾವು ಮಾತ್ರ ನಿಜವಾಗಿಯೂ ನಂಬಲಾಗದೇ ಇರುವಂತಹ ಸಾವು. ಕಳೆದ ಅಧಿವೇಶನದಲ್ಲೂ ನಮ್ಮ ದಿವಂಗತ ಭೈರೇಗೌಡರ ಸಾವಿನಿಂದ ಇದೇ ರೀತಿಯ ಆಘಾತವಾಯಿತು. ಈ ಅಧಿವೇಶನದಲ್ಲೂ ಅದೇ ತರಹ ಕಾಣಿಸುತ್ತಿದೆ. ಇವರಿಬ್ಬರ ಸಾವು ಸಹ ಒಂದೇ ರೀತಿಯ ಸಾವು ಎಂದು ನಾನು ಅಂದುಕೊಂಡಿದ್ದೇನೆ. ಶ್ರೀ ವೈ.ಕೆ. ರಾಮಯ್ಯನವರು ನಮಗೆಲ್ಲರಿಗೂ ಗೊತ್ತಿರುವ ಹಾಗೆ ಒಬ್ಬ ಸಾಮಾಜಿಕ ಕಳಕಳಿ ಇರತಕ್ಕಂಥ, ಸಾರ್ವಜನಿಕ ಬದ್ಧತೆ ಇರತಕ್ಕಂಥ ಒಬ್ಬ ನಿಷ್ಠೂರವಾದಿ. ಅವರು ಒಬ್ಬ ಅಭಿವೃದ್ಧಿಯ ಹರಿಕಾರ. ಅವರಿಗೆ ಏನು ಅನ್ನಿಸುತ್ತದೆಯೋ ಅದನ್ನು ನಿಷ್ಠೂರವಾಗಿ ಹೇಳತಕ್ಕಂಥ, ಒರಟಾಗಿ ಹೇಳತಕ್ಕಂಥ ಸ್ವಭಾವದವರಾಗಿದ್ದರು. ಅವರು ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಯಾಗಿ ಒಂದು ಬಾರಿ 1985ರಲ್ಲಿ ನಮ್ಮ ಜತೆಯಲ್ಲಿ ಮಂತ್ರಿಗಳೂ ಸಹ ಆಗಿದ್ದರು. ಎರಡನೇ ತಾರೀಖು ನಾನು ಹಾಸನದ ಕಡೆಯಿಂದ ಬರುವಾಗ ಅವರ ಜತೆ ಮಾತನಾಡಬೇಕು ಎಂದು ನನಗೆ ಅನ್ನಿಸಿತ್ತು ರಸ್ತೆಯ ಬದಿಯಲ್ಲಿ ಅವರ ಮನೆಯಿತ್ತು; ನಾನು ಅಲ್ಲಿ ನಿಂತುಕೊಂಡು ಅವರು ಇದ್ದಾರೆಯೇ ಎಂದು ಕೇಳಿದೆ. ಆದರೆ ಆವತ್ತು ಅವರು ಒಂದು ಕಾರ್ಯಕ್ರಮಕ್ಕೆ ಹೋಗಿದ್ದಾರೆ, ಬರುವುದಕ್ಕೆ ರಾತ್ರಿಯಾಗಬಹುದು ಎಂದು ಹೇಳಿದರು. ಆಮೇಲೆ ನಾನು ಬಂದುಬಿಟ್ಟೆ. ಬೆಳಿಗ್ಗೆ ನೋಡುತ್ತೇನೆ, ಶ್ರೀ ವೈ.ಕೆ. ರಾಮಯ್ಯನವರು ತೀರಿಕೊಂಡಿದ್ದಾರೆ ಎಂದು ಸುದ್ದಿಬಂತು ನಾನು ಮತ್ತೆ ವಾಪಸ್ಸು

ಹೋದೆ. ನನಗೆ ಬಹಳ ದುಃಖವಾಯಿತು. ಅವರದ್ದು ಮತ್ತು ನನ್ನದು ಸ್ವಲ್ಪ ಮಟ್ಟಿಗೆ ಒಂದೇ ಸ್ವಭಾವ. ಅಲ್ಲಿಗೆ ಹೋದಾಗ ಜನರೂ ಕೂಡ ಹೇಳುತ್ತಿದ್ದರು, ಏನೆಂದರೆ ನೀವಿಬ್ಬರೂ ಬಹಳ ಆತ್ಮೀಯರು, ಅದಕ್ಕೇ ತಕ್ಷಣ ಬಂದಿದ್ದೀರಿ ಎಂದು. ಅವರು ಅಭಿವೃದ್ಧಿ ಕೆಲಸಗಳಲ್ಲಿ ಎಷ್ಟು ಒರಟಾಗಿದ್ದರು ಎಂದು ಹೇಳಿದರೆ ಅಧಿಕಾರಿಗಳನ್ನು ಅವಾಚ್ಯ ಶಬ್ದಗಳಿಂದ ಬಯ್ಯುತ್ತಿದ್ದರು ಮತ್ತು ಈ ಕೆಲಸ ಆಗಲೇಬೇಕು. ಆ ಕೆಲಸ ಆಗಲೇಬೇಕೆಂದು ತರಟೆಗೆ ತೆಗೆದುಕೊಳ್ಳುತ್ತಿದ್ದರು. ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು, ಅವರು ಪರಿಸರ ವಿಚಾರದಲ್ಲಿ ಬಹಳ ಆಸಕ್ತಿ ಇದ್ದಂಥವರಾಗಿದ್ದರು ಎಂದು ಒಂದು ಮಾತನ್ನು ಹೇಳಿದರು. ನನಗೆ ಒಂದು ಜ್ಞಾಪಕಕ್ಕೆ ಬರುತ್ತಿದೆ. 1985 ರಲ್ಲಿ ಅವರು ರೇಷ್ಮೆ ಇಲಾಖೆಯ ಸಚಿವರಾಗಿದ್ದರು ಮತ್ತು ನಾನು ಆವಾಗ ತೋಟಗಾರಿಕೆ ಸಚಿವನಾಗಿದ್ದೆ. ಅವರು ನನ್ನಲ್ಲಿಗೆ ಬಂದು "ಸೋಮಶೇಖರ್, ನನ್ನ ಕ್ಷೇತ್ರದಲ್ಲಿ ಸಾಲು ಮರಗಳನ್ನು ನೆಡೆಸತಕ್ಕಂಥ ಒಂದು ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇನೆ. ಕುಣಿಗಲ್‌ನಿಂದ ಮದ್ದೂರುವರೆಗೆ ಸಾಲುಮರಗಳನ್ನು ನೆಡಸಬೇಕೆಂದು ಯೋಜನೆಯನ್ನು ಹಾಕಿಕೊಂಡಿದ್ದೇನೆ. ತಾವು ಬರಬೇಕು ಮತ್ತು ನನ್ನ ಜತೆಯಲ್ಲಿ ಇರಬೇಕು ಮತ್ತು ನೀವೇ ಅದನ್ನು ಉದ್ಘಾಟನೆ ಮಾಡಬೇಕು" ಎಂದು ಹೇಳಿದರು. ನಾನು ಆವಾಗ ಇನ್ನೂ ಸ್ವಲ್ಪ ಚಿಕ್ಕ ವಯಸ್ಸಿನವನು. ಸುಮಾರು ಇಪ್ಪತ್ತು ಕಿಲೋಮೀಟರ್‌ನಷ್ಟು ನಾನು ಮತ್ತು ಅವರು ಆವತ್ತು ನಡೆದಿದ್ದೇವೆ. ಆ ದಿನ ನನ್ನ ಕಾಲು ಊದಿಕೊಂಡಿದ್ದನ್ನು ಮರೆಯುವುದಕ್ಕೇ ನನಗೆ ಸಾಧ್ಯವಾಗುವುದಿಲ್ಲ. ಎಣ್ಣೆಸವರಿ, ನಿಂಬೆಹಣ್ಣು ಸವರಿಕೊಳ್ಳುವಷ್ಟು ಕಾಲುಗಳು ಊದಿಕೊಂಡಿದ್ದವು. ಇವತ್ತು ಆ ಮರಗಳೆಲ್ಲಾ ಚೆನ್ನಾಗಿ ಕಾಣಿಸುತ್ತಿವೆ. ಇದೊಂದೇ ಅಲ್ಲ, ಅವರು ರೇಷ್ಮೆ ಇಲಾಖೆಯಲ್ಲೂ ಸಹ ಹೆಚ್ಚಿನ ಕೆಲಸ ಮಾಡಿದ್ದಾರೆ. ಅದು ಒಂದು ಸಾರಿ ಬಿಟ್ಟರೆ ಮತ್ತೆ ಅವರಿಗೆ ಮಂತ್ರಿಯಾಗತಕ್ಕಂಥ ಅವಕಾಶ ಸಿಗಲಿಲ್ಲ. ಕಳೆದ ನಾಲ್ಕು ವರ್ಷಗಳಲ್ಲಿ ಬಹುಶ: ಅವರು ಬಹಳ ಆಸೆಯನ್ನು ಇಟ್ಟುಕೊಂಡಿದ್ದರು. ನನಗೆ ಒಂದೊಂದು ಸಾರಿ ಅನ್ನಿಸುತ್ತಿತ್ತು. ಏಕೆಂದರೆ ಅನೇಕ ಅಧಿವೇಶನಗಳಲ್ಲಿ ಅವರಾಡಿದ ಮಾತುಗಳನ್ನು ನೋಡಿದರೆ ಆಡಳಿತ ಪಕ್ಷವನ್ನು ಎಷ್ಟರಮಟ್ಟಿಗೆ ಅವರ ಸ್ವಭಾವಕ್ಕೆ ಅನುಗುಣವಾಗಿ ಅಷ್ಟೊಂದು ಸಮರ್ಥನೆ ಮಾಡಿಕೊಳ್ಳುತ್ತಿದ್ದಂಥಾದ್ದು ನನಗಂತೂ ಹಿಡಿಸಲಿಲ್ಲ. ಈ ನಾಲ್ಕು ವರ್ಷಗಳಲ್ಲಿ ಯಾವುದೋ ಒಂದು ಆಸೆ ಅವರನ್ನು ಕಾಡುತ್ತಿತ್ತು ಎಂದು ಅನ್ನಿಸುತ್ತದೆ. ಯಾವುದಾದರೂ ಒಂದು ಸಾರಿ ಮಂತ್ರಿಯಾಗಬಹುದೋ ಏನೋ ಎಂದು ಹೇಳಿ ಅವರ ಆತ್ಮಕ್ಕೆ ವಿರುದ್ಧವಾಗಿ ಎಷ್ಟೋ ಸಾರಿ ತಮ್ಮ ಸರ್ಕಾರವನ್ನು ಅವರು ಸಮರ್ಥನೆ ಮಡಿಕೊಂಡಿದ್ದರು. ಆದರೆ ಕೊನೆಗೆ ಇದು ಸಾಧ್ಯವಾಗಲಿಲ್ಲ ಎಂದು ಹೇಳಿ ಅವರಿಗೆ ಅನ್ನಿಸಿದ್ದರಿಂದ ಬಹಳ ಆಘಾತ ಆಗಿರಬಹುದು ಎಂದು ನನಗೆ ಅನ್ನಿಸುತ್ತದೆ. ಈ ಬಗ್ಗೆ ನಮ್ಮ ವಿರೋಧ ಪಕ್ಷದ ನಾಯಕರ ಅಭಿಪ್ರಾಯವನ್ನು ನಾನೂ ಕೂಡ ಹೊಂದಿದ್ದೇನೆ. ಅವರನ್ನು ಮಂತ್ರಿಯಾಗಿ ಮಾಡಿದ್ದರೆ ಬಹುಶ: ಇನ್ನೂ ಕೆಲಕಾಲ ಈ ಮಾನಸಿಕ ನೋವಿನಿಂದ ಹೊರಬಂದು ಬದುಕುತ್ತಿದ್ದರೇನೋ ಎಂದು ನಾನು ಅಂದುಕೊಂಡಿದ್ದೇನೆ. ಮತ್ತು ಅನೇಕ ಜನಪರ ಹೋರಾಟಗಳಲ್ಲಿ ಅವರು ಭಾಗಿಯಾಗಿದ್ದಾರೆ. ಅದು ಹೇಮಾವತಿ ನೀರನ್ನು ಒದಗಿಸತಕ್ಕಂಥಾದ್ದು ಇರಬಹುದು, ಬೇರೆ ಹೋರಾಟಗಳೂ ಇರಬಹುದು. ಹೀಗೆ ಅವರು ಈ ರೈತ ಸಮುದಾಯಕ್ಕೆ ಗ್ರಾಮೀಣ ಜನತೆಗೆ ಒಬ್ಬ ಮುಖಂಡರಾಗಿದ್ದರು. ನಮ್ಮ ಪಕ್ಷದಲ್ಲಿದ್ದ ಭೈರೇಗೌಡರು ಈಗಾಗಲೇ ಹೋಗಿಬಿಟ್ಟಿದ್ದಾರೆ ಮತ್ತು ಈಗ ಶ್ರೀ ವೈ.ಕೆ. ರಾಮಯ್ಯನವರು. ಇವರಿಬ್ಬರೂ ಸಹ ನಮ್ಮ ರಾಜ್ಯದಲ್ಲಿ ಉತ್ತಮವಾದಂಥ ಭವಿಷ್ಯವನ್ನು ಹೊಂದಿದಂಥ ನಾಯಕರಾಗಿದ್ದರು. ಇವತ್ತು ನಾವು

ಅವರನ್ನು ಕಳೆದುಕೊಂಡಿದ್ದೇವೆ. ಶ್ರೀ ವೈ.ಕೆ. ರಾಮಯ್ಯನವರ ಮರಣ ರೈತ ಸಮುದಾಯಕ್ಕೆ ಮತ್ತು ಗ್ರಾಮೀಣ ಜನರಿಗೆ ಬಹಳ ನಷ್ಟವನ್ನು ಉಂಟುಮಾಡಿದೆ. ಅವರ ಕುಟುಂಬ ಈ ದುಃಖವನ್ನು ಭರಿಸುವಂತಾಗಲಿ ಎಂದು ನಾನು ದೇವರಲ್ಲಿ ಕೇಳುತ್ತಿದ್ದೇನೆ. ಅದೇ ರೀತಿ ಶ್ರೀ ಎ.ಆರ್. ಬದರಿನಾರಾಯಣ ಅವರು ಬಹಳ ಹಿರಿಯರು. ನಾನು ವಿದ್ಯಾರ್ಥಿ ಮುಖಂಡನಾಗಿದ್ದಾಗ 1972–73ರಲ್ಲಿ ಮೈಸೂರಿನಲ್ಲಿ ಅವರು ಶಿಕ್ಷಣ ಮಂತ್ರಿಗಳಾಗಿ ಬಂದಿದ್ದರು. ನಾವು ಒಂದು ಸಭೆಗೆ ಅವರನ್ನು ಕರೆಸಿದ್ದೆವು. ನಾವು ಅವರನ್ನು ಸನ್ಮಾನ ಮಾಡಿದಾಗ ಅವರು ಬಹಳ ಚೆನ್ನಾಗಿ ಮಾತನಾಡುತ್ತಿದ್ದರು ಮತ್ತು ಆಶೀರ್ವಾದ ಮಾಡುತ್ತಿದ್ದರು ನೀವೆಲ್ಲಾ ಯುವಕರು ಮುಂದೆ ಬರಬೇಕು ಎಂದು. ನಂತರ 1987 ರಲ್ಲಿ ನಾನು ಶಿಕ್ಷಣ ಮಂತ್ರಿಯಾಗಿದ್ದಾಗ ಒಂದು ಸಾರಿ ನಾನು ಅವರಿಗೆ ಫೋನ್ ಮಾಡಿದ್ದೆ. ಹಿಂದೆ ನಾನು ಅವರನ್ನು ಭೇಟಿ ಮಾಡಿದ್ದು ಅವರಿಗೆ ಜ್ಞಾಪಕ ಇತ್ತು ಅವರು ಹೇಳಿದರು "ಸೋಮಶೇಖರ್, ನಾನು ನಿಮ್ಮ ಮನೆಗೆ ಬರಬೇಕೆಂದು ಇದ್ದೇನೆ, ಕೆಲವು ವಿಚಾರಗಳನ್ನು ಚರ್ಚೆ ಮಾಡಬೇಕು" ಎಂದು ಅದಕ್ಕೆ ನಾನು "ಇಲ್ಲ ಸರ್, ನಾನೇ ನಿಮ್ಮ ಮನೆಗೆ ಬರುತ್ತೇನೆ" ಎಂದು ಹೇಳಿ ಅವರ ಮನೆಗೆ ಹೋಗಿದ್ದೆ. ಹಾಗೆ ಯಾರಾದರೂ ಮನೆಗೆ ಹೋದಾಗ ಅವರು ಯಾವಾಗಲೂ ದ್ರಾಕ್ಷಿ ಮತ್ತು ಖರ್ಜೂರವನ್ನು ಕೊಡುತ್ತಿದ್ದರು. ಹಾಗೆ ನಮಗೂ ಕೂಡ ಕೊಟ್ಟು ಬಹಳ ಪ್ರೀತಿಯಿಂದ ಕೆಲವು ಸಮಸ್ಯೆಗಳನ್ನು ಹೇಳಿದರು. ಅವರು ಹಿರಿಯ ಕಾಂಗ್ರೆಸ್ಸಿಗರು ಮತ್ತು ಬಹಳ ಸೌಜನ್ಯಶೀಲರು. ಅವರನ್ನು ಇವತ್ತು ನಾವು ಕಳೆದುಕೊಂಡಿದ್ದೇವೆ. ಮತ್ತೆ ಕಾಂಬಳೆಯವರು ಪಾಪ, ಬಹಳ ಯುವಕರು. ನಮ್ಮ ಜತೆಗೆ ಮೊದಲನೇ ಸಾರಿಗೆ 1983ರಲ್ಲಿ ಶಾಸಕರಾಗಿ ಬಂದರು. ಅವರು ದಲಿತ ಕುಟುಂಬಕ್ಕೆ ಸೇರಿದವರಾಗಿದ್ದರು. ಕೇವಲ ಎರಡು ವರ್ಷಗಳ ಕಾಲ ಅವರು ಶಾಸಕರಾಗಿ 1985 ರಲ್ಲಿ ಚುನಾವಣೆಯಲ್ಲಿ ಪರಾಭವರಾಗಬೇಕಾಗಿ ಬಂದು ಎರಡೇ ವರ್ಷ ಶಾಸಕರಾಗಿದ್ದು ಕೇವಲ ಐವತ್ತು ವರ್ಷದೊಳಗೇನೇ ಅವರು ತೀರಿಕೊಂಡಿದ್ದಾರೆ. ಇದರಿಂದ ನನಗೆ ಬಹಳ ದುಃಖವಾಗಿದೆ. ಇನ್ನು ಶ್ರೀ ಕೆ.ಪಿ ಶಾಂತಮೂರ್ತಿ ಅವರು ಸಹ 1983 ರಲ್ಲಿ ಸ್ವತಂತ್ರವಾಗಿ ಸ್ಪರ್ಧಿಸಿ ಶಾಸಕರಾಗಿ ಆವಾಗ ನಮಗೆ ಬೆಂಬಲ ಕೊಟ್ಟವರಾಗಿದ್ದರು. ಶ್ರೀ ಅಪ್ಪಾಜಿಗೌಡರು ಮದ್ದೂರು ಕ್ಷೇತ್ರದವರಾಗಿದ್ದು ನಾವಿಬ್ಬರೂ ಜತೆಯಾಗಿಯೇ 1985 ರಲ್ಲಿ ಶಾಸಕರಾಗಿದ್ದೆವು. ಆಗ ನಾನು ಮಂತ್ರಿಯಾಗಿದ್ದೆ. ಅವರು ಬಹಳ ಸೌಜನ್ಯಶೀಲರು ಮತ್ತು ಒಳ್ಳೆಯ ಕುಟುಂಬದಿಂದ ಬಂದಂಥವರು. ಅವರು ಸಹ ತೀರಿಕೊಂಡಿರತಕ್ಕಂಥದ್ದು ಬಹಳ ನೋವಾಗಿದೆ. ಮತ್ತೆ ಶ್ರೀ ಪಿ.ಸಿ. ಶೆಟ್ಟರ್ ಅವರು. ನನಗೆ ಅವರ ಪರಿಚಯ 1978–79ರಲ್ಲಿ ಆಯಿತು. ನಾವು ಆವಾಗ ತಾನೇ ರಾಜಕೀಯ ಕ್ಷೇತ್ರಕ್ಕೆ ಪ್ರವೇಶ ಮಾಡಿದ್ದೆವು. ಅವರು ಸಮಾಜವಾದಿ ತತ್ವದಲ್ಲಿ ಯಾವತ್ತೂ ರಾಜಿಯಾಗಿರಲಿಲ್ಲ. ಮೇಲ್ವರ್ಗದಿಂದ ಬಂದಿದ್ದರೂ ಕೂಡ ಸಮಾಜವಾದದಲ್ಲಿ, ಲೋಹಿಯಾ ತತ್ವದಲ್ಲಿ ಯಾವತ್ತೂ ರಾಜಿಯಾದವರಲ್ಲ ಅವರು ಅಷ್ಟೇ ಹಾಸ್ಯ ಸ್ವಭಾವದವರಾಗಿದ್ದರು. ಅವರು ಒಂದೊಂದು ಸಾರಿ ಹಾಸ್ಯ ಚಟಾಕಿ ಹಾರಿಸಿದಾಗ ಎಲ್ಲರಿಗೂ ನಗು ಬರುತ್ತಿತ್ತು. ಅವರನ್ನೂ ಕೂಡ ಇಂದು ನಾವು ಕಳೆದುಕೊಂಡಿದ್ದೇವೆ. ಮತ್ತೆ ನಮ್ಮ ಶ್ರೀ ಜಿ. ಮಲ್ಲಿಕಾರ್ಜುನಪ್ಪನವರು ಲೋಕಸಭಾ ಸದಸ್ಯರಾಗಿದ್ದವರು. ಅವರ ಜತೆಗೆ ನನಗೆ ಹೆಚ್ಚು ಸಂಪರ್ಕ ಇಲ್ಲದಿದ್ದರೂ ಅವರ ಬಗ್ಗೆ ಕೇಳಿದ್ದೇನೆ. ಒಂದೆರಡು ಸಲ ಅವರನ್ನು ಭೇಟಿ ಮಾಡಿದಾಗ ಬಹಳ ಸೌಜನ್ಯದಿಂದ ಮಾತನಾಡಿದ್ದರು. ನಮಗೆ ಅವರ ಬಗ್ಗೆ ಬಹಳ ಗೌರವ ಇದೆ. ಇನ್ನು ಚಲನಚಿತ್ರ ರಂಗದಲ್ಲಿ ಶ್ರೀ ಜಿ.ವಿ. ಅಯ್ಯರ್ ಅವರು ಇಡೀ ಕರ್ನಾಟಕದಲ್ಲಿ ಅವರದ್ದೇ ಆದ ಛಾಪನ್ನು ಬಿಟ್ಟುಹೋದಂಥವರು. ಶ್ರೀ ಜಿ.ವಿ. ಅಯ್ಯರ್ ಎಂದರೆ ಅವರು

ನಿರ್ದೇಶನ ಮಾಡಿದಂತಹ ಮತ್ತು ನಿರ್ಮಾಣ ಮಾಡಿದಂತಹ ಚಿತ್ರಗಳು ಬಹಳ ಹೆಸರುವಾಸಿಯಾಗಿ ಇವತ್ತಿಗೂ ಜನಮನದಲ್ಲಿ ಉಳಿದಿವೆ. ಅವರ ಅಗಲುವಿಕೆ ಚಲನಚಿತ್ರ ರಂಗಕ್ಕೆ ತುಂಬಲಾರದ ನಷ್ಟವಾಗಿದೆ. ಶ್ರೀ ಕೆ.ಎಸ್. ನರಸಿಂಹಸ್ವಾಮಿಯವರು ಮತ್ತು ಶ್ರೀ ಎ.ಎನ್. ಮೂರ್ತಿರಾಯರು ಇವರೆಲ್ಲರೂ ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಕೊಡುಗೆ ಕೊಟ್ಟವರು ಮತ್ತು ಇವರು ಕವನಗಳನ್ನು ಬರೆಯುತ್ತಿದ್ದಂಥವರು. ಬಹಳ ಆಗಾಧವಾದ ಸೇವೆಯನ್ನು ಇವರು ಸಾಹಿತ್ಯ ಕ್ಷೇತ್ರಕ್ಕೆ ಮಾಡಿದ್ದಾರೆ. ಇವರ ಅಗಲುವಿಕೆ ಸಹ ನಮ್ಮ ರಾಜ್ಯಕ್ಕೆ ತುಂಬಲಾರದ ನಷ್ಟವಾಗಿದೆ. ತಾವೇನು ಸಾಂಪ್ರದಾಯಿಕವಾಗಿ ಈ ದಿವಂಗತರ ಮನೆಗಳಿಗೆ ಸಂತಾಪ ಸೂಚಕನೆಗಳನ್ನು ಕಳಿಸುವುದಕ್ಕೆ ಇದನ್ನು ಮಂಡಿಸಿದ್ದೀರಿ, ಇದಕ್ಕೆ ನನ್ನ ಪಕ್ಷದ ಬೆಂಬಲವನ್ನು ವ್ಯಕ್ತಪಡಿಸಿ ತಮಗೆ ವಂದನೆಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

**12.00** ಪಿ.ಎಂ

+ **ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ)** : ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನ ಮತ್ತು ಈ ಅಧಿವೇಶನದ 6 ತಿಂಗಳ ಅವಧಿಯಲ್ಲಿ ಕರ್ನಾಟಕ ರಾಜ್ಯವು ಸಾಹಿತ್ಯ ಕ್ಷೇತ್ರದಲ್ಲಿ ರಾಜಕೀಯ ಕ್ಷೇತ್ರದಲ್ಲಿ, ಸಾರ್ವಜನಿಕ ಕ್ಷೇತ್ರದಲ್ಲಿ ಸುಮಾರು 19–20 ಜನರನ್ನು ಕಳೆದುಕೊಂಡು ಬಡವಾಗಿದೆ. ಇದರ ಹಿನ್ನೆಲೆಯಲ್ಲಿ ತಾವು ಮಂಡಿಸಿರತಕ್ಕಂಥ ಸಂತಾಪ ಸೂಚನೆಗೆ ನಾನು ನಮ್ಮ ಪಕ್ಷದ ವತಿಯಿಂದ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತ ಮಾಡಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುವುದರ ಜೊತೆಗೆ ಈ ಧೀಮಂತ ವ್ಯಕ್ತಿಗಳ ಕುಟುಂಬಕ್ಕೆ ಈ ದುಃಖವನ್ನು ಭರಿಸತಕ್ಕಂಥ ಶಕ್ತಿಯನ್ನು ಭಗವಂತ ಕೊಡಲಿ ಎಂದು ಪ್ರಾರ್ಥಿಸುತ್ತೇನೆ. ಈ ಸದನದಲ್ಲಿ ನಾವು ಸಂತಾಪ ಸೂಚನೆಯನ್ನು ವ್ಯಕ್ತ ಮಾಡುವಂತಹ ಸನ್ನಿವೇಶದಲ್ಲಿ ಸ್ವಲ್ಪಮಟ್ಟಿಗಾದರೂ ಸಹ ನಮ್ಮ ಮನೆಯವರು ಇಂಥಾದ್ದಕ್ಕೆ ಬಹಳ ಪ್ರಖ್ಯಾತಿಯಾಗಿದ್ದರು ಈ ನಾಡಿನಲ್ಲಿ, ಈ ರಾಷ್ಟ್ರದಲ್ಲಿ ಎಂದು ಅವರನ್ನು ನನೆಸಿಕೊಳ್ಳತಕ್ಕಂಥಾದ್ದಕ್ಕೆ ತಾವು ಒಂದು ಸತ್ಸಂಪ್ರದಾಯಕ್ಕೆ ತಕ್ಕಂತೆ ತಾವು ನಿರ್ಣಯವನ್ನು ಮಂಡನೆ ಮಾಡಿದ್ದೀರಿ, ಅಲ್ಲದೆ ಎಲ್ಲಾ ವಿಚಾರಗಳನ್ನು ಸಹ ಅಂದರೆ ಬಹುತೇಕ ಗಣ್ಯವ್ಯಕ್ತಿಗಳು ಮಾಡಿರತಕ್ಕಂಥ ಸಾಧನೆಯನ್ನು ಈ ಸಲ ತಮ್ಮ ಸಂತಾಪ ಸೂಚನೆಯಲ್ಲಿ ವಿವರಣೆ ರೂಪದಲ್ಲಿ ಕೊಟ್ಟಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ವಿಶೇಷವಾಗಿ ಶ್ರೀ ವೈ.ಕೆ. ರಾಮಯ್ಯನವರ ಬಗ್ಗೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಅವರ ಪಕ್ಕದ ಕ್ಷೇತ್ರದ ಅವರ ಸಂಬಂಧ, ಅವರ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದಾರೆ. ಶ್ರೀ ವೈ.ಕೆ. ರಾಮಯ್ಯನವರು ಇಷ್ಟು ಬೇಗ ಸಾಯುತ್ತಾರೆ, ಮಾನ್ಯ ಭೈರೇಗೌಡರು ಸಾಯುತ್ತಾರೆಂದು ನಾವ್ಯಾರೂ ನಿರೀಕ್ಷೆ ಮಾಡಿರಲಿಲ್ಲ. ಶ್ರೀ ವೈ.ಕೆ. ರಾಮಯ್ಯನವರ ಬಗ್ಗೆ ಹೇಳುವುದಾದರೆ, 1974–75ರಿಂದ ನಾವು ಅವರು ಒಂದು ಕುಟುಂಬದ ಸದಸ್ಯರಿದ್ದಂತೆ ಇದ್ದೆವು. ಬಹುಶಃ ಅವರು ತಮ್ಮೆಲ್ಲ ಭಾವನೆಗಳನ್ನು ನನ್ನ ಜೊತೆಯಲ್ಲಿ ಹಂಚಿಕೊಳ್ಳುತ್ತಿದ್ದರು. ನನ್ನ ಮಟ್ಟಿಗೆ ಅವರ ಹೇಳುವುದಾದರೆ ಅವರ ಸಾವು ಒಂದು ರೀತಿಯಲ್ಲಿ ಸಿಡಿಲಿನಂತೆ ವೈಯಕ್ತಿಕವಾಗಿ ಬಹಳ ದೊಡ್ಡ ಆಘಾತವನ್ನು ನನಗೆ ಉಂಟುಮಾಡಿದೆ. ಅವರು ಕಾಂಗ್ರೆಸ್ ಸೇರುವ ಮುನ್ನ ಕರ್ನಾಟಕದಲ್ಲಿ ಜನತಾ ಪರಿವಾರ, ಜನತಾಪಕ್ಷದ ಅಧಿಕಾರದಲ್ಲಿ ಅಂದರೆ ಕಾಂಗ್ರೆಸ್ಸೇತರ ಸರ್ಕಾರ ಇರಬೇಕಾದರೆ ಶ್ರೀ ವೈ.ಕೆ. ರಾಮಯ್ಯನವರ ಕಾಣಿಕೆಯನ್ನು ಅಧಿಕಾರ ಅನುಭವಿಸಿರತಕ್ಕಂಥ ನಾವ್ಯರೂ ಸಹ ಮರೆಯುವುದಕ್ಕೆ ಆಗುವುದಿಲ್ಲ. ಶ್ರೀ ವೈ.ಕೆ. ರಾಮಯ್ಯನವರು ವಿಶೇಷವಾಗಿ ತುಮಕೂರು ಜಿಲ್ಲೆಗೆ ಹೇಮಾವತಿ ನದಿ ನೀರು ಬರಬೇಕಾದರೆ ಬಹಳ ಹೋರಾಟವನ್ನು ಮಾಡಿದರು. ಅನೇಕರು ರಾಜಕೀಯ ಕಾರಣಕೋಸ್ಕರ ಹೋರಾಟವನ್ನು ಮಾಡುತ್ತಾರೆ. ಆದರೆ

ಮಾನ್ಯ ವೈ.ಕೆ. ರಾಮಯ್ಯನವರು ನೀರಾವರಿ ಬಗ್ಗೆ ಮತ್ತು ನೀರು ಬಳಕೆಯ ಬಗ್ಗೆ ರೈತರಿಗೆ ಆಗಬೇಕಾದಂತಹ ಕೆಲಸಗಳ ಬಗ್ಗೆ ಅಪಾರವಾದ ಕಾಳಜಿಯನ್ನು ಇಟ್ಟುಕೊಂಡಿದ್ದಂತಹ ಒಬ್ಬ ಮುಖಂಡರಾಗಿದ್ದರು. ಅವರು 1983ನೇ ಸಾಲಿಗೆ ಮೊದಲನೇ ಸಲ ಗೆದ್ದು ಬಂದಂತಹ ಸಂದರ್ಭದಲ್ಲಿ ನಮ್ಮ ರಾಜ್ಯದ ಹೌಸಿಂಗ್ ಬೋರ್ಡ್‌ನ ಅಧ್ಯಕ್ಷರಾಗಿದ್ದರು. ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿ ಅವರು ಬಹಳ ಪ್ರಾಮಾಣಿಕವಾಗಿ ಅಲ್ಲಿನ ಆಡಳಿತವನ್ನು ಸರಿಪಡಿಸುವುದರಲ್ಲಿ ಪ್ರಯತ್ನ ಮಾಡುವುದರ ಜೊತೆಗೆ ಗ್ರಾಮೀಣ ಪ್ರದೇಶದಲ್ಲಿ ಹೌಸಿಂಗ್ ಬೋರ್ಡ್‌ನ ಮುಖಾಂತರವಾಗಿ ಮನೆಗಳನ್ನು ಕಟ್ಟಿಸಿಕೊಡಬೇಕು, ಸೈಟ್‌ಗಳನ್ನು ಕೊಡಬೇಕು ಎನ್ನುವುದಕ್ಕೆ ಒತ್ತನ್ನು ಕೊಟ್ಟಂತಹ ಒಬ್ಬ ನಾಯಕರು. ಇದಾದ ನಂತರ 1985ನೇ ಇಸವಿಯಲ್ಲಿ ಅವರು ಗೆದ್ದ ನಂತರ ಅವರು ರೇಷ್ಮೆ ಇಲಾಖೆಯ ಮಂತ್ರಿಗಳಾಗಿದ್ದರು. ಅವರು ವಿಶೇಷವಾಗಿ ಈ ರೇಷ್ಮೆ ಬೆಳೆ ಗೂಡು ಏನಿದೆ, ಆ ಗೂಡು, ವಿಶೇಷವಾಗಿ ಗೂಡಿನ ಬೀಜ, ಅದು ಮಾಗಡಿ, ಕುಣಿಗಲ್, ಆನೇಕಲ್ ಈ ಮೂರು ತಾಲ್ಲೂಕುಗಳಲ್ಲಿ ಬೆಳೆಯತಕ್ಕಂಥಾದ್ದು. ಈ ಮೂರು ತಾಲ್ಲೂಕುಗಳ ರೈತರಿಗೆ ಸಹ ರೇಷ್ಮೆ ಮಾರುಕಟ್ಟೆಯಲ್ಲಿ ಆಗತಕ್ಕಂಥ ವ್ಯತ್ಯಾಸದಿಂದಾಗಿ ಅನುಕೂಲವಾಗುತ್ತಿರಲಿಲ್ಲ. ಅಂತಹ ಸಂದರ್ಭದಲ್ಲಿ ಮಾನ್ಯ ವೈ.ಕೆ. ರಾಮಯ್ಯನವರು ಈ ರೇಷ್ಮೆ ವ್ಯವಸಾಯದ ಬಗ್ಗೆ ವಿಶೇಷವಾದ ಕಾಳಜಿಯನ್ನು ವಹಿಸಿ ಎರಡು ಕೆಲಸಗಳನ್ನು ಮಾಡಿರತಕ್ಕಂಥಾದ್ದನ್ನು ನಾನು ನೆನೆಸಿಕೊಳ್ಳುವುದಕ್ಕೆ ಬಯಸುತ್ತೇನೆ. ಒಂದು ಅವರಿಗೆ ಸಬ್ಸಿಡಿಯನ್ನು ಕೊಡತಕ್ಕಂಥಾದ್ದು, ಆ ಕೆಲಸವನ್ನು ಮಾಡಿದರು. ಅದಾದ ನಂತರ ರೈತರು ರೀಲಿಂಗ್ ಹೌಸ್ ಕಟ್ಟಲಿಕ್ಕೆ ಅವರು ಮೊದಲನೇ ಬಾರಿಗೆ ಹೌಸಿಂಗ್ ಬೋರ್ಡ್ ಅಧ್ಯಕ್ಷರಾಗಿದ್ದಾಗ ಪ್ರಯತ್ನ ಮಾಡಿದ ಅನುಭವದ ಆಧಾರದ ಮೇಲೆ, ಅವರು ರೇಷ್ಮೆ ಮಂತ್ರಿಗಳಾಗಿದ್ದಾಗ ರೇಷ್ಮೆ ಬೆಳೆಯುತಕ್ಕಂಥ ಎಲ್ಲಾ ರೈತರಿಗೆ ರೇಷ್ಮೆ ಮನೆಗಳನ್ನು ಕಟ್ಟಿಕೊಳ್ಳಲಿಕ್ಕೆ ಸಾಲವನ್ನು ಕೊಡತಕ್ಕಂಥ ಕಾರ್ಯಕ್ರಮವನ್ನು ಪ್ರಥಮ ಭಾರಿಗೆ ಕರ್ನಾಟಕ ರಾಜ್ಯದಲ್ಲಿ ತಂದಂತಹ ಕೀರ್ತಿ ಶ್ರೀ ವೈ.ಕೆ. ರಾಮಯ್ಯನವರಿಗೆ ಸಲ್ಲಬೇಕಾಗುತ್ತದೆ. ರಾಜಕೀಯದಲ್ಲಿ ವ್ಯತ್ಯಾಸಗಳು ಬರುತ್ತವೆ, ಆದರೆ ವ್ಯತ್ಯಾಸಗಳು ಬಂದಂತಹ ಸಂದರ್ಭದಲ್ಲಿ ಅವರು ಅದನ್ನು ಕೊನೆಯ ಹಂತದವರೆಗೂ ಸಹ ತೆಗೆದುಕೊಂಡು ಹೋಗುತ್ತಿರಲಿಲ್ಲ. ರೇಷ್ಮೆ ಬೆಳೆಗಾರರಿಗೆ ಕೇಂದ್ರ ಸರ್ಕಾರದಿಂದ ಅನ್ಯಾಯವಾಗಿದೆ ಎನ್ನತಕ್ಕಂಥ ಒಂದು ಸನ್ನಿವೇಶದಲ್ಲಿ ಬಹಳ ದೊಡ್ಡ ಹೋರಾಟವನ್ನು ಮಾನ್ಯ ವೈ.ಕೆ. ರಾಮಯ್ಯನವರು ಕರ್ನಾಟಕ ರಾಜ್ಯದಲ್ಲಿ ಮಾಡಿದರು. ಆಗ ಅವರು ಕಾಂಗ್ರೆಸ್ ಪಕ್ಷವನ್ನು ಸೇರಿದ್ದರು. ಆದರೆ ಎಲ್ಲಾ ಪಕ್ಷದವರನ್ನು ಸೇರಿಸಿಕೊಂಡು ಬಹಳ ದೊಡ್ಡ ಹೋರಾಟವನ್ನು ಮಾಡಿದಂತಹ ಕೀರ್ತಿ ಮಾನ್ಯ ವೈ.ಕೆ. ರಾಮಯ್ಯನವರಿಗೆ ಸಲ್ಲಬೇಕಾಗುತ್ತದೆ. ಅದಾದ ನಂತರ ನೀರಾವರಿ ವಿಚಾರದಲ್ಲಿ ಅದು ಕೃಷ್ಣಾ ನದಿ ಇರಲಿ, ಕಾವೇರಿ ನದಿ ನೀರಿನ ವಿಚಾರ ಇರಲಿ ನೀರಿನ ವಿಚಾರ ಬಂದಂತಹ ಸಂದರ್ಭದಲ್ಲಿ ಮಾನ್ಯ ವೈ.ಕೆ. ರಾಮಯ್ಯನವರಿಗೆ ಇದ್ದಂತಹ ಕಾಳಜಿ ಒಂದು ಆದರ್ಶವಾಗಿರತಕ್ಕಂಥ ವಿಚಾರ ಎನ್ನುವುದನ್ನು ನಾನು ಇಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದೆಲ್ಲಕ್ಕಿಂತ ಮುಖ್ಯವಾಗಿ ಮಾನ್ಯ ಅಧ್ಯಕ್ಷರೇ, ಒಬ್ಬ ಮಾನವತಾವಾದಿಯಾಗಿದ್ದರು ಮಾನ್ಯ ವೈ.ಕೆ. ರಾಮಯ್ಯನವರು. ಶ್ರೀ ಕುವೆಂಪುರವರ ವಿಚಾರಧಾರೆಗಳನ್ನು ಸಾಮಾನ್ಯವಾದ ಮನುಷ್ಯನ ಹತ್ತಿರಕ್ಕೆ ತೆಗೆದುಕೊಂಡು ಹೋಗಬೇಕು, ಕುವೆಂಪುರವರನ್ನು ನೆನೆಸಿಕೊಳ್ಳಬೇಕೆಂದು ಹೇಳಿ ಈ ಶತಮಾನೋತ್ಸವವನ್ನು ಆಚರಣೆ ಮಾಡತಕ್ಕಂಥ ಸಂದರ್ಭದಲ್ಲಿ, ಶತಮಾನೋತ್ಸವ ಸಮಿತಿ ಮಾಡಿ ಸರ್ಕಾರದವರೂ ಸಹ ಒಂದು ಒಳ್ಳೆಯ ಕೆಲಸವನ್ನು ಮಾಡಿದರು. ಅವರ ಮೇಲೆ ಒಂದಷ್ಟು

ಜವಾಬ್ದಾರಿಯನ್ನು ವಹಿಸಿ ಅದರಲ್ಲಿ ಭಾಗವಹಿಸತಕ್ಕಂಥ ಒಂದು ಅವಕಾಶವನ್ನು ಕೊಟ್ಟಿದ್ದು ಅವರ ಆತ್ಮಕ್ಕೆ ಬಹಳ ತೃಪ್ತಿಯಾಗಿದ್ದಂತಹ ವಿಚಾರ. ನಾನೂ ಸಹ ಅವರ ಒಂದು ಅಂತ್ಯಕ್ರಿಯೆಯಲ್ಲಿ ಭಾಗವಹಿಸಲಿಕ್ಕೆ ಹೋಗಿದ್ದೆ. ಮಾನ್ಯ ಟಿ.ಬಿ. ಜಯಚಂದ್ರರವರು ಇದ್ದರು, ಮಾನ್ಯ ಪರಮೇಶ್ವರ್‌ರವರು ಇದ್ದರು. ಎಲ್ಲರೂ ಸಹ ಇದ್ದರು, ಅನೇಕ ಗಣ್ಯ ವ್ಯಕ್ತಿಗಳು ಇದ್ದರು. ಅಲ್ಲಿನ ಜನಗಳು ಮಾತನಾಡುತ್ತಿದ್ದುದನ್ನು ನೋಡಿ ನಮಗೆ ಹೊರ ನೋಟಕ್ಕೆ ಶ್ರೀ ವೈ ಕೆ. ರಾಮಯ್ಯನವರು ಒಬ್ಬ ಕಠಿಣ ಹೃದಯದ ಮನುಷ್ಯ ಎಂದು. ಅನಿಸುತ್ತಿತ್ತು. ಏನಪ್ಪ ಇಷ್ಟೊಂದು ಕಠಿಣವಾಗಿ ಮಾತನಾಡುತ್ತಾರೆ ಎಂದು ವಿಶೇಷವಾಗಿ ತಮಗೆ ಗೊತ್ತಿರಬಹುದು, ಮಾನ್ಯ ನಾಗಪ್ಪನವರ ಕೊಲೆಯಾದಂತಹ ಸಂದರ್ಭದಲ್ಲಿ ಅವರು ಒಂದು ವಿಚಾರವನ್ನು ಹೇಳಿದರು. ಅವರು ಎಷ್ಟೊಂದು ಮನ ನೊಂದಿದ್ದರು ಎಂದು ಹೇಳಿದರೆ, ಪರಮ ಪೂಜ್ಯ ಶ್ರೀ ಸುತ್ತೂರು ಮಠಾಧೀಶರಿಗೆ ಒಂದು ಪತ್ರ ವನ್ನು ಬರೆದಿದ್ದರು. ನಾನು ವಿಧಾನ ಸಭೆಯಲ್ಲಿ ಇತ್ತೀಚೆಗೆ ಮಾತನಾಡುವಾಗ ಈ ರೀತಿ ಮಾತನಾಡಿದೆ, ಆದರೆ ಆ ರೀತಿ ಅಭಿಪ್ರಾಯ ನನಗೆ ಇರಲಿಲ್ಲ. ಅದು ತಪ್ಪು ಅರ್ಥವಾಯಿತು ಎಂದು ಕ್ಷಮೆಯನ್ನು ಸಹ ಕೇಳಿದ್ದರು. ಕ್ಷಮೆಯನ್ನೂ ಸಹ ಕೇಳುವಂತಹ ವ್ಯಕ್ತಿತ್ವ ಮಾನ್ಯ ವೈ.ಕೆ. ರಾಮಯ್ಯನವರದ್ದು ಆಗಿತ್ತು. ಅಲ್ಲದೆ ಅವರು ರಾಜಕೀಯ ಕ್ಷೇತ್ರದಲ್ಲಿ ಬಹಳ ಅಪರೂಪದ ಪ್ರಾಮಾಣಿಕ ವ್ಯಕ್ತಿಯಾಗಿದ್ದರು. ಇಂತಹ ಒಬ್ಬ ಮುಖಂಡರ ಸಾವು ಕರ್ನಾಟಕದ ರೈತರ ಹೋರಾಟಕ್ಕೆ ಆಗಿರತಕ್ಕಂಥ ಒಂದು ಹಿನ್ನಡೆ ಎಂದು ನಾನು ತಿಳಿದುಕೊಂಡಿದ್ದೇನೆ. ಶ್ರೀಯುತರ ಸಾವು ತುಮಕೂರು ಜಿಲ್ಲೆಯ ಅಭಿವೃದ್ಧಿಗೆ ಆಗಿರತಕ್ಕಂಥ ದೊಡ್ಡ ಲಾಸು ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ನನಗೆ ಬಂದ ಮಾಹಿತಿಗಳ ಪ್ರಕಾರವಾಗಿ ಅವರಿಗೆ ವೈಯಕ್ತಿಕ ಜೀವನದಲ್ಲಿ ಅನೇಕ ಸಮಸ್ಯೆಗಳು ಇದ್ದವು. ರಾಜಕೀಯ ಕ್ಷೇತ್ರದಲ್ಲಿ ಅವರು ಅನೇಕ ಸಮಸ್ಯೆಗಳನ್ನು ಎದುರಿಸಿದರು. 20-25 ವರ್ಷಗಳ ಕಾಲ ಕಾಂಗ್ರೆಸ್ಸನ್ನು ವಿರೋಧ ಮಾಡಿ ಮತ್ತೆ ಆ ಪಕ್ಷಕ್ಕೆ ಸೇರತಕ್ಕಂಥಾದ್ದು ಬಹಳ ಕಷ್ಟದ ಕೆಲಸ 25-30 ವರ್ಷಗಳ ಕಾಲ ಒಂದು ಪಕ್ಷದಲ್ಲಿ ಒಂದು ಪರಿಸರದಲ್ಲಿ, ಒಂದು ಸಂಸಾರದಲ್ಲಿದ್ದು, ಬೇರೆ ಸಂಸಾರವನ್ನು ಕಟ್ಟಬೇಕೆಂದರೆ ಅಷ್ಟೊಂದು ಸುಲಭವಲ್ಲ. ಆ ಒಂದು ಮನೆಯಲ್ಲಿ ಅವರು ಹೋಗಲಿಕ್ಕೆ ಪ್ರಯತ್ನ ಮಾಡಿದರು. ಆದರೂ ಮಾನ್ಯ ವೈ.ಕೆ. ರಾಮಯ್ಯನವರಿಗೆ ಸುಖ ಸಿಗಲಿಲ್ಲ. ಅದು ಅಷ್ಟೇ ಅಲ್ಲ, ಅವರು ಸಾಯುವಂತಹ ಸಂದರ್ಭದಲ್ಲಿ ತಮ್ಮ ಆಸ್ತಿಯ ಒಂದು ಭಾಗವನ್ನು ಅವರು ಸಾರ್ವಜನಿಕ ಕ್ಷೇತ್ರಕ್ಕೋಸ್ಕರ ಅವರು ಕಟ್ಟಿರುವಂತಹ ಶಿಕ್ಷಣ ಸಂಸ್ಥೆಗೆ ಕೊಡತಕ್ಕಂಥಾ ಒಂದು ಇಂಗಿತ ಇತ್ತು ಎಂದು ಯಾರಿಗೂ ಸಹ ಗೊತ್ತಿರಲಿಲ್ಲ. ಆದರೆ ಅವರು ಒಂದು ವಿಲ್ ಬರೆದಿದ್ದಾರೆ ಎನ್ನುವುದನ್ನು ನಾನು ಕೇಳಲ್ಪಟ್ಟಿದ್ದೇನೆ. ಹೀಗಾಗಿ ಬಹುಮುಖದ ವ್ಯಕ್ತಿತ್ವವನ್ನು ಹೊಂದಿದ್ದಂತಹ ಒಬ್ಬ ಅತ್ಯಂತ ಸ್ನೇಹಮಯಿ ಮತ್ತು ಒಬ್ಬ ಪ್ರಾಮಾಣಿಕ ರಾಜಕಾರಣಿಯನ್ನು ಕಳೆದುಕೊಂಡಿದ್ದೇವೆ. ಮಾನ್ಯ ವೈ.ಕೆ. ರಾಮಯ್ಯನವರ ನಿಧನದಿಂದ ನಮ್ಮ ರಾಜ್ಯಕ್ಕೆ ಅಪಾರವಾದ ನಷ್ಟ ಎನ್ನುವುದನ್ನು ನಾನು ಹೇಳಲಿಕ್ಕೆ ಬಯಸಿ, ಮಾನ್ಯ ಜಿ. ಮಲ್ಲಿಕಾರ್ಜುನಪ್ಪನವರು, ಅವರು ಸಂಸತ್ ಸದಸ್ಯರಾಗಿ ಬಿ.ಜೆ.ಪಿ.ಯಿಂದ ಆರಿಸಿ ಬಂದಂತಹವರು. ಬಹುಶಃ ನಮ್ಮ ಶ್ರೀ ಬಿ. ಟಿ. ರುದ್ರಪ್ಪನವರು ಮತ್ತು ಶ್ರೀ ಮಲ್ಲಿಕಾಜುನಪ್ಪನವರ ಎರಡು ಕುಟುಂಬಗಳು ಎಂದು ಹೇಳಿದರೆ ಭರಮಸಾಗರದಲ್ಲಿ ಅಡಿಕೆ ವ್ಯಾಪಾರಕ್ಕೆ ಬಹಳ ಪ್ರಸಿದ್ಧವಾಗಿದ್ದಂತಹ ಕುಟುಂಬಗಳು. ಶ್ರೀ ಮಲ್ಲಿಕಾರ್ಜುನಪ್ಪನವರ ಬಹಳ ಶ್ರೀಮಂತ ಕುಟುಂಬದಿಂದ ಬಂದಿರತಕ್ಕಂಥವರು. ಆದರೆ ಅವರು ಯಾವತ್ತೂ ಸಹ ಶ್ರೀಮಂತರು ಎನ್ನುವುದನ್ನು ತೋರಿಸಿ

ಕೊಂಡಿರಲಿಲ್ಲ. ಸಾಮಾನ್ಯ ಜನಗಳ ಸಮಸ್ಯೆಗಳಿಗೆ ಸ್ಪಂದಿಸತಕ್ಕಂಥ ವ್ಯಕ್ತಿ ಮಾನ್ಯ ಮಲ್ಲಿಕಾರ್ಜುನಪ್ಪನವರು ಆಗಿದ್ದರು. ಈ ಸದನದ ಸದಸ್ಯರಾಗಿದ್ದಂತಹ ಮಾನ್ಯ ಅಶೋಕ್ ನಾರಾಯಣ್ ಪಾಟೀಲ್‌ರವರು, ಇವರ ನಿಧನ ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ರಾಜಕೀಯವಾಗಿ ನಾವು ಯಾವತ್ತೂ ಸಹ ಮಹಾರಾಷ್ಟ್ರ ಏಕೀಕರಣ ಸಮಿತಿ ಇರಬಾರದು ಎಂದು ಹೇಳಬಯಸುತ್ತೇವೆ. ಕಾರಣ ಮಹಾರಾಷ್ಟ್ರ ಏಕೀಕರಣ ಸಮಿತಿಯವರ ವಿಚಾರಗಳು ಸರಿ ಇರಲಿಲ್ಲ. ಮಹಾರಾಷ್ಟ್ರ ಏಕೀಕರಣ ಸಮಿತಿ ಸಂಪೂರ್ಣವಾಗಿ ಜನಗಳ ಬೆಂಬಲವನ್ನು ಕಳೆದುಕೊಂಡಿದೆ. ಅದರ ಕೀರ್ತಿ, ಮಾನ್ಯ ಅಶೋಕ್ ನಾರಾಯಣ್ ಪಾಟೀಲರಿಗೆ ಸಲ್ಲಿಸಬೇಕಾಗುತ್ತದೆ. ಮಹಾರಾಷ್ಟ್ರ ಏಕೀಕರಣ ಸಮಿತಿ ಅಧಿಕೃತ ಅಭ್ಯರ್ಥಿಯ ವಿರುದ್ಧ ಅವರು ಗೆದ್ದು ಎರಡನೇ ಬಾರಿಗೆ ವಿಧಾನ ಸಭೆಗೆ ಬಂದಿದ್ದರು. ಖಾನಾಪುರ ಕ್ಷೇತ್ರದ ಬೆಳವಣಿಗೆಗೆ ಬಹಳ ಪ್ರಾಮಾಣಿಕವಾಗಿ ಅವರು ಕೆಲಸವನ್ನು ಮಾಡಿದ್ದರು. ಅದು ಗಡಿನಾಡಿನ ಪ್ರದೇಶ. ಮಹಾರಾಷ್ಟ್ರಕ್ಕೂ ಖಾನಾಪೂರಕ್ಕೂ ಇರತಕ್ಕಂಥ ವ್ಯತ್ಯಾಸ ಒಂದು ಅರ್ಧ ಕಿಲೋಮೀಟರ್ ಒಂದು ಕಿಲೋಮೀಟರ್. ಹೀಗೆ ಬಹುತೇಕ ಹಳ್ಳಿಗಳು ಬರುತ್ತವೆ. ಅಂತಹ ಕ್ಷೇತ್ರದಲ್ಲಿ ಗೆದ್ದು ಬಂದು ಅಭಿವೃದ್ಧಿ ಕೆಲಸಗಳು ಆಗಿರಲಿಲ್ಲ. ನನಗೆ ಜ್ಞಾಪಕ ಇದೆ. ನನು ಸಾರಿಗೆ ಮಂತ್ರಿಯಾಗಿದ್ದಾಗ ಒಂದು ಒಂದು ದೊಡ್ಡ ಡಿಪೋ ಆಗಬೇಕು ಒಂದು ಬಸ್ ಸ್ಟ್ಯಾಂಡ್ ಆಗಬೇಕೆಂದು ಬಹಳ ಒತ್ತಾಯವನ್ನು ಮಾಡಿ ಕೆಲಸವನ್ನು ಮಾಡಿಸುತ್ತಿದ್ದಂತಹವರು. ಅಂಥವರನ್ನು ನಾವು ಕಳೆದುಕೊಂಡಿದ್ದೇವೆ. ಇನ್ನು ಬಹಳ ಪ್ರಮುಖವಾಗಿ ಶ್ರೀ ಎ. ಆರ್. ಬದರೀನಾರಾಯಣ ಅಯ್ಯಂಗಾರ್‌ರವರು, 1972ನೇ ಸುಮಾರಿನಲ್ಲಿ ನಾವೆಲ್ಲಾ ವಿದ್ಯಾರ್ಥಿ ಮುಖಂಡರಾಗಿದ್ದಾಗ ನಮಗೆ ಬಹಳ ಪ್ರಿಯವಾಗಿದ್ದವರು ಎಂದು ಹೇಳಿದರೆ ಇಬ್ಬರು. ವಿದ್ಯಾರ್ಥಿ ದಿಸೆಯ ಹುಂಬು ನಮಗೆಲ್ಲಾ ಆಗ. ಒಬ್ಬರು ಮಾನ್ಯ ಬಸವಲಿಂಗಪ್ಪನವರು, ಮತ್ತೊಬ್ಬರು ಶ್ರೀ ಎ.ಆರ್. ಬದರೀನಾರಾಯಣ ಅಯ್ಯಂಗಾರ್‌ರವರು. ಮಾನ್ಯ ಬದರೀನಾರಾಯಣ ಅಯ್ಯಂಗಾರ್‌ರವರು ಶಿಕ್ಷಣ ಮಂತ್ರಿಗಳಾಗಿದ್ದಾರೆ ಬಹಳ ಸುಸಂಸ್ಕೃತ ಶಿಕ್ಷಣ ಮಂತ್ರಿಗಳು ಎನ್ನತಕ್ಕಂಥ ಅಪಾರವಾದ ಗೌರವವನ್ನೂ ಹೊಂದಿದ್ದು ನಾವೆಲ್ಲಾ ಕಾಂಗ್ರೆಸ್ ವಿರುದ್ಧ ಸರ್ಕಾರದ ವಿರುದ್ಧ ವ್ಯವಸ್ಥೆಯ ವಿರುದ್ದ ಹೋರಾಟ ಮಾಡುತ್ತಿದ್ದ ಜನ.

ಆ ಸಂದರ್ಭದಲ್ಲಿ ಬದರಿನಾರಾಯಣ ಅಯ್ಯಂಗಾರ್‌ರವರು ವಿದ್ಯಾರ್ಥಿ ಮುಖಂಡರನ್ನು ಬಹಳ ಪ್ರೀತಿಯಿಂದ ನೋಡತಕ್ಕ ಒಂದು ಸೌಜನ್ಯತೆಯನ್ನು ಉಳಿಸಿಕೊಂಡಿದ್ದರು. ಅವರು ಸಕ್ರಿಯ ರಾಜಕಾರಣದಿಂದ ನಿವೃತ್ತಿಯಾದ ನಂತರ, ಸ್ವಾತಂತ್ರ್ಯ ಹೋರಾಟಗಾರರ ಏಳಿಗೆಗೋಸ್ಕರ ಬಹಳ ದುಡಿದುದ್ದನ್ನು ನಾನು ಯಾವತ್ತೂ ಸಹಿತಿ ಜ್ಞಾಪಿಸಿಕೊಳ್ಳುತ್ತೇನೆ. ಒಬ್ಬ ವಿದ್ವಾಂಸರಾಗಿದ್ದ ಬದರಿನಾರಾಯಣ ಅಯ್ಯಂಗಾರ್‌ರವರ ನಿಧನ, ಅವರ ಕುಟುಂಬಕ್ಕೆ ಅಷ್ಟೇ ಅಲ್ಲ, ಶಿವಮೊಗ್ಗ ಜಿಲ್ಲೆಗೆ ಅಷ್ಟೇ ಅಲ್ಲ, ಒಬ್ಬ ಸುಸಂಸ್ಕೃತ ವ್ಯಕ್ತಿಯನ್ನು ಕರ್ನಾಟಕ ಕಳೆದುಕೊಂಡಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳಲಿಕ್ಕೆ ಬಯಸುತ್ತೇನೆ. ಮಾನ್ಯ ಕೆ.ಪಿ. ಶಾಂತಮೂರ್ತಿಯವರು ಸ್ವತಂತ್ರವಾಗಿ 1983ನೇ ಇಸವಿಯಲ್ಲಿ ಹನೂರು ಕ್ಷೇತ್ರದಿಂದ ಗೆದ್ದು ಬಂದವರು. ಆವತ್ತು ಕಾಂಗ್ರೆಸ್ಸಿನ ವಿರುದ್ಧವಾಗಿ, ನಮ್ಮದು ಅಲ್ಪಬಹುಮತದ ಸರ್ಕಾರ ಇತ್ತು. ಆ ಸರ್ಕಾರ ನಡೆಸಬೇಕಾದರೆ ಬಹಳ ಕಷ್ಟ ಇತ್ತು. ಅಂತಹ ಸಂದರ್ಭದಲ್ಲಿ ಮಾನ್ಯ ಕೆ.ಪಿ. ಶಾಂತಮೂರ್ತಿಯವರು ನಮ್ಮ ಸರ್ಕಾರದ ಪರವಾಗಿ ನಿಂತು ನಮಗೆ ಬೆಂಬಲವನ್ನು ಕೊಟ್ಟಿದ್ದರು. ಸುತ್ತೂರು ಮಠದ ಅಭಿವೃದ್ಧಿಗೋಸ್ಕರ, ಚಾಮರಾಜನಗರ ಜಿಲ್ಲೆಯ ಅಭಿವೃದ್ಧಿಗೋಸ್ಕರ, ಮೈಸೂರು ಜಿಲ್ಲೆಯ ಅಭಿವೃದ್ಧಿಗೋಸ್ಕರ ಅವರು

ದುಡಿದಿರುವುದನ್ನು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಮಾನ್ಯ ಶಾಂತಮೂರ್ತಿಯವರು ಒಬ್ಬ ಸಜ್ಜನ ರಾಜಕಾರಣಿಯಾಗಿದ್ದರು. ಅದೇರೀತಿಯಲ್ಲಿ ಮಾನ್ಯ ಅಪ್ಪಾಜಿಗೌಡರು ಸಹಿತ ನಮ್ಮ ಜೊತೆಯಲ್ಲಿ ಶಾಸಕರಾಗಿದ್ದರು. ಒಬ್ಬ ಸುಸಂಸ್ಕೃತ ವ್ಯಕ್ತಿಗಳೂ ಆಗಿದ್ದರು. ಬಹಳ ಒಳ್ಳೆಯ ಕುಟುಂಬದಿಂದ ಬಂದ ಮಾನ್ಯ ಅಪ್ಪಾಜಿಗೌಡರು, ತಮ್ಮ ರಾಜಕೀಯ ವಿರೋಧಿಗಳನ್ನು ಕಟುವಾಗಿ ಟೀಕೆ ಮಾಡತಕ್ಕಂಥ ಸನ್ನಿವೇಶದಲ್ಲೂ ಸಹಿತ, ಬಹಳ ಎಚ್ಚರಿಕೆಯಿಂದ, ಬಹಳ ಮೃದುವಾಗಿ ಟೀಕೆ ಮಾಡುತ್ತಾ ಇದ್ದುದನ್ನು ನೋಡಿದ್ದೇವೆ. ಅದನ್ನು ನಾನು ನೆನಪಿಸಿಕೊಳ್ಳುವುದಕ್ಕೆ ಬಯಸುತ್ತೇನೆ. ಮಾನ್ಯ ಕಾಂಬಳೆಯವರೂ ಸಹಿತ ನಮ್ಮ ಜೊತೆಯಲ್ಲಿ ಒಬ್ಬ ಸದಸ್ಯರಾಗಿದ್ದರು. ಚಿಕ್ಕ ವಯಸ್ಸಿನಲ್ಲಿಯೇ ಅವರನ್ನು ನಾವು ಕಳೆದುಕೊಂಡಿದ್ದೇವೆ. ಅವರನ್ನು ನಾವು ಯಾವತ್ತೂ ಸಹಿತ ಮರೆಯುವುದಕ್ಕಾಗುವುದಿಲ್ಲವೆಂಬ ಮಾತನ್ನು ಹೇಳುತ್ತೇನೆ. ಮಾನ್ಯ ಶೆಟ್ಟರ್‌ರವರ ವಿಷಯವಾಗಿ ಮಾನ್ಯ ಮುಖ್ಯಮಂತ್ರಿಗಳು ಬಹಳ ಚೆನ್ನಾಗಿ ಹೇಳಿದರು. ಕಾರ್ಟೂನ್‌ನಲ್ಲಿ ಬರೆಯತಕ್ಕ ವ್ಯಕ್ತಿತ್ವ ಎಂಬ ಮಾತನ್ನು ಹೇಳಿದರು. ನಿಜವಾಗಿಯೂ ಶೆಟ್ಟರ್‌ರವರು ನೋಡುವುದಕ್ಕೆ ವ್ಯಕ್ತಿ ಕುಳ್ಳವಾಗಿದ್ದರೂ ಸಹಿತಿ ವಿಚಾರದಲ್ಲಿ ಬಹಳ ಎತ್ತರಕ್ಕೆ ಬೆಳೆದಿದ್ದವರು. ಅವರು ಹಾನಗಲ್ ಕ್ಷೇತ್ರದಿಂದ ಶಾಸಕರಾಗಿದ್ದುದ್ದು ಒಂದೇ ಅವಧಿ. ಆದರೆ, ಇಡೀ ವಿಧಾನ ಸಭೆಯಲ್ಲಿ, ಶೆಟ್ಟರ್‌ರವರು ಮಾತನಾಡುತ್ತಾರೆಂದು ಹೇಳಿದರೆ ಅವರ ಮಾತಿನಲ್ಲಿ ಏನೋ ಒಂದಿದೆ, ಏನೋ ಪ್ರಭಾವಯುತವಾಗಿ ಮಾತನಾಡುತ್ತಾರೆ. ಜನಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾರೆ ಎಂಬ ಭಾವನೆ ಇತ್ತು. ಅವರು ಸಾಯುವವರೆಗೂ ಸಹಿತ ಜನಗಳ ಸಮಸ್ಯೆಗಳಿಗೋಸ್ಕರ ಸ್ಪಂದಿಸಿದಂಥ ವ್ಯಕ್ತಿ. ವಿಶೇಷವಾಗಿ ಉತ್ತರ ಕರ್ನಾಟಕದಿಂದ ಇಲ್ಲಿಗೆ ಬಂದು, ಬೆಂಗಳೂರಿನ ವಿಧಾನ ಸೌಧದಲ್ಲಿ ಒಳ್ಳೆಯ ಹೆಸರನ್ನು ಮಾಡಿ ಹೋದ ವ್ಯಕ್ತಿ ಮಾನ್ಯ ಶೆಟ್ಟರ್‌ರವರು ಎಂಬ ಮಾತನ್ನು ಹೇಳುತ್ತೇನೆ. ಕರ್ನಾಟಕದ ಚಲನಚಿತ್ರರಂಗದಲ್ಲಿ, ಸಾಹಿತ್ಯ ಕ್ಷೇತ್ರದಲ್ಲಿ ದಿಗ್ಗಜರಾಗಿದ್ದಂಥ ಮಾನ್ಯ ಮೂರ್ತಿರಾವ್‌ರವರು. ಅವರು ಶತಾಯುಷಿಗಳಾಗಿದ್ದಂಥ ಸಂದರ್ಭದಲ್ಲಿ, ಇಡೀ ನಾಡಿನ ಜನ ಅವರನ್ನು ಕೊಂಡಾಡಿದ್ದನ್ನು ನಾವು ಯಾರೂ ಸಹಿತ ಮರೆಯುವ ಹಾಗೆ ಇಲ್ಲ. ಅವರು ನೂರು ವರ್ಷ ದಾಟಿದ್ದರೂ ಸಹಿತ ಬಹಳ ಆರೋಗ್ಯವಾಗಿ, ಒಬ್ಬ ಆದರ್ಶ ವ್ಯಕ್ತಿಯಾಗಿದ್ದರು. ಇನ್ನು ನರಸಿಂಹ ಸ್ವಾಮಿಯವರ ಮಾತಂತು ಮನೆ ಮಾತು ಇವತ್ತು ಕರ್ನಾಟಕ ನಿಜವಾಗಿಯೂ ಸಹಿತ ಸಾಹಿತ್ಯಲೋಕದಲ್ಲಿ ನರಸಿಂಹಸ್ವಾಮಿಯವರನ್ನು ಮತ್ತು ಮಾನ್ಯ ಮೂರ್ತಿರಾಯರನ್ನು ಕಳೆದುಕೊಂಡು ಬಡವಾಗಿದೆ. ನಾವು ಬಡವಾಗಿದ್ದೇವೆ. ಜೊತೆಗೆ, ಮಾನ್ಯ ಜಿ.ವಿ. ಅಯ್ಯರ್ ರವರ ಸಾವು ಇಷ್ಟು ಬೇಗ ಬರುತ್ತದೆಂದು ನಾನು ಅಂದುಕೊಂಡಿರಲಿಲ್ಲ. ಅವರು ಸಾಯುವುದಕ್ಕೆ 5–6 ದಿನ ಮುಂಚಿತವಾಗಿ ನನ್ನನ್ನು ಒಂದು ಕಾರ್ಯಕ್ರಮಕ್ಕೆ ಕರೆಸಿದ್ದರು. "ಅಭಿನವ ಭಾರತಿ" ಎಂದು ಮಂಡ್ಯದಲ್ಲಿ ಒಂದು ಶಿಕ್ಷಣ ಸಂಸ್ಥೆ ಇದೆ. ಬಹಳ ಒಳ್ಳೆಯ ಶಿಕ್ಷಣ ಸಂಸ್ಥೆಯನ್ನು ಅವರು ನಡೆಸುತ್ತಿದ್ದರು. ಆ ಸಂಸ್ಥೆಯ ಕಾರ್ಯಕ್ರಮದಲ್ಲಿ ನಾನೂ ಅವರ ಜೊತೆಯಲ್ಲಿ ಕುಳಿತಿದ್ದೆ. ನಾನು ಬೆಂಗಳೂರಿಗೆ ವಾಪಸ್ ಹೋಗಬೇಕು, ತಾವು ಅಧ್ಯಕ್ಷತೆ ವಹಿಸಿದ್ದೀರಿ, ನನಗೆ ಪರವಾನಗಿಯನ್ನು ಕೊಡಬೇಕೆಂದು ಹೇಳಿದಾಗ, ಅವರು, ನೀವೆಲ್ಲಾ ಹುಡುಗರು, ನಿಮಗೆ ಇಷ್ಟೆಲ್ಲಾ ಬೆಳೆಸಿದ್ದೇವೆ ಕರ್ನಾಟಕ ಜನ ನಿಮಗೆ ಎಲ್ಲಾ ಕೊಟ್ಟಿದ್ದಾರೆ, ನಾನಿಲ್ಲಿ ಕುಳಿತಿರುವಾಗ ಕೊನೆಯವರೆಗೂ ಇರತಕ್ಕ ಸೌಜನ್ಯತೆ ನಿಮಗೆ ಇಲ್ಲವಲ್ಲವೆಂದು ಒಂದು ರೀತಿಯ ಅಭಿಮಾನದಿಂದ ನಮಗೆ ಬುದ್ಧಿವಾದವನ್ನು ಹೇಳಿದ್ದರು. ಐಯ್ಯರ್‌ರವರು ಅಜಾತಶತ್ರುವಾಗಿದ್ದರು. ಚಲನಚಿತ್ರ ರಂಗದಲ್ಲಿ ಒಂದು ಹೊಸ ಅಧ್ಯಾಯವನ್ನು

ಪ್ರಾರಂಭ ಮಾಡಿದಂಥ ಮುಖಂಡರು. ಕರ್ನಾಟಕ ರಾಜ್ಯದ ಎಲ್ಲಾ ಚಲನಚಿತ್ರ ಕಲಾವಿದರಿಗೆ ಭೀಷ್ಮ ಪಿತಾಮಹರಂತೆ ಇದ್ದ ಮಾನ್ಯ ಜಿ.ವಿ. ಐಯ್ಯರ್‌ರವರ ನಿಧನ ನಮಗೆ ದುಃಖವನ್ನುಂಟು ಮಾಡಿದೆ ಎಂಬ ಮಾತನ್ನು ಹೇಳುತ್ತೇನೆ. ವೀಣೆಯನ್ನು ನುಡಿಸತಕ್ಕ ವಿಚಾರದಲ್ಲಿ ಆರ್.ಕೆ. ಸೂರ್ಯನಾರಾಯಣರವರು ಬಹಳ ಪ್ರಸಿದ್ಧವಾಗಿದ್ದವರು. ಅವರ ಕಾರ್ಯಕ್ರಮಗಳಲ್ಲಿ ನಾವೆಲ್ಲರೂ ಸಹಿತ ಅನೇಕ ಬಾರಿ ಭಾಗವಹಿಸಿದ್ದೇವೆ. ಇವರ ಸಂಗೀತದ ರುಚಿಯನ್ನು ನಾವೆಲ್ಲರೂ ಸಹಿತ ಅನುಭವಿಸಿದ್ದೇವೆ. ಅವರನ್ನು ಚಿಕ್ಕ ವಯಸ್ಸಿನಲ್ಲೇ ಕಳೆದುಕೊಂಡಿರುವುದರಿಂದ, ಕರ್ನಾಟಕ ರಾಜ್ಯದ ಮತ್ತು ರಾಷ್ಟದ ಸಂಗೀತ ಲೋಕಕ್ಕೆ ನಷ್ಟವಾಗಿದೆ ಎಂಬ ಮಾತನ್ನು ಹೇಳಿ, ಇವತ್ತು ತಾವೇನು ಇದೆಲ್ಲಾ ವಿಚಾರಗಳು ಕೂಡಿರತಕ್ಕ ಈ ಸಂತಾಪ ಸೂಚನಾ ನಿರ್ಣಯವನ್ನು ಮಂಡಿಸಿದ್ದೀರಿ, ಇದನ್ನು ನಾನು ಸಂಪೂರ್ಣವಾಗಿ ಬೆಂಬಲಿಸಿ, ಈ ಎಲ್ಲಾ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಮತ್ತು ವಿಶೇಷವಾಗಿ ಅವರ ಕುಟುಂಬವರ್ಗದವರಿಗೆ ಆ ದು:ಖವನ್ನು ಭರಿಸತಕ್ಕ ಶಕ್ತಿ ಭಗವಂತ ಕೊಡಲಿ ಎಂದು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

+ಶ್ರೀ. ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ಸಚಿವರು) : ಸನ್ಮಾನ್ಯ ಸಭಾಧ್ಯಕ್ಷರೇ, ಈ ಸದನದ ನಾಯಕರು ಹಾಗೂ ಮುಖ್ಯಮಂತ್ರಿಗಳು ಮತ್ತು ವಿರೋಧ ಪಕ್ಷದ ನಾಯಕರು ಮತ್ತಿತರ ಎಲ್ಲಾ ಮಿತ್ರರೂ ವ್ಯಕ್ತಪಡಿಸಿದ ಅಭಿಪ್ರಾಯಗಳಿಗೆ ನನ್ನ ಸಹಮತವನ್ನು ಸೂಚಿಸುತ್ತಾ, ಶ್ರೀಮಾನ್ ರಾಮಯ್ಯನವರು ಒಬ್ಬ ಒಳ್ಳೆಯ ಸಂಸದೀಯ ಪಟು. ನಾನು ಸಂಸದೀಯ ಸಚಿವನಾಗಿ, ನಾಲ್ಕು ಮನೆಗಳ ಸದಸ್ಯನಾಗಿ ಅನೇಕ ಜನ ಸಂಸದೀಯ ಪಟುಗಳ ಪರಿಚಯ ನನಗೆ ನಿಕಟವಾಗಿತ್ತು. ರಾಮಯ್ಯನವರೂ ಕೂಡ ಅಂತಹ ಒಂದು ಪರಿವಾರಕ್ಕೆ ಸೇರಿದವರು. ಆದ್ದರಿಂದ, ನನಗೆ ಅತ್ಯಂತ ಮೆಚ್ಚುಗೆ. ಬಹಳ ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳು ಜ್ಯೋತಿ ಕೊಡತಕ್ಕ ಕಾರ್ಯಕ್ರಮವನ್ನು ಪ್ರಸ್ತಾಪ ಮಾಡಿದರು. ಈ ಕಾರ್ಯಕ್ರಮ ರಾಮಯ್ಯನವರಿಂದ ಸ್ಫೂರ್ತಿಗೊಂಡು ಹೊರಗೆ ಬಂತು, ಅವರು ನನಗೆ ಫೋನ್ ಮಾಡಿ ಕುಪ್ಪಳ್ಳಿಯಲ್ಲಿ ನೀವು ಮೊದಲು ಜ್ಯೋತಿಯನ್ನು ಹಸ್ತಾಂತರಿಸಬೇಕು. ಆ ಜ್ಯೋತಿ ಬೆಂಗಳೂರಿಗೆ ಬರಬೇಕೆಂದು ಆಲೋಚನೆ ಮಾಡಿದ್ದೇನೆಂದು ಹೇಳಿದರು. ನಾನು ಮತ್ತು ಶ್ರೀಮಾನ್ ಜ್ಞಾನೇಂದ್ರರವರು ಆ ಜ್ಯೋತಿಯನ್ನು ಕುಪ್ಪಳ್ಳಿಯಲ್ಲಿ ಕರ್ನಾಟಕದ ಶತಮಾನೋತ್ಸವ ಸಮಿತಿಯವರಿಗೆ ಹಸ್ತಾಂತರ ಮಾಡಿದೆವು. ಅದಕ್ಕೆ ಬಹಳ ಪ್ರಮುಖವಾದಂಥ ಕಾರಣ ಶ್ರೀಮಾನ್ ರಾಮಯ್ಯನವರು. ನಾನು ರಾಮಯ್ಯನವರಿಗೆ ಸಂತಾಪ ಸೂಚಿಸತಕ್ಕ ಸಂದರ್ಭ ಇಷ್ಟು ಬೇಗ ಬರುತ್ತದೆಂದು ಆಲೋಚನೆ ಮಾಡಿರಲಿಲ್ಲ. ಶ್ರೀ ವೈ.ಕೆ. ರಾಮಯ್ಯನವರು ಮತ್ತು ಶ್ರೀ ಭೈರೇಗೌಡರ ಮಧ್ಯೆ ನಮ್ಮ ಸದನದಲ್ಲಿ ಒಂದು ಜುಗಲ್‌ಬಂದಿ ನಡೆಯುತ್ತಿತ್ತು. ಆದರೆ, ಇವತ್ತು ಇಬ್ಬರೂ ಇಲ್ಲ. ಆದ್ದರಿಂದ, ಆ ಜುಗಲ್‌ಬಂಧಿ ಇಲ್ಲ. ಒಂದೊಂದು ಸಾರಿ ನಮಗೆ ಬಹಳ ಉತ್ಸಾಹ ತುಂಬತಕ್ಕ ಜುಗಲ್‌ಬಂಧಿ ಆಗುತ್ತಿತ್ತು. ಅನೇಕ ವರ್ಷಗಳ ಕಾಲ ರಾಮಯ್ಯನವರ ಜೊತೆಗೆ ನಾನು ಕೆಲಸ ಮಾಡಿದ್ದೇನೆ. ಅವರನ್ನು ಹತ್ತಿರದಿಂದ ಬಲ್ಲವನಾಗಿದ್ದೇನೆ. ಆ ಮನುಷ್ಯ ಎಷ್ಟು ನಿಷ್ಠೂರವಾಗಿಯೋ, ಎಷ್ಟು ಕಠಿಣ ಅಭಿಪ್ರಯಗಳನ್ನು ಹೊಂದಿದ್ದರೋ, ಅಷ್ಟೇ ಸರಳ, ಸಜ್ಜನಿಕೆಯ ಮನುಷ್ಯ ಎನ್ನುವುದನ್ನು ನಾನು ಕಂಡಿದ್ದೇನೆ. ದಾರಿಯಲ್ಲಿ ಅವರ ಮನೆ ಇದ್ದುದರಿಂದ ನಾನು ಆಗಾಗ ಹೋಗಿ ಬೆಳಗಿನ ಉಪಾಹಾರವನ್ನೋ, ಮಧ್ಯಾಹ್ನದ ಊಟವನ್ನೋ ಮಾಡಿಕೊಂಡು ಬರುತ್ತಿದ್ದುದ್ದು ನಮ್ಮ ಪದ್ಧತಿ. ಶ್ರೀ ರಾಮಯ್ಯನವರು ಬರೀ ರಾಜಕಾರಣಿ ಅಷ್ಟೇ ಆಗಿರಲಿಲ್ಲ.

ಸಾಹಿತಿಯಾಗಿ, ಜನಪರ ಕಾಳಜಿಯ ಹೋರಾಟಗಾರನಾಗಿ ಮತ್ತು ರೈತಪರ ಹೋರಾಟದಲ್ಲಿ ಅಗ್ರಗಣ್ಯ ನಾಯಕರಲ್ಲಿ ಒಬ್ಬರಾಗಿದ್ದರು. ಕಾವೇರಿ ಜಲವಿವಾದ ಇರಬಹುದು, ಹೇಮಾವತಿ ಜಲವಿವಾದ ಇರಬಹುದು, ರೈತಪರ ಹೋರಾಟ ಇರಬಹುದು. ಇಂತಹ ಅನೇಕ ಹೋರಾಟಗಳಲ್ಲಿ ನಾವಿಬ್ಬರೂ ಒಟ್ಟಿಗೇ ಕೂಡಿ ಕೆಲಸ ಮಾಡಿದವರು. ತುಂಬಾ ಆಳವಾದ ಅಭ್ಯಾಸ ಮಾಡತಕ್ಕ ಮೇಧಾವಿ ರಾಜಕಾರಣಿಯಾಗಿದ್ದರು. ಇಂತಹ ಹಿರಿಯರೊಬ್ಬರನ್ನು ಕಳೆದುಕೊಂಡು ಈ ಸದನ ಬಡವಾಗಿದೆ ಎಂದು ಹೇಳಿದರೆ ಉತ್ಪ್ರೇಕ್ಷೆಯಲ್ಲವೆಂದು ನಾನು ಅಂದುಕೊಳ್ಳುತ್ತೇನೆ. ಶ್ರೀ ರಾಮಯ್ಯನವರಿಗೆ ನಾವು ಎಷ್ಟೇ ಸಂತಾಪವನ್ನು ಅಭಿವ್ಯಕ್ತ ಮಾಡಿದರೂ, ಸಂತೈಸುವ ಶಕ್ತಿ ನಮಗೆ ಇಲ್ಲ. ಅದನ್ನು ಭಗವಂತನಿಗೆ ಬಿಟ್ಟುಬಿಟ್ಟು, ಅವರ ಕುಟುಂಬಕ್ಕೆ ಈ ಶಕ್ತಿಯನ್ನು ಕರುಣಿಸಲಿ ಎಂದು ಕೇಳಿ ನನ್ನ ಮಾತನ್ನು ಸೇರಿಸುತ್ತ, ಶ್ರೀಮಾನ್ ಬದರಿನಾರಾಯಣ ಅಯ್ಯಂಗಾರ್‌ರವರ ಜೊತೆಯಲ್ಲಿ ಬಹಳ ದೀರ್ಘಕಾಲ ನಾನು ಕೆಲಸ ಮಾಡಿದ್ದೇನೆ. ಶ್ರೀಮಾನ್ ಬದರಿಯವರು ಎಂದರೆ, ಶ್ರೀಮಾನ್ ಅಯ್ಯಂಗಾರ್‌ರವರು ಎಂದರೆ ಸ್ವಾತಂತ್ರ್ಯ ಹೋರಾಟದ ಒಂದು ಪ್ರತಿರೂಪ. ಸಾಧಾರಣವಾಗಿ ಅವರ ಮನೆಗೆ ತಿಂಗಳಿಗೆ ಒಂದುಸಾರಿಯಾದರೂ ಹೋಗಿಬರುತ್ತಾ ಇದ್ದೆ. ಇತ್ತೀಚಿನ ದಿನಗಳಲ್ಲಿ ಅವರನ್ನು ನೋಡುವುದಕ್ಕೆ ಸಾಧ್ಯವಾಗಲಿಲ್ಲ. ಆದರೆ, ಇಳಿ ವಯಸ್ಸಿನಲ್ಲೂ ಕೂಡ ತುಂಬಾ ಎಚ್ಚರ ವಹಿಸಿ, ಮಾನ್ಯ ಸಿಂಧ್ಯರವರು ಹೇಳಿದಹಾಗೆ, ಅವರ ಮನೆಗೆ ಹೋದರೆ, ಅವರು ಕೊಡುತ್ತಾ ಇದ್ದಂಥ ಆತಿಥ್ಯ, ತೆಗೆದುಕೊಳ್ಳುತ್ತಿದ್ದ ಶ್ರಮ ಇವುಗಳನ್ನೆಲ್ಲಾ ನೋಡಿ ಕೆಲವುಸಲ ನಮಗೇ ಮುಜುಗರವಾಗುತ್ತಿತ್ತು. ಅಂತಹ ಧೀಮಂತ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಸಾಹಿತ್ಯ ಲೋಕದಲ್ಲಂತು ಶ್ರೀಮಾನ್ ಜಿ.ವಿ. ಅಯ್ಯರ್‌ರವರು, ನಮ್ಮ ವಿರೋಧಪಕ್ಷದ ನಾಯಕರು ಹೇಳಿದಹಾಗೆ ಕನ್ನಡ ಸಾಂಸ್ಕೃತಿಕ ಲೋಕದಲ್ಲಿ ಒಂದು ರೀತಿಯ ಬದಲಾವಣೆಯನ್ನೇ ತಂದರು. ಅದರಲ್ಲೂ ವಿಶೇಷವಾಗಿ ಮೊದಲು ರಣಧೀರ ಕಂಠೀರವ, ಭೂದಾನ ಇಂತಹ ಪ್ರಶಸ್ತಿಗಳಿಂದ, ಮುಂದೆ ಆದಿಶಂಕರಾಚಾರ್ಯ, ಮಧ್ವಾಚಾರ್ಯ, ಸ್ವಾಮಿ ವಿವೇಕಾನಂದ...... ಮಧ್ವಾಚಾರ್ಯ, ಮತ್ತು ಭಗವದ್ಗೀತೆ ಚಿತ್ರಗಳನ್ನು ಸಂಸ್ಕೃತದಲ್ಲಿ ತಯಾರಿಸಿ ಇಡೀ ನಾಡಿಗೆ ಕೊಟ್ಟ ಕೀರ್ತಿ ಅವರದ್ದು. ಶ್ರೀ ರಾಮಾನುಜಾಚಾರ್ಯ ಚಿತ್ರವನ್ನು ಅವರು ತಮಿಳು ಭಾಷೆಯಲ್ಲಿ ತಯಾರು ಮಾಡಿದ್ದರು. ಅಂದರೆ ಅವರು ಭಾಷಾ ವ್ಯಾಪ್ತಿಗೆ ಹೊರತಾಗಿದ್ದರು. "ಬಾ ತಾಯೇ ಭಾರತಿಯೇ..." ಹಾಗೂ "ವೈದೇಹಿ ಏನಾದಳು?.. " ಮೊದಲಾಗಿ ಹಲವಾರು ಗೀತೆಗಳು ಬಹಳ ಪ್ರಖ್ಯಾತವಾಗಿದ್ದು ಕನ್ನಡ ನಾಡಿನ ಜನರ ಮನಸ್ಸನ್ನು ಸೂರೆಗೊಂಡಿದ್ದವು. ಇವರ ಅಗಲಿಕೆಯಿಂದ ಕೇವಲ ಕನ್ನಡ ಚಿತ್ರರಂಗವಷ್ಟೇ ಅಲ್ಲ ಕನ್ನಡ ನಾಡಿನ ಮಹಾನ್ ಚೇತನವೊಂದು ಅಸ್ತಂಗತವಾಗಿದೆ ಎನ್ನುವ ಮಾತನ್ನು ನಾನು ಇಲ್ಲಿ ನೆನಪು ಮಾಡಿಕೊಳ್ಳುತ್ತಾ ಮೈಸೂರು ಮಲ್ಲಿಗೆಯ ಖ್ಯಾತ ಕವಿ ಹಾಗೂ ಅನೇಕ ವರ್ಷಗಳ ಕಾಲ ಸಹಿತ್ಯ ಕೃಷಿಯನ್ನು ಮಾಡಿದ ಮತ್ತು ತಮ್ಮ ಬದುಕಿನಲ್ಲಿ ಬರೆದಂಥ ಅನೇಕ ಕವನಗಳಿಗೆ ಸ್ಫೂರ್ತಿ ತಮ್ಮ ಶ್ರೀಮತಿಯವರು ಅನ್ನುವಂಥ ಮಾತನ್ನು ಮುಚ್ಚಿ ಇಡದೇ ಅಲ್ಲಿ, ಇಲ್ಲಿ ಹೇಳಿಕೊಳ್ಳುತ್ತಾರೆ. ಈ ಖ್ಯಾತ ಕವಿಯವರು 1991ರಲ್ಲಿ ಮೈಸೂರಿನಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಅವರಿಗೆ ಅನೇಕ ಪ್ರಶಸ್ತಿಗಳು ಬಂದುವು. ಅವುಗಳಲ್ಲಿ ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡಮಿ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ ಮುಂತಾಗಿ ಹತ್ತು ಹಲವು ಪ್ರಶಸ್ತಿಗಳನ್ನು ಗಳಿಸಿದ ಮಹಾನ್ ವ್ಯಕ್ತಿ ಅವರಾಗಿದ್ದರು. ಇವರ ನಿಧನದಿಂದ ಕನ್ನಡದ ಸಾರಸ್ವತ ಲೋಕದಲ್ಲಿ ಒಬ್ಬ ಅನನ್ಯ ಪ್ರೇಮ ಕವಿಯನ್ನು ನಾವು ಕಳೆದುಕೊಂಡಿದ್ದೇವೆ ಎಂಬ ಭಾವನೆ ನಮಗೆ ಉಂಟಾಗಿದೆ.

ಸನ್ಮಾನ್ಯ ಪಿ.ಸಿ. ಶೆಟ್ಟರ್‌ರವರು ಉತ್ತರ ಕರ್ನಾಟಕ ಭಾಗದಿಂದ ನಮಗೆ ಅತ್ಯಂತ ಆತ್ಮೀಯ ಮಿತ್ರರಾಗಿದ್ದಂಥವರು. ನಾವೆಲ್ಲರೂ ಸಮಾಜವಾದ ವೇದಿಕೆಯಿಂದ ರಾಜಕೀಯವನ್ನು ಪ್ರವೇಶ ಮಾಡಿದವರು. ಮಾನ್ಯ ಮುಖ್ಯಮಂತ್ರಿಗಳ ಜೊತೆಗೆ, ಮಾನ್ಯ ರಂಗನಾಥ್‌ರವರ ಜೊತೆಗೆ ಹೀಗೆ ಎಲ್ಲರ ಜೊತೆಗೂ ಸದಾ ಆತ್ಮೀಯತೆಯೊಂದಿಗೆ ಇರುತ್ತಿದ್ದ ಶ್ರೀಮಾನ್ ಶೆಟ್ಟರ್‌ರವರು ನಿಧನ ಹೊಂದಿದ್ದಾರೆ. ಹಾಗೆಯೇ ಶ್ರೀ ಶಾಂತಮೂರ್ತಿಯವರು ಶ್ರೀ ಅಪ್ಪಾಜಿಗೌಡರು, ಶ್ರೀ ಗೋವಿಂದೇಗೌಡರು, ಶ್ರೀ ಪಾವಶೆಯವರು ಮತ್ತು ಶ್ರೀ ಮುದ್ದರಾಮಯ್ಯನವರು, ಶ್ರೀ ಎಸ್.ಬಿ. ವಸ್ತ್ರದ್‌ರವರು, ಹೀಗೆ ಅನೇಕ ಮಂದಿಯನ್ನು ನಾವು ಕಳೆದ ಅಧಿವೇಶನದಿಂದ ಇತ್ತೀಚೆಗೆ ಕಳೆದುಕೊಂಡು ಒಂದು ದೃಷ್ಟಿಯಿಂದ ಸದನವೇ ಬಡವಾಗಿದೆ. ಹಾಗೂ ಒಂದು ದೃಷ್ಟಿಯಿಂದ ಸಾರ್ವಜನಿಕ ಜೀವನವೇ ಬಡವಾಗಿದೆ. ಹಾಗೆಯೇ ರಾಜ್ಯದ ಅತ್ಯಂತ ಪ್ರತಿಭಾವಂತ ನಾಯಕರುಗಳನ್ನು ಕಳೆದುಕೊಂಡು ರಾಜ್ಯದ ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕ ಕೂಡ ಬಡವಾಗಿದೆ ಎಂಬ ಮಾತನ್ನು ಹೇಳಿ, ಈ ಎಲ್ಲಾ ಕುಟುಂಬಗಳಿಗೆ ನಮ್ಮ ಸಂತಾಪವನ್ನು ತಾವೇನು ಸದನದ ಮೂಲಕ ಕಳುಹಿಸುವವರಿದ್ದೀರಿ. ನಮ್ಮ ಧ್ವನಿಯನ್ನು ಅದಕ್ಕೆ ಸೇರಿಸಬೇಕು, ಈ ಎಲ್ಲರ ಆತ್ಮಕ್ಕೆ ಶಾಂತಿ ಸಿಕ್ಕಲಿ, ದಯಾಮಯನಾದ ಭಗವಂತನು ಅವರ ಆತ್ಮಗಳಿಗೆ ಸನ್ಮಂಗಳವನ್ನು ಕರುಣಿಸಲಿ ಎಂದು ಹೇಳುತ್ತ ನನ್ನ ವತಿಯಿಂದಲೂ ಪ್ರಾರ್ಥನೆ ಮಾಡಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

**ಅಧ್ಯಕ್ಷರು** : ಇಷ್ಟು ಹೊತ್ತು ವಿವಿಧ ಪಕ್ಷಗಳ ನಾಯಕರುಗಳು ತಮ್ಮ ಸಂತಾಪವನ್ನು ಸೂಚಿಸಿದ್ದಾರೆ. ಇನ್ನು ಮಾತನಾಡುವವರು ಐದು ಜನರಿದ್ದಾರೆ. ಆಯಾಯ ಜಿಲ್ಲೆಗೆ ಸಂಬಂಧ ಪಟ್ಟವರ ಹಾಗೂ ನಿಕಟ ಸಂಬಂಧವನ್ನು ಇಟ್ಟುಕೊಂಡವರು ಎರಡೆರಡು ನಿಮಿಷ ಮಾತನಾಡಬಹುದು. ಇನ್ನು ಹತ್ತು ನಿಮಿಷಗಳಲ್ಲಿ ನಾವು ಮುಗಿಸೋಣ...... ಈಗ ಶ್ರೀ ಮುದ್ದಹನುಮೇಗೌಡರು ಮಾತನಾಡಿ.

**+ ಶ್ರೀ ಎಸ್.ಬಿ. ಮುದ್ದಹನುಮೇಗೌಡ (ಕುಣಿಗಲ್)** : ಸನ್ಮಾನ್ಯ ಸಭಾಧ್ಯಕ್ಷರೇ, ತಾವು ತಂದಿರತಕ್ಕಂಥ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಸಹಮತವನ್ನು ವ್ಯಕ್ತಪಡಿಸುತ್ತಾ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೆ, ಸಾರ್ವಜನಿಕ ಜೀವನದಲ್ಲಿ ಸಂಘರ್ಷದ ಹಾದಿಯಲ್ಲಿ ತುಳಿದು, ಯಶಸ್ಸನ್ನು ಕಾಣತಕ್ಕಂತಾದ್ದು ಬಹಳ ಅಪರೂಪ ಆದರೆ ಮಾನ್ಯ ವೈ.ಕೆ. ರಾಮಯ್ಯನವರು ಸಂಘರ್ಷದ ಹಾದಿಯಲ್ಲಿ ಕೆಲಸ ಮಾಡಿ ಯಶಸ್ಸನ್ನು ಕಂಡಂಥ ಒಬ್ಬ ಅಪರೂಪದ ವ್ಯಕ್ತಿ ಎಂದು ನಾನಾದರೂ ಕೂಡ ಭಾವನೆ ಮಾಡುತ್ತೇನೆ. 1967ನೇ ಇಸವಿಯಲ್ಲಿ ಹುಲಿಯೂರುದುರ್ಗ ಕ್ಷೇತ್ರದ ಒಂದು ಪ್ರೌಢಶಾಲೆಯಲ್ಲಿ ನಾನು 9ನೇ ತರಗತಿಯಲ್ಲಿ ವಿದ್ಯಾಭ್ಯಾಸವನ್ನು ಮಡುತ್ತಾ ಇದ್ದೆ. ಆಗ ಮಾನ್ಯ ವೈ.ಕೆ. ರಾಮಯ್ಯನವರು ವಿಧಾನಸಭಾ ಚುನಾವಣೆಗೆ ಸ್ವತಂತ್ರ ಅಭ್ಯರ್ಥಿಯಾಗಿ ಹುಲಿಯೂರುದುರ್ಗ ಕ್ಷೇತ್ರದಿಂದ ಸ್ಪರ್ಧಿಸಿದ್ದರು. ಆಗ ನಾನು ಕುತೂಹಲಕ್ಕೆ ಭಾಷಣ ಕೇಳಲು ಹಳ್ಳಿಯಲ್ಲಿ ನಿಂತಿದ್ದೆ. ಅವರು 1967 ರ ಚುನಾವಣಾ ಭಾಷಣವನ್ನು ಹಳ್ಳಿಯಲ್ಲಿ ಮಾಡುವಾಗ ಎಲ್ಲಾ ರಾಜಕೀಯ ಪಕ್ಷಗಳ ಅಭ್ಯರ್ಥಿಗಳ ಬಗ್ಗೆ ನೇರವಾಗಿ, ವೈಯಕ್ತಿಕವಾಗಿ, ಕಟುವಾಗಿ ಟೀಕೆ ಮಾಡುವಂಥ ಭಾಷಣವನ್ನು ಅವರು ಅವೊತ್ತು ಮಾಡಿದರು. ಅಂದಿನಿಂದ ಮೊನ್ನೆ ಅವರ ನಿಧನದವರೆಗೂ ಕೂಡ ನನಗೆ ಶ್ರೀ ವೈ.ಕೆ. ರಾಮಯ್ಯನವರು ಸಂಘರ್ಷದ ಹಾದಿಯಲ್ಲಿ ಬಂದಿರತಕ್ಕಂಥ ವ್ಯಕ್ತಿ ಎನ್ನತಕ್ಕಂಥ ಭಾವನೆಯು ಬದಲಾವಣೆಯಾಗಲಿಲ್ಲ. ಆದರೂ ಕೂಡ ಆ ಹಾದಿಯಲ್ಲಿ ಅತ್ಯಂತ ಯಶಸ್ಸನ್ನು ಕಂಡಂಥ ಒಬ್ಬ ಅಪರೂಪದ ರಾಜಕಾರಣಿ ಎಂಬ ಮಾತನ್ನು ನಾನು ನಂಬಿಕೊಂಡು

ಬಂದವನು. ಸುಮಾರು 25 ವರ್ಷಗಳ ಕಾಲ ನಾನು ಮತ್ತು ರಾಮಯ್ಯನವರು ಒಂದಲ್ಲ ಒಂದು ರೀತಿಯಲ್ಲಿ ನಿಕಟವಾದ ಸಂಬಂಧವನ್ನು ಇಟ್ಟುಕೊಂಡು ಬಂದಂಥವರು. ಅದಕ್ಕೆ ನಾನಾ ಕಾರಣಗಳೂ ಇವೆ. 1977ನೇ ಇಸವಿಯಲ್ಲಿ ನಾನು ಕುಣಿಗಲ್‌ನಲ್ಲಿ ವಕೀಲಿ ವೃತ್ತಿಯನ್ನು ಪ್ರಾರಂಭ ಮಾಡಿದಂಥ ಸಂದರ್ಭದಲ್ಲಿ ಆ ನ್ಯಾಯಾಲಯದಲ್ಲಿ ಹಿರಿಯ ವಕೀಲರಾಗಿದ್ದಂಥ ಇವರು ನಾನು ಮೊದಲನೇ ದಿವಸ ಕೋರ್ಟ್‌ಗೆ ಹೋಗತಕ್ಕಂಥ ಸಂದರ್ಭದಲ್ಲಿ ನನಗೆ ಅವರ ಆಫೀಸ್‌ನಿಂದ ಒಂದು ಕೇಸ್‌ನ್ನು ಕೊಟ್ಟು ವಕಾಲತ್ತು ಹಾಕಿಸಿ, ನೀನು ಚೆನ್ನಾಗಿ ಬೆಳೆಯಬೇಕಪ್ಪ ಎಂದು ಶುಭಕೋರುವ ಮಾತನ್ನು ಹೇಳಿದ್ದರು. ನಾವು 1983ನೇ ಇಸವಿಯವರೆವಿಗೂ ಅಲ್ಲಿದ್ದಂತ ಕೇಸ್‌ಗಳಲ್ಲಿ ನನಗೂ ಅವರಿಗೂ ಬಹಳಷ್ಟು ಕೇಸ್‌ಗಳು ಇದ್ದವು. ಅವರು ನ್ಯಾಯಾಲಯದಲ್ಲಿಯೂ ಕೂಡ ತಮ್ಮ ಹಾದಿಯ ಹೊರತಾಗಿ ಇರಲಿಲ್ಲ. ವಕೀಲ ವೃತ್ತಿಯನ್ನೂ ಕೂಡ ಅವರು ಆ ರೀತಿಯಲ್ಲಿಯೇ ನಡೆಸಿಕೊಂಡು ಬಂದರು. 1983ನೇ ಇಸವಿಯಲ್ಲಿ ನಾನು ನ್ಯಾಯಾಂಗ ಇಲಾಖೆಯಲ್ಲಿ ನ್ಯಾಯಾಧೀಶನಾಗಿ ಆಯ್ಕೆಯಾದಂಥ ಸಂದರ್ಭದಲ್ಲಿ ಅವರು ರಾಜಕಾರಣದಲ್ಲಿ ಮೊದಲನೇ ಸಾರಿ ವಿಧಾನಸಭೆಯನ್ನು ಪ್ರವೇಶ ಮಡಿದರು. ಪುನ: ಕೆಲಕಾಲ ನಂತರ ನಾನು ವಾಪಸ್ ಹೋದಾಗ, ಆ ಹೊತ್ತಿಗಾಗಲೇ ಬಹಳ ಬಲಿಷ್ಟವಾಗಿ ಬೆಳೆದಂಥ ರಾಜಕಾರಣಿಯಾಗಿದ್ದರು. ನಂತರದ ದಿನಗಳಲ್ಲಿ 1992 ರಲ್ಲಿ ನಡೆದಂಥ ಉಪಚುನಾವಣೆ, 1994ರಲ್ಲಿ ನಡೆದಂಥ ಸಾರ್ವತ್ರಿಕ ಚುನಾವಣೆಗಳಲ್ಲಿ ಕುಣಿಗಲ್ ಕ್ಷೇತ್ರದಿಂದ ನಾನೂ ಅವರೂ ಸ್ಪರ್ಧಿಗಳಾಗಿ ಸ್ಪರ್ಧಿಸಿದ್ದೆವು 1992ರಲ್ಲಿ ಉಪಚುನಾವಣೆಯಲ್ಲಿ ಅವರು ಗೆದ್ದರು. 1994ರಲ್ಲಿ ಸಾರ್ವತ್ರಿಕ ಚುನಾವಣೆಯಲ್ಲಿ ನಾನು ಗೆದ್ದೆ 1998ರಲ್ಲಿ ಅವರು ನಮ್ಮ ಪಕ್ಷವನ್ನು ಸೇರಬೇಕೆಂದಾಗ ನಾನು ಆತ್ಮೀಯವಾಗಿ ಸ್ವಾಗತ ಮಾಡಿದ್ದೆ. ತುಮಕೂರು ಜಿಲ್ಲೆಯಲ್ಲಿ ನಮ್ಮ ಪಕ್ಷಕ್ಕೆ ಒಂದು ಶಕ್ತಿಯನ್ನು ತಂದುಕೊಡತಕ್ಕಂಥ ವ್ಯಕ್ತಿತ್ವ ಇರತಕ್ಕಂಥ ರಾಜಕಾರಣಿಯೊಬ್ಬರು ಬರುತ್ತಾ ಇರತಕ್ಕಂಥಾದ್ದು ನಮ್ಮ ಪಕ್ಷಕ್ಕೆ ಇನ್ನೂ ಹೆಚ್ಚಿನ ಶಕ್ತಿಯನ್ನು ತಂದು ಕೊಡುತ್ತದೆ ಎಂದು ಹೇಳುತ್ತಾ ಸ್ವಾಗತ ಮಾಡುತ್ತೇನೆ ಎಂಬ ಮಾತನ್ನು ನಾನು ಹೃದಯಪೂರ್ವಕವಾಗಿ ಹೇಳಿದ್ದೆನು. ಅನೇಕ ವಿಚಾರಗಳಲ್ಲಿ ಈ ಕಾರಣಗಳಿಂದಾಗಿ ನಮ್ಮಿಬ್ಬರ ಮಧ್ಯೆ ವೈಮನಸ್ಸು, ಭಿನ್ನಾಬಿಪ್ರಾಯಗಳು ಇಲ್ಲದಿದ್ದರೂ ಕೂಡ ಸಾರ್ವತ್ರಿಕವಾಗಿ ಇವರಲ್ಲಿ ಏನೋ ಭಿನ್ನಾಭಿಪ್ರಾಯಗಳಿವೆ, ವೈಚಾರಿಕವಾಗಿ ಒಬ್ಬರಿಗೊಬ್ಬರಿಗೆ ಮನಸ್ತಾಪವಿದೆ ಎನ್ನತಕ್ಕಂಥ ಒಂದು ಭಾವನೆಯನ್ನು ಕೊಟ್ಟರೂ ಕೂಡ ನಾನು ಅತ್ಯಂತ ಪ್ರಾಮಾಣಿಕತೆಯಿಂದ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿರತಕ್ಕಂಥ ಸಣ್ಣಪುಟ್ಟ ಭಿನ್ನಾಭಿಪ್ರಾಯಗಳು ಯಾವೊತ್ತೂ ಕೂಡ ನಮ್ಮ ತಾಲ್ಲೂಕು ಮತ್ತು ಜಿಲ್ಲೆಯಲ್ಲಿರತಕ್ಕಂಥ ಅಭಿವೃದ್ಧಿ ಕೆಲಸಗಳು, ಅಥವಾ ನಮ್ಮ ಜಿಲ್ಲೆಯಲ್ಲಿನ ನಮ್ಮ ಪಕ್ಷದ ಸಂಘಟನೆಗೆ ಯಾವತ್ತೂ ಕೂಡ ಅದು ಮಾರಕವಾಗಿರಲಿಲ್ಲ ಮತ್ತು ಅದರಿಂದ ಯಾವ ತೊಂದರೆಯೂ ಕೂಡ ಆಗಿರಲಿಲ್ಲ. ಯಾವುದೇ ಸಂದರ್ಭ ಬಂದರೂ ಕೂಡ ಅವರ ವ್ಯಕ್ತಿತ್ವವನ್ನು ಅರ್ಥ ಮಾಡಿಕೊಂಡಿದ್ದಂಥ ನಾನು, ತತ್‌ಕ್ಷಣದಲ್ಲಿ ಅವರ ಜೊತೆಯಲ್ಲಿ ರಾಜಿಮಾಡಿಕೊಂಡು ಯವುದೇ ರೀತಿಯಲ್ಲಿ ತೊಂದರಯಾಗಬಾರದು, ನಮ್ಮ ತಾಲ್ಲೂಕಿಗೆ, ನಮ್ಮ ಪಕ್ಷಕ್ಕೆ, ತೊಂದರೆಯಾಗಬಾರದು ಎನ್ನುವ ವಿಚಾರದಲ್ಲಿ ನಾನು ಅವರ ಜೊತೆಯಲ್ಲಿ ಸಹಮತವನ್ನು ವ್ಯಕ್ತಪಡಿಸಿಕೊಂಡು ಅನೇಕ ಸಲ ನಮ್ಮ ದಾರಿಯನ್ನು ಸುಗಮ ಮಾಡಿಕೊಂಡಿದ್ದಂತೂ ಉಂಟು. ಮಾನ್ಯ ರಾಮಯ್ಯನವರು ನನಗೆ ವೈಯಕ್ತಿಕವಾಗಿ ಒಂದು ದೊಡ್ಡ ಸಹಾಯವನ್ನು ಮಾಡಿದ್ದು ಏನೆಂದರೆ, He always used to keep me more active, because he used to

be more active. ಒಂದೇ ತಾಲ್ಲೂಕಿನ ಎರಡು ಕ್ಷೇತ್ರಗಲ್ಲಿ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಅವರು ಅತ್ಯಂತ ಕ್ರಿಯಾಶೀಲರಾಗಿ ಕೆಲಸವನ್ನು ಮಾಡತಕ್ಕಂಥ ಸಂದರ್ಭದಲ್ಲಿ ಪಕ್ಕದ ಕ್ಷೇತ್ರದಲ್ಲಿ ನಾನು ಕ್ರಿಯಾಶೀಲನಾಗಿ ಕೆಲಸ ಮಾಡತಕ್ಕಂಥ ಅನಿವಾರ್ಯ ಪರಿಸ್ಥಿತಿಯನ್ನು ಅವರು ನಿರ್ಮಾಣ ಮಾಡಿದ್ದರು. He used to keep me always active.

**12.30 ಪಿ.ಎಂ.**

ಅವರು ಅವರ ಕ್ಷೇತ್ರದಲ್ಲಿ ಬಹಳಷ್ಟು ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ರಾಜ್ಯಮಟ್ಟದ ಮತ್ತು ಜಿಲ್ಲಾಮಟ್ಟದ ರಾಜಕಾರಣವನ್ನು ನಿರಂತರವಾಗಿ ಮಾಡಿದರೂ ಕೂಡ ಅದ್ಯಾವುದೂ ಅವರ ಕ್ಷೇತ್ರದ ಅಭಿವೃದ್ಧಿಗೆ ತೊಂದರೆ ಆಗದ ರೀತಿಯಲ್ಲಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ಕೊಟ್ಟು ಕೆಲಸ ಮಾಡುತ್ತಿದ್ದರು. ಇದರ ಉದಾಹರಣೆಗೆ ಮಾನ್ಯ ಅಧ್ಯಕ್ಷರೇ, ನಾನು ಒಂದೇ ಒಂದು ಮಾತು ಹೇಳಲಿಕ್ಕೆ ಇಷ್ಟಪಡುತ್ತೇನೆ. ಒಂದು ವಿಧಾನಸಭಾ ಕ್ಷೇತ್ರಕ್ಕೆ 13–14 ಕೋಟಿ ರೂಪಾಯಿ ಕೇಂದ್ರದ ರಸ್ತೆ ನಿಧಿ ಬಂತು ಅಂದರೆ ನಾವೆಲ್ಲರೂ ಕೂಡ ಆಶ್ಚರ್ಯ ಪಡಬೇಕು. ಆ ರೀತಿ ಸರ್ಕಾರದ ಮೇಲೆ ಪ್ರಭಾವ ತಂದು ಅಧಿಕಾರಿಗಳ ಮೇಲೆ ಪ್ರಭಾವ ತಂದು ಅವರ ಕ್ಷೇತ್ರದ ಕೆಲಸಗಳನ್ನು ಮಾಡಬೇಕೆಂಬ ಸಂದರ್ಭದಲ್ಲಿ ಅವರು ಎಲ್ಲರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಕೆಲಸವನ್ನು ಮಾಡುತ್ತಾ ಇದ್ದುದು ನಮಗೆಲ್ಲರಿಗೂ ಕೂಡ ಸ್ಫೂರ್ತಿಯಾಗುತ್ತಿತ್ತು. ನಮಗೆಲ್ಲರಿಗೂ ಕೂಡ ಉತ್ಸಾಹವನ್ನು ತುಂಬುತ್ತಾ ಇತ್ತು ನಮ್ಮ ನಮ್ಮ ಕ್ಷೇತ್ರಗಳಿಗೂ ಹೆಚ್ಚು ಹೆಚ್ಚು ಕೆಲಸ ಮಾಡಲು ಅದು ನಮಗೆ ಕಾರಣವಾಗುತ್ತಾ ಇತ್ತು. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇವತ್ತು ಮಾನ್ಯ ರಾಮಯ್ಯನವರು ರೇಷ್ಮೆ, ನೀರಾವರಿ, ಕೃಷಿ ಹೀಗೆ ಅನೇಕ ವಿಚಾರಗಳಲ್ಲಿ ಒಂದು ಸಾಮಾಜಿಕ ಕಳಕಳಿಯನ್ನು ಬದ್ಧತೆಗಳನ್ನು ಇಟ್ಟುಕೊಂಡಿದ್ದ ಒಬ್ಬ ವ್ಯಕ್ತಿ. ಅವರು ಯಾವುದೇ ಸಂದರ್ಭದಲ್ಲಿ ರಾಜಕೀಯವಾಗಿ, ಖಾಸಗಿಯಾಗಿ ಮನಸ್ಸಿಗೆ ನೋವಾಗಿದ್ದರೂ ಕೂಡ ಮರು ಕ್ಷಣದಲ್ಲೇನೇ ಅವೆಲ್ಲವನ್ನೂ ಕೂಡ ಮರೆತು ಏನೂ ಆಗಿಯೇ ಇಲ್ಲವೇನೋ, ಯಾವುದೂ ಘಟನೆ ನಡೆದೇ ಇಲ್ಲವೇನೋ ಎಂಬುವಷ್ಟರ ಮಟ್ಟಿಗೆ ಬದಲಾವಣೆಯಾಗಿ ತಮ್ಮನ್ನು ತಾವು ಈ ಸಾರ್ವಜನಿಕ ಅಭಿವೃದ್ಧಿ ಕೆಲಸಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ಒಂದು ವಿಶಿಷ್ಟವಾದ ಗುಣವನ್ನು ನಾನು ಅವರಲ್ಲಿ ನೋಡಿದ್ದೆ. ಯಾವುದೇ ಸಾರ್ವಜನಿಕ ಜೀವನದಲ್ಲಿರುವ ವ್ಯಕ್ತಿಗೆ ಖಾಸಗಿಯಾಗಿ ಅಥವಾ ರಾಜಕೀಯವಾಗಿ ಒಂದು ಸಣ್ಣ ಘಟನೆ ನಡೆದರೆ ಬಹುಶಃ ಅದರಿಂದ ಎಚ್ಚೆತ್ತುಕೊಳ್ಳುವುದಕ್ಕೆ ಬದಲಾವಣೆ ಆಗುವುದಕ್ಕೆ ಕೆಲವು ಕಾಲವೇ ಬೇಕಾಗುತ್ತದೆ. ಆದರೆ ಮಾನ್ಯ ರಾಮಯ್ಯನವರಲ್ಲಿದ್ದ ವಿಶಿಷ್ಟವಾದ ಗುಣ ಏನು ಅಂದರೆ ಮರುಕ್ಷಣದಲ್ಲೇ ಅವೆಲ್ಲವನ್ನೂ ಮರೆತು ಯಾವುದೂ ನಡೆದೇ ಇಲ್ಲ ಎಂಬ ರೀತಿ ಅವರು ತಮ್ಮನ್ನು ತಾವು ಸಾರ್ವಜನಿಕ ಜೀವನದಲ್ಲಿ ತೊಡಗಿಸಿಕೊಳ್ಳುತ್ತಿದ್ದಂತಹ ವ್ಯಕ್ತಿ. ಕುಣಿಗಲ್ ತಾಲ್ಲೂಕಿನ ಬಹು ಭಾಗವನ್ನು ಪ್ರತಿನಿಧಿಸುತ್ತಿದ್ದಂತಹ ಶ್ರೀ ರಾಮಯ್ಯನವರು ಹಠಾತ್ತಾಗಿ ನಿಧನರಾಗಿದ್ದಾರೆ. ಬಹುಶಃ ಒಂದು ಸತ್ಯವನ್ನು ಇಲ್ಲಿ ಹೇಳಿದರೆ ತಪ್ಪಾಗಲಾರದು. ಅವರ ಬಹಳ ಕಠಿಣವಾದ ಸ್ವಭಾವವೇ ಅವರಿಗೆ ಅಕಾಲಿಕ ಮರಣ ಬರಲು ಕರಣವಾಯಿತೇನೋ ಎಂದು ಭಾವನೆ ಮಾಡುತ್ತೇನೆ. ಮಾನ್ಯ ಸಭಾನಾಯಕರು ಹೇಳುವಾಗ ಒಂದು ವಿಚಾರವನ್ನು ಹೇಳಿದರು. ಅದರ ಹಿಂದಿನ ದಿವಸ ಅವರ ಹುಟ್ಟೂರಿನಲ್ಲಿ ಇಟ್ಟುಕೊಂಡಿದ್ದ ಕಾರ್ಯಕ್ರಮಕ್ಕೆ ಹೋಗಬೇಕಾದರೆ ಡಾಕ್ಟರ್ಸ್ ಅವರಿಗೆ ಹೇಳಿದರು, ಇಲ್ಲ ಆ ಸಾರ್ ಆಗುವುದಿಲ್ಲ. You are not in a fit condition to go and attend the programme ಎಂದು. ಏ ಬಿಡ್ರಿ ಡಾಕ್ಟ್ರೇ ನಿಮಗೇನು ಗೊತ್ತಾಗುತ್ತದೆ ಎಂದು

ಆ ಡ್ರಿಪ್ಪಿನ ನೀಡ್ಲ್ ಇಟ್ಟುಕೊಂಡು ಅವರು ಆ ಕಾರ್ಯಕ್ರಮಕ್ಕೆ ಹೋಗಿದ್ದ ವಿಚಾರವನ್ನು ಮಾನ್ಯ ಸಭಾನಾಯಕರು ಹೇಳಿದರು. ನೈಟ್ ವಾಪಸ್ ಬಂದಾಗ ಪುನಃ ಡಾಕ್ಟರ್ಸ್ ಹೇಳಿದ್ದಾರೆ. ದಯಮಾಡಿ ತಾವು ರೆಸ್ಟ್ ತೆಗೆದುಕೊಳ್ಳಬೇಕು ಸಾರ್. ಇಮ್ಮೀಡಿಯೇಟಾಗಿ ತಮ್ಮನ್ನು ನಾವು ಬೆಂಗಳೂರಿಗೆ ಕರೆದುಕೊಂಡು ಹೋಗುತ್ತೇವೆ. ಎಂದು ಹೇಳಿದಾಗ next day ಇದ್ದ ಒಂದು ಕಾರ್ಯಕರ್ತರ ಸಭೆಯನ್ನು ಮುಗಿಸಿಕೊಂಡು ನಾನು ಬೆಂಗಳೂರಿಗೆ ಬರುತ್ತೇನೆ, ಇವತ್ತು ಆಗುವುದಿಲ್ಲ. ಎಂದು ಡಾಕ್ಟರ್ಸ್‌ಗೆ ಹೆದರಿಸಿದ್ದಾರೆ; ಆಗೋದಿಲ್ಲರೀ ಇವತ್ತು, ನಾಳೆ ಹೋಗೋಣ ಎಂದು ಬೆಳಿಗ್ಗೆ ಸುಮಾರು 7.50ರ ಸಮಯದಲ್ಲಿ ನಾನು ಅಲ್ಲೇ ನನ್ನ ಕ್ಷೇತ್ರದಲ್ಲಿದ್ದ ಸಂದರ್ಭದಲ್ಲಿ ನನಗೆ ದೂರವಾಣಿ ಕರೆ ಬಂದು ಬಹುಶಃ ಮಾನ್ಯ ರಾಮಯ್ಯನವರು ಸತ್ತ 10–15 ನಿಮಿಷಕ್ಕೇ ನಾನು ಸ್ಥಳಕ್ಕೆ ಹೋದಾಗ ಡಾಕ್ಟರ್ಸ್ ಇನ್ನೂ ಅಲ್ಲೇ ಇದ್ದರು ಅವರಲ್ಲಿ ನಡೆದಂತಹ ಪರಿಸ್ಥಿತಿ ವಿಚಾರಣೆ ಮಾಡಿದಾಗ ಮಾನ್ಯ ರಾಮಯ್ಯನವರ ಒರಟು ಸ್ವಭಾವವೇ ಅವರ ಅಕಾಲಿಕ ಮರಣಕ್ಕೆ ಕಾರಣವಾಯಿತೇನೋ ಎಂಬ ಭಾವನೆಯನ್ನು ನಾನು ತಳೆದೆ. ಹಾಗಾಗಿ ಅವರು ಬಹಳ ಚಿಕ್ಕ ವಯಸ್ಸಿನಲ್ಲೇ ನಮ್ಮನ್ನು ಅಗಲಿದ್ದಾರೆ. ನಮಗೆ ನಮ್ಮ ತಾಲ್ಲೂಕಿಗೆ ನಮ್ಮ ಜಿಲ್ಲೆಗೆ ಅಭಿವೃದ್ಧಿ ಕೆಲಸಗಳಿಗೆ ಒಂದು ಸ್ಫೂರ್ತಿಯಾಗಿದ್ದ ಒಂದು ಚೇತನವನ್ನು, ಒಂದು ಚಿಲುಮೆಯನ್ನು ನಾವು ಕಳೆದುಕೊಂಡಿದ್ದೇವೆ. ನಮ್ಮ ಪಕ್ಷಕ್ಕೆ ನಮ್ಮ ಜಿಲ್ಲೆಯ ಮಟ್ಟಿಗೆ ಒಂದು ದೊಡ್ಡ ಆಘಾತವಾಗಿದೆ. ಮಾನ್ಯ ವೈ.ಕೆ. ರಾಮಯ್ಯನವರ ಕಾರ್ಯಶೈಲಿ ಅವರು ನಡೆದುಕೊಂಡುಬಂದಂತಹ ದಾರಿ ಅವರು ಕುಣಿಗಲ್ ತಾಲ್ಲೂಕಿನಲ್ಲಿ ಮಾಡಿರುವ ಅಭಿವೃದ್ಧಿ ಕೆಲಸಗಳು ಸದಾ ನಮಗೆ ಮಾರ್ಗದರ್ಶಕವಾಗಿರಲಿ, ಅವರು ಅಭಿವೃದ್ಧಿ ಕೆಲಸಕ್ಕೆ ಕೊಟ್ಟಂತಹ ಹೆಚ್ಚಿನ ಆಸಕ್ತಿ ನಮಗೆಲ್ಲರಿಗೂ ಸ್ಫೂರ್ತಿದಾಯಕವಾಗಿರಲಿ ಎಂಬ ಮಾತನ್ನು ಹೇಳುತ್ತಾ, ಇವತ್ತೇನು ಅವರು ನಮ್ಮನ್ನು ಅಗಲಿ ಹೋಗಿದ್ದಾರೆ ಅವರ ಕುಟುಂಬಕ್ಕೆ ಆ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತ ಕರುಣಿಸಲಿ, ಅವರ ಆತ್ಮಕ್ಕೂ ಕೂಡ ಭಗವಂತ ಶಾಂತಿಯನ್ನು ನೀಡಲಿ ಎಂದು ಹೇಳುತ್ತಾ, ಮಾನ್ಯ ಅಧ್ಯಕ್ಷರೇ, ನಮ್ಮ ಜಿಲ್ಲೆಯ ಮತ್ತೊಬ್ಬ ನಾಯಕರಾದ ಮಾನ್ಯ ಮುದ್ದರಾಮಯ್ಯನವರು ಮೂರು ಸಲ ನಮ್ಮ ಜಿಲ್ಲೆಯಿಂದ ಶಾಸಕರಾಗಿದ್ದರು. ಹಿಂದುಳಿದ ವರ್ಗಕ್ಕೆ ಸೇರಿದ್ದ ಒಬ್ಬ ನಾಯಕರು, ಸರಳ ಸಜ್ಜನಿಕೆಯ ಸೌಮ್ಯ ಸ್ವಭಾವದ ವ್ಯಕ್ತಿತ್ವದ ಒಬ್ಬ ನಾಯಕರು ಇವತ್ತು ನಮ್ಮನ್ನು ಅಗಲಿದ್ದಾರೆ. ಮೂರು ಸಲ ಶಾಸಕರಾಗಿದ್ದರೂ ಕೂಡ ಅತ್ಯಂತ ಕಡು ಬಡತನದಲ್ಲಿ ಅವರ ಕುಟುಂಬ ಇವತ್ತೂ ಕೂಡ ಇರುವುದನ್ನು ನೋಡಿದಾಗ ಬಹುಶಃ ಸಾರ್ವಜನಿಕ ಜೀವನದಲ್ಲಿ ಯಾವ ರೀತಿ ಮುದ್ದರಾಮಯ್ಯನವರು ಪ್ರಾಮಾಣಿಕವಾಗಿ ಇದ್ದರು ಎಂಬುದಕ್ಕೆ ಇವತ್ತು ಅವರ ಕುಟುಂಬ ಇರುವ ಪರಿಸ್ಥಿತಿಯನ್ನು ನೋಡಿದರೆ ಅರ್ಥವಾಗುತ್ತದೆ. ಅಂತಹ ಒಬ್ಬ ಮಹಾನ್ ವ್ಯಕ್ತಿ ಜಿಲ್ಲಾ ಕಾಂಗ್ರೆಸ್‌ನಲ್ಲೂ ಅಧ್ಯಕ್ಷರಾಗಿ ಕೆಲವು ಕಾಲ ಸೇವೆ ಮಾಡಿದವರು, ಅವರೂ ಕೂಡ ನಮ್ಮನ್ನಗಲಿದ್ದಾರೆ. ಹೀಗೆ ಇವತ್ತು ತಾವೇನು ಅನೇಕ ನಾಯಕರ ನಿಧನದಿಂದ ನಮ್ಮ ನಾಡು ಬಡವಾಗಿರುವ ಬಗ್ಗೆ ಮತ್ತೆ ಅವರ ಕುಟುಂಬಕ್ಕೆ ಭಗವಂತ ಆ ದುಃಖವನ್ನು ಸಹಿಸುವ ಶಕ್ತಿಯನ್ನು ನೀಡಲಿ ಎಂದು ನಾನು ಪ್ರಾರ್ಥನೆ ಮಾಡಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತು ಮುಗಿಸುತ್ತೇನೆ.

+ **ಶ್ರೀ ಸಿ. ಚನ್ನಿಗಪ್ಪ (ಕೊರಟಗೆರೆ)** : ಮಾನ್ಯ ಅಧ್ಯಕ್ಷರೇ, ತಾವು ತಂದಿರುವಂತಹ ಸಂತಾಪ ಸೂಚನೆ ಏನಿವತ್ತು ಈ ರಾಜ್ಯದಲ್ಲಿ ರಾಜಕೀಯವಾಗಿ ಸಾಮಾಜಿಕವಾಗಿ ಸೇವೆ ಮಾಡಿ ಅನೇಕ ಶಾಸಕರು, ಮಾನ್ಯ ಮಂತ್ರಿಗಳೂ ಆಗಿದ್ದು ನಿಧನರಾಗಿದ್ದಾರೆ ಅವರ ಆತ್ಮಕ್ಕೆ ಶಾಂತಿ

ಕೋರುವಂತಹ ತಾವು ತಂದಿರುವ ನಿರ್ಣಯಕ್ಕೆ ನಾನೂ ಕೂಡ ಸಹಮತ ವ್ಯಕ್ತಪಡಿಸುತ್ತಾ ಮಾನ್ಯ ವೈ.ಕೆ. ರಾಮಯ್ಯನವರು ಸಾಮಾನ್ಯ ರಾಜಕಾರಣಿ ಅಲ್ಲ, ಸಭಾನಾಯಕರು ಮತ್ತು ಎಲ್ಲರೂ ಅವರ ಬಗ್ಗೆ ಇವತ್ತು ಏನು ಹೇಳಿದ್ದಾರೆ ನಾನಾದರೂ ಹತ್ತಿರದಿಂದ ನೋಡಿದ್ದೇನೆ. ನಾನು ವಿದ್ಯಾರ್ಥಿ ಇದ್ದಾಗ ಮಾನ್ಯ ರಾಮಯ್ಯನವರು ನಮಗೆ ಅನೇಕ ಸಲ ನನ್ನ ಗುರುಗಳಂತೆ ಈ ರೀತಿ ರೈತರ ಮಕ್ಕಳು ನಡೆಯಬೇಕು, ನೀವು ಹೋಗಬೇಕು ಎಂದೆಲ್ಲಾ ಅಂದೇ ಸೂಚನೆ ಕೊಟ್ಟಿದ್ದ ಒಬ್ಬ ಧೀಮಂತ ರಾಜಕಾರಣಿ ಆಗಿದ್ದರು. ಅದೇ ರೀತಿ ನಾನು ಶಾಸಕನಾದ ಮೇಲೆ ನಾವೆಲ್ಲರೂ ತುಮಕೂರಿನಲ್ಲಿ ಸಭೆ ಸೇರಿದಾಗ ನೀರಾವರಿ ವಿಚಾರವಾಗಿರಬಹುದು, ರೈತರ ಬಗ್ಗೆ ಇರಬಹುದು, ಅಥವಾ ಕುಡಿಯುವ ನೀರು ವಿಚಾರವಾಗಿರಬಹುದು ಅಥವಾ ಬರಗಾಲದ ಕೆಲಸಗಳು ಆಗಬಹುದು, ಮಾನ್ಯ ಮುದ್ದಹನುಮೇಗೌಡರಾಗಬಹುದು ಅಥವಾ ಮಾನ್ಯ ಮಂತ್ರಿಗಳಾದ ಶ್ರೀ ಪರಮೇಶ್ವರ್ ಅವರು ಆಗಬಹುದು; ಆ ಸಭೆಯಲ್ಲಿ ಒಂದೇ ಒಂದು ಮಾತು ಹೇಳುತ್ತಿದ್ದರು; ನೋಡಿ ಇವತ್ತು ನಾವು ಬಂದು ಕುಳಿತುಕೊಂಡು ಹೋಗುವುದು ಸರ್ಕಾರದ ದುಡ್ಡು ವೆಚ್ಚ ಮಾಡುವುದಕ್ಕಲ್ಲ. TA/DA ತೆಗೆದುಕೊಳ್ಳುವುದಕ್ಕೆ ಅಲ್ಲ ಇವತ್ತು ಸಭೆಯಲ್ಲಿ ಏನು ನಿರ್ಣಯ ತೆಗೆದುಕೊಳ್ಳುತ್ತೇವೆ ಅದನ್ನು ಆ ಕಾಲಮಿತಿಯಲ್ಲಿ ನೀವು ಅಧಿಕಾರಿಗಳು ಕೆಲಸ ಮುಗಿಸಬೇಕು ಎಂದು ಭಾರಿ ಕಟ್ಟುನಿಟ್ಟಾಗಿ ಅವರು ಸೂಚನೆ ಕೊಡುತ್ತಿದ್ದರು. ಅದೇ ರೀತಿ ಅವರು ಮಂತ್ರಿಗಳಾಗಿದ್ದಾಗ, ತುಮಕೂರು ಆಗಬಹುದು, ಕೋಲಾರ ಆಗಬಹುದು, ಬೆಂಗಳೂರು ಗ್ರಾಮಾಂತರ ಆಗಬಹುದು, ರೇಷ್ಮೆ ಇಲಾಖೆಯಲ್ಲಿ ತಂದಂತಹ ಒಂದು ಆಯಾಮವನ್ನು ಈ ರಾಜ್ಯದವರೆಲ್ಲ ಸ್ಮರಿಸಬೇಕಾಗಿದೆ. ಅಧ್ಯಕ್ಷರೇ, ಅವರು ಬರೀ ಕೋಪಿಷ್ಟರು ಅಷ್ಟೇ ಅಲ್ಲ, ಅನ್ಯಾಯವಾದರೆ ಮಾತ್ರ ಕೋಪ ಮಾಡಿಕೊಳ್ಳುತ್ತಿದ್ದರು. ಅದು ಅವರ ಸ್ವಭಾವವಾಗಿತ್ತು. ಆದರೆ ಅವರ ನಡೆ ನುಡಿ ರಾಜಕೀಯ ಜೀವನ ಸಾಮಾಜಿಕತೆಯನ್ನು ನೋಡಿದಾಗ ನಿಜವಾಗಿ ನನಗೆ ಅನ್ನಿಸುತ್ತದೆ ಅಂತಹ ಆದರ್ಶಪ್ರಿಯ ರಾಜಕಾರಣಿಯನ್ನು ಕಳೆದುಕೊಂಡಿರುವ ನಾವು, ನಮ್ಮ ಜಿಲ್ಲೆ, ನಿಜವಾಗಿ ನಮ್ಮ ರೈತ ಸಮುದಾಯ ತಬ್ಬಲಿಯಾಗಿದೆ ಎಂದು ಹೇಳಲು ಇಷ್ಟಪಡುತ್ತೇನೆ. ಅವರ ಸಾಮಾಜಿಕ, ರಾಜಕೀಯ ಸೇವೆಗಳನ್ನು ಈ ಸಂದರ್ಭದಲ್ಲಿ ಸ್ಮರಿಸುತ್ತ ಪರಮಾತ್ಮ ಅವರ ಕುಟುಂಬಕ್ಕೆ ಹೆಚ್ಚಿನ ಸುಖಶಾಂತಿಯನ್ನು ಕೊಡಲಿ ಅವರು ಹಾಕಿಕೊಟ್ಟಿರುವ ಅನೇಕ ದಾರಿಗಳನ್ನು ನಾವೆಲ್ಲ ಪಾಲನೆ ಮಾಡಿಕೊಂಡು ಈ ರಾಜ್ಯಕ್ಕೆ ಮಾದರಿಯಾಗಿ ಕೆಲಸ ಮಾಡುವುದಕ್ಕೆ ನಾವೆಲ್ಲರೂ ಒಂದು ನಿಜವಾದ ನಿರ್ಣಯ ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಶ್ರೀ ಮುದ್ದರಾಮಯ್ಯನವರು ನನ್ನ ಕ್ಷೇತ್ರದವರು 15ನೇ ತಾರೀಖು ನಾನು ಹೋಗಿ ಒಂದು ಶಾಲು ಹಾಕಿ ಹಣ್ಣು ಕೊಟ್ಟು ಅವರ ಕಾಲಿಗೆ ನಮಸ್ಕಾರ ಮಾಡಿ ಬಂದಾಗ ಅವರು ಮಾತನಾಡುತ್ತಿರಲಿಲ್ಲ, ಅವರು 20 ನೇ ತಾರೀಖು ನಿಧನರಾದರು. ಬೆಳಿಗ್ಗೆ ಆರೂವರೆಗೆ ಫೋನ್ ಬಂತು, ಹೋದಾಗ ಅವರ ಮನೆ ಹತ್ತಿರ ಯಾರೂ ಇಲ್ಲ, ಮೊಮ್ಮಕ್ಕಳು ಸೊಸೆಯರಿದ್ದರು ಮತ್ತು ಅಳಿಯ ಹನುಮಂತರಾಯಪ್ಪ ಇದ್ದರು, ಅದನ್ನು ನೋಡಿದಾಗ ಒಂದು ಸ್ಮಶಾನಮೌನವಾಗಿತ್ತು, ಕಾರಣ ಅವರು ಅಷ್ಟು ಬಡತನಕ್ಕೆ ಸಿಲುಕಿ ರಾಜಕಾರಣ ಮಾಡಿ ಪ್ರಾಮಾಣಿಕವಾಗಿ ನಡೆದದ್ದಕ್ಕೆ ಕೊನೆಗೆ ಸಿಕ್ಕಿದ್ದು ಯಾವ ಜನರೂ ಅಲ್ಲಿ ಇರಲಿಲ್ಲ. ನಮ್ಮ ಮಾನ್ಯ ಮಂತ್ರಿಗಳಾದ ಶ್ರೀ ಪರಮೇಶ್ವರ್ ಅವರು ಬಂದರು, ಗಾರ್ಲೆಂಡ್ ಮಾಡಿದರು, ಸಂತಾಪ ಹೇಳಿದರು. ಅವರು ಹೊರಟುಹೋದ ನಂತರ ಮತ್ತೆ ಅಲ್ಲಿ ಸುಮಾರು 20–30 ಜನ ಮಾತ್ರ ಇದ್ದರು. ಆಗ ಆ ಕ್ಷೇತ್ರದ ಎಲ್ಲಾ ಪಕ್ಷಗಳ ಮುಖಂಡರೂ

ಕಣ್ಣೀರು ಹಾಕಿದರು. ಕಾರಣ ಅವರ ಕುಟುಂಬ ಅಷ್ಟು ಇವತ್ತು ನೋವಿನಲ್ಲಿದೆ. ಆದ್ದರಿಂದ ನನಗೆ ಅನ್ನಿಸುವತ್ತದೆ, ಏನು ಈವತ್ತು ಉತ್ತಮವಾದ ರಾಜಕಾರಣ ಮಾಡಿದ ಶ್ರೀ ಮುದ್ದುರಾಮಯ್ಯನವರಿಗೆ ಕೊನೆಗೆ ಸಿಕ್ಕಿದ್ದು ನಿಜವಾದ ಸಾಮಾಜಿಕ ಗೌರವ ಅಂದರೆ ಎಲ್ಲರೂ ಕಣ್ಣೀರು ಹಾಕಿದಂತಹ ಸಂದರ್ಭ. ಅದೇ ರೀತಿ ಉತ್ತಮವಾದಂತಹ ಸೇವೆ ಮಾಡಿ ಜನಗಳಿಗೆ ಅದರಲ್ಲೂ ನಮ್ಮ ಕ್ಷೇತ್ರಕ್ಕೆ ಅತ್ಯುತ್ತಮ ನಾಯಕರೆಂದು ಹೆಸರು ಪಡೆದುಕೊಂಡು ಸ್ವಾತಂತ್ರ್ಯ ಹೋರಾಟಗಾರರಾಗಿದ್ದಂತಹ ಸನ್ಮಾನ್ಯ ಮುದ್ದು ರಾಮಯ್ಯನವರ ಸೇವೆ ನಮ್ಮೆಲ್ಲರಿಗೂ ಉದಾಹರಣೆ ಆಗಲಿ. ನಮ್ಮೆಲ್ಲರಿಗೂ ನಿಜವಾಗಿ ಅವರ ದಾರಿಯನ್ನು ಹಿಡಿಯುವಂತಹ ಮಾರ್ಗ ಸಿಗಲಿ ಎಂದು ಆಶಿಸುತ್ತೇನೆ. ಅವರ ಆತ್ಮಕ್ಕೆ ಮತ್ತು ಕುಟುಂಬಕ್ಕೆ ದುಃಖವನ್ನು ಭರಿಸುವಂತಹ ಹೆಚ್ಚಿನ ಶಕ್ತಿಯನ್ನು ಪರಮಾತ್ಮ ಕರುಣಿಸಲಿ ಎಂದು ಪರಮಾತ್ಮನಲ್ಲಿ ಪ್ರಾರ್ಥನೆ ಮಾಡಿಕೊಂಡು ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

**+ ಶ್ರೀ ಚಂದ್ರಕಾಂತ್ ಬೆಲ್ಲದ್ ಗುರಪ್ಪ (ಧಾರವಾಡ ಗ್ರಾಮಾಂತರ)** : ಸನ್ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವಂತಹ ಸಂತಾಪ ಸೂಚನೆಯನ್ನು ಸ್ವಾಗತಿಸುತ್ತೇನೆ. ನಾಡಿನ ಕರ್ನಾಟಕದ ಅನೇಕ ಹಿರಿಯರು, ಸಾಹಿತಿಗಳು, ಚಲನಚಿತ್ರ ರಂಗದಲ್ಲಿ ತಮ್ಮದೇ ಆದಂತಹ ಪಾತ್ರವನ್ನು ಮಾಡಿದಂತಹ, ಸೇವೆಯನ್ನು ಮಾಡಿದಂತಹವರು ಅಗಲಿದ್ದಾರೆ. ಅವರೆಲ್ಲರ ಬಗ್ಗೆ ಈಗಾಗಲೇ ನಮ್ಮ ನಾಯಕರುಗಳು ಮಾತನಾಡಿದ್ದಾರೆ ಹಾಗೂ ನಮ್ಮ ಸ್ನೇಹಿತರುಗಳೂ ಮಾತನಾಡಿದ್ದಾರೆ. ಇವತ್ತು ಬಹಳ ಮುಖ್ಯವಾಗಿ ನಾನು ಮಾತನಾಡುತ್ತಿರುವುದು ಸನ್ಮಾನ್ಯ ವೈ.ಕೆ. ರಾಮಯ್ಯನವರ ಬಗ್ಗೆ ಅವರ ಬಗ್ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳೂ ಮಾತನಾಡಿದ್ದಾರೆ, ನಮ್ಮ ನಾಯಕರೂ ಮಾತನಾಡಿದ್ದಾರೆ. ಅನೇಕ ಸ್ನೇಹಿತರೂ ಮಾತನಾಡಿದ್ದಾರೆ. ಬಹುಶಃ ನಾನು ಅವರನ್ನು ಮೊದಲನೆಯ ಸಲ ನೋಡಿದ್ದು 1985 ರಲ್ಲಿ ಶಾಸಕನಾಗಿ ಬಂದಾಗ, ಅವರು ರೇಷ್ಮೆ ಇಲಾಖೆಯ ಸಚಿವರಾಗಿದ್ದರು. ಅದೇ ಕಾಲಕ್ಕೆ ಅವರಿಗೆ ಆ ಇಲಾಖೆಯಲ್ಲಿರುವಂತಹ ಪ್ರೀತಿ, ಕಳಕಳಿ ನೋಡಿದರೆ ನಮ್ಮ ಉತ್ತರ ಕರ್ನಾಟಕದಲ್ಲಿ ಸಹ ಅವರನ್ನು ನಾನು ವಿನಂತಿ ಮಾಡಿಕೊಂಡೆ ಹಳೆಯ ಮೈಸೂರಿನಲ್ಲಿ ಮಾತ್ರ ಈ ರೇಷ್ಮೆ ಬೆಳವಣಿಗೆ ಹೆಚ್ಚಾಗಿದೆ. ಇಲ್ಲೇನು ಸಣ್ಣ ರೈತರು ಇದ್ದಾರೆ, ಅದೇ ಪ್ರಕಾರ ನಮ್ಮ ಉತ್ತರ ಕರ್ನಾಟಕದಲ್ಲೂ ಸಹಿತ ಸಣ್ಣ ರೈತರು ಇದ್ದಾರೆ. ಒಂದು ಎಕರೆ, ಎರಡು ಎಕರೆ ಇರುವಂತಹ ಸಣ್ಣ ರೈತರು ಇದ್ದಾರೆ. ಅಲ್ಲಿಯೂ ಸಹಿತ ಈ ರೇಷ್ಮೆಯ ಬೆಳವಣಿಗೆ ಆಗಬೇಕು. ರೈತರಿಗೆ ಸಹಾಯ ಆಗಬೇಕು ಎಂದಾಗ ಅವರು ಹೆಚ್ಚು ಆಸಕ್ತಿಯಿಂದ ನಮ್ಮ ಧಾರವಾಡ ಜಿಲ್ಲೆಯ ರಾಯಪುರದಲ್ಲಿ ಅದರ ಕೇಂದ್ರವನ್ನು ಮಾಡಿ ಅಧಿಕಾರಿಗಳನ್ನು ನೇಮಿಸಿ ಆ ಬೆಳವಣಿಗೆಗೆ ಸಹಾಯ ಮಾಡಿದರು ಮತ್ತು ಅವರು ತಮ್ಮ ಜೀವನದ ವಿಚಾರಗಳನ್ನು ಹೇಳುತ್ತಿದ್ದರು. ನಾನೂ ಬಹಳ ಕಷ್ಟದಿಂದ ಬಂದಿದ್ದೇನೆ ಬೆಲ್ಲದ್ ಅವರೇ, ನಮ್ಮ ಮನೆಯಲ್ಲಿ ಕುರಿ, ಆಡು ಇಂತಹವೆ ಇದ್ದವು, ಸಣ್ಣ ಕುಟುಂಬ ಇತ್ತು. ನಾವೆಲ್ಲಾ ಅವನ್ನು ಕಾಯ್ದೆವು. ಒಂದು ಎಕರೆಯ ರೇಷ್ಮೆ ವ್ಯವಸಾಯದಿಂದಲೇ ನಾನು ಎಲ್‌ಎಲ್‌ಬಿ ಮಾಡಿದ್ದೇನೆ. ವಕೀಲ ಆಗಿದ್ದೇನೆ. ರಾಜಕೀಯಕ್ಕೆ ಬಂದಿದ್ದೇನೆ ಎನ್ನುವಂತಹ ವಿಚಾರವನ್ನು ಅವರು ಹೇಳುತ್ತಿದ್ದರು. ಒಬ್ಬ ನಿಷ್ಠಾವಂತ ರಾಜಕಾರಣಿ ಮತ್ತು ಸಮಾಜದ ರೈತರ ಬಗ್ಗೆ ಮತ್ತು ಸಣ್ಣ ಜನರ ಬಗ್ಗೆ ಬಹಳ ಕಳಕಳಿ ಇರುವಂತಹ ಒಬ್ಬ ವ್ಯಕ್ತಿ ಅವರಾಗಿದ್ದರು ಮತ್ತು ನಿಷ್ಠೂರವಾದಿಗಳಾಗಿದ್ದರು. ನೀರಾವರಿ ಬಗ್ಗೆ ಅವರು ಮಾಡಿದಂತಹ ಕೆಲಸ ಇರಲಿ, ಪರಿಸರದ ಬಗ್ಗೆ ಮಾಡಿರುವಂತಹ ಕೆಲಸ ಇರಲಿ,

ಅವೆಲ್ಲದರ ಬಗ್ಗೆ ಈಗಾಗಲೇ ಎಲ್ಲರೂ ಮೆಚ್ಚಿಕೊಂಡಿದ್ದಾರೆ. ನಿಷ್ಠಾವಂತ, ಸಮರ್ಥ ರಾಜಕಾರಣಿಗಳನ್ನು ನಾವು ಕಳೆದುಕೊಂಡು ಇವತ್ತು ಕರ್ನಾಟಕ ರಾಜ್ಯ ಬಡವಾಗಿದೆ ಎಂದು ಹೇಳಬೇಕಾಗುತ್ತದೆ. ಅದರಂತೆ ಸನ್ಮಾನ್ಯ ಜೆ. ಮಲ್ಲಿಕಾರ್ಜುನಪ್ಪನವರು. ಮಾನ್ಯ ಮಲ್ಲಿಕಾರ್ಜುನಪ್ಪನವರು ನಮ್ಮ ಪಾರ್ಟಿಯ ಒಬ್ಬ ಲೋಕಸಭಾ ಸದಸ್ಯರಾಗಿ ಎರಡು ಸಲ ದಾವಣಗೆರೆಯ ಭಾಗದಿಂದ ಆರಿಸಿ ಬಂದಂಥವರು. ಬಹಳ ಹಿರಿಯರು. ಬಹುಶಃ ಅವರಷ್ಟು ಶ್ರೀಮಂತಿಕೆ ಇರಬಹುದು, ಅಂತಹ ಒಂದು ವಯಸ್ಸಾದಂತಹ ವ್ಯಕ್ತಿ ಆ ಜನರ ಬಗ್ಗೆ ಪ್ರತಿ ಒಂದು ಗ್ರಾಮಗಳಿಗೆ ಹೋಗಿ ಅವರು ಮಾಡಿದಂತಹ ಕಾರ್ಯವನ್ನು ನೋಡಿದರೆ ನಾವ್ಯಾರು ಯುವಕರು ಸಹಿತ ನಾಚಿಕೊಳ್ಳಬೇಕಾಗುತ್ತದೆ. ಅಂತಹ ಒಂದು ವ್ಯಕ್ತಿತ್ವವನ್ನು ಪಡೆದಿದ್ದರು. ಮತ್ತು ಒಬ್ಬ ಆಗರ್ಭ ಶ್ರೀ ಮಂತರಾಗಿದ್ದರು ಸಹ ಬಹಳ ಸೌಜನ್ಯದ, ಸದ್ವಿನಿಯದ ವ್ಯಕ್ತಿಗಳಾಗಿ ಅವರು ಕಾರ್ಯ ಮಾಡಿದ್ದರು. ಅವರು ಮಾಡಿದಂತಹ ಕಾರ್ಯ ಅವರು ಶಿಕ್ಷಣಕ್ಕಾಗಿ ನೀಡಿದಂತಹ ಸೇವೆ ಮತ್ತು ಜನತೆಗಾಗಿ ಮಾಡಿದಂತಹ ಕಾರ್ಯ ಮತ್ತು ಸಮಾಜಕ್ಕಾಗಿ ಮಾಡಿದಂತಹ ಸಾಮಾಜಿಕ ಕಾರ್ಯಗಳನ್ನು ನಾವು ಇವತ್ತು ಸ್ಮರಿಸಿಕೊಳ್ಳಬೇಕಾಗುತ್ತದೆ. ಅಂತಹ ಒಬ್ಬ ವ್ಯಕ್ತಿ ಲೋಕಸಭಾ ಸದಸ್ಯರಾಗಿ ಮಾಡಿದ್ದನ್ನು ನಾವು ಸ್ಮರಿಸಿಕೊಂಡು ಅವರ ಕುಟುಂಬಕ್ಕೆ ಆದಂತಹ ದುಃಖದಲ್ಲಿ ನಾವುಗಳೆಲ್ಲಾ ಭಾಗಿಗಳಾಗಿದ್ದೇವೆ. ಅವರ ಆದರ್ಶಗಳನ್ನು ಸಹಿತ ನಾವು ಅನೇಕ ರಾಜಕಾರಣಿಗಳು ಇವತ್ತು ಅನುಸರಿಸಬೇಕಾಗುತ್ತದೇನೋ ಎನ್ನುವಂತಹ ವಿಚಾರವನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಅದರಂತೆ ಶ್ರೀ ಬದರಿ ನಾರಾಯಣಿಯವರ ವಿಚಾರ. ಶ್ರೀ ಬದರಿ ನಾರಾಯಣ್‌ರವರು ಬಹಳ ಹಿರಿಯರು. ಬಹುಶಃ ನಮಗೆ ನಿಜಲಿಂಗಪ್ಪನವರ ಕಾಲದಲ್ಲಿ ಅವರು ಶಿಕ್ಷಣ ಮಂತ್ರಿಗಳಾಗಿ ಕೆಲಸ ಮಾಡಿದಂತಹವರು. ಬಹುಶಃ ನಮ್ಮ ರಾಷ್ಟ್ರ ನಾಯಕರಾದಂತಹ ಶ್ರೀ ಎಸ್. ನಿಜಲಿಂಗಪ್ಪನವರ ಒಂದು ಪ್ರತಿಷ್ಠಾನವನ್ನು ಮಾಡಿದಾಗ ರಾಷ್ಟ್ರ ಮಟ್ಟದಲ್ಲಿ ಅನೇಕ ನಾಯಕರು ಪ್ರತಿಷ್ಠಾನದ ಅಧ್ಯಕ್ಷರಾಗಲು ಸಮರ್ಥವಾದಂತಹ ವ್ಯಕ್ತಿಗಳು ಇದ್ದರು. ಆದರೆ ನಮ್ಮ ರಾಜ್ಯದಲ್ಲಿ ಯಾರು ನಿಜಲಿಂಗಪ್ಪನವರ ಒಂದು ಪ್ರತಿಷ್ಠಾನಕ್ಕೆ ಅಧ್ಯಕ್ಷರಾಗಲು ಯೋಗ್ಯರು ಎಂದು ವಿಚಾರ ಮಾಡಿದಾಗ ಶ್ರೀ ಬದರಿ ನಾರಾಯಣರವರು ಆ ಪ್ರತಿಷ್ಠಾನಕ್ಕೆ ಅಧ್ಯಕ್ಷರಾಗಲು ಯೋಗ್ಯರು ಎಂದು ಹೇಳಿ ಸನ್ಮಾನ್ಯ ರಾಷ್ಟ್ರ ನಾಯಕರಾದಂತಹ ಶ್ರೀ ಎಸ್. ನಿಜಲಿಂಗಪ್ಪನವರ ಪ್ರತಿಷ್ಠಾನಕ್ಕೆ ಅವರನ್ನು ಅಧ್ಯಕ್ಷರನ್ನಾಗಿ ಮಾಡಿದೆವು. ಅವರ ಆರೋಗ್ಯ ಸರಿಯಿಲ್ಲದಿದ್ದರು ಸಹಿತ ಪ್ರತಿಷ್ಠಾನದ ಎಲ್ಲಾ ಮೀಟಿಂಗ್‌ಗಳನ್ನು ಅವರ ಮನೆಯಲ್ಲಿಯೇ ಮಾಡುತ್ತಿದ್ದೆವು. ಇಂತಹ ಒಬ್ಬ ಆದರ್ಶ ರಾಜಕಾರಣಿ. ಸಾಮಾಜಿಕ ಕಳಕಳಿಯುಳ್ಳ ಒಬ್ಬ ಉತ್ತಮವಾದಂತಹ ಗಾಂಧೀವಾದಿಗಳು ಅವರು ಆಗಿದ್ದರು ಎನ್ನುವುದಕ್ಕೆ ಇದಕ್ಕಿಂತ ಮತ್ತೆ ಹೆಚ್ಚಿನದನ್ನು ಹೇಳಬೇಕಾಗಿಲ್ಲ. ಅವರ ಆದರ್ಶವನ್ನು ಸಹಿತ ನಾವು ರಾಜಕಾರಣಿಗಳು ಆದವರು ಇವತ್ತು ನಮ್ಮ ಜೀವನದಲ್ಲಿ ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ ಎನ್ನುವಂತಹ ವಿಚಾರವನ್ನು ಹೇಳುತ್ತೇನೆ. ಶ್ರೀ ಕೆ.ಪಿ.ಶಾಂತಮೂರ್ತಿಯವರು ಸಹಿತ ಎರಡು ಸಲ ಶಾಸಕರಾಗಿ ಕೆಲಸ ಮಾಡಿದಂತಹವರು. ಮತ್ತು ಅವರು ನಮ್ಮ ಅಖಿಲ ಭಾರತ ವೀರಶೈವ ಮಹಾಸಭೆಯ ರಾಜ್ಯ ಅಧ್ಯಕ್ಷರಾಗಿ ಸಹ ಕೆಲಸ ಮಾಡಿದ್ದರು. ಆ ಭಾಗದಲ್ಲಿ ಅವರು ಮಾಡಿದಂತಹ ಕೆಲಸವನ್ನು ಜನತೆ ಮತ್ತು ಅಲ್ಲಿರುವ ಯಾವ ಸಾಮಾಜಿಕ ಮತ್ತು ಧಾರ್ಮಿಕ ಕೆಲಸಗಳನ್ನು ಮಾಡಿದ್ದಾರೆ, ಅವನ್ನೆಲ್ಲಾ ನಾವು ಸ್ಮರಿಸಿಕೊಂಡು ಅವರ ಬಗ್ಗೆ ನಮಗೂ ಸಹ ಖೇದವಾಗಿದೆ. ಅವರ ಬಗ್ಗೆ ಎಲ್ಲಾ ಜನ ಏನು ನಾಲ್ಕು ಮಾತುಗಳನ್ನು ಹೇಳಿದ್ದಾರೆ, ಆ ವಿಚಾರಗಳಲ್ಲಿ ನಾವೂ ಸಹಿತ ಅವರ ವಿಚಾರಗಳನ್ನು

ನಮ್ಮ ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾಗುತ್ತದೆ. ಶ್ರೀ ಪಿ.ಸಿ. ಶೆಟ್ಟರ್ ಅವರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳೂ ಮಾತನಾಡಿದ್ದಾರೆ. ಎಲ್ಲರೂ ಮಾತನಾಡಿದ್ದಾರೆ. ಅವರ ವಿಚಾರ ಬಹಳ ಇದೆ. ಶ್ರೀ ಪಿ.ಸಿ. ಶೆಟ್ಟರ್ ಅವರು ಬಹಳ ಜಿಗುಟಾದಂತಹ ವ್ಯಕ್ತಿ ಮತ್ತು ಹಠವಾದಿ. ಅಂತಹ ಹಠವಾದಿತನದಿಂದಾಗಿ ಅವರು ಜೀವನದಲ್ಲಿ ಮುಂದೆ ಎಂಎಲ್ಎ ಆಗಲಿಲ್ಲ. ಅದೇ ಒಂದು ಕಾರಣದಿಂದ ಆಗಲಿಲ್ಲ. ಇಲ್ಲ ಎಂದರೆ ಆ ಭಾಗದಲ್ಲಿ ಮುಂದೆ ಅವರು ಎಂಎಲ್ಎ ಆಗಿ ಬರಬಹುದಾಗಿತ್ತು ಆದರೆ ಬಹಳ ಜಿಗುಟಾದಂತಹ, ಹಠವಾದಿ ಇದ್ದುದರಿಂದ ಅವರು ಮುಂದೆ ಬರಲಿಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಹೇಳಬೇಕಾಗುತ್ತದೆ. ಇವತ್ತು ಶ್ರೀ ಜಿ.ವಿ. ಅಯ್ಯರ್ ಅವರ ಬಗ್ಗೆ ಬಹಳಷ್ಟು ಜನ ಮಾತನಾಡಿದ್ದಾರೆ. ಶ್ರೀ ಅಯ್ಯರ ಅವರು ಈ ಕನ್ನಡ ಚಿತ್ರ ಲೋಕಕ್ಕೆ ಕೊಟ್ಟಂತಹ ಕಾಣಿಕೆ ಎಂದೆ, ದೊಡ್ಡ ಜೀವನ ಮೌಲ್ಯಗಳಿರುವಂತಹ ಚಿತ್ರಗಳನ್ನು, ಮಾನವೀಯ ಮೌಲ್ಯಗಳಿರುವಂತಹ ಚಿತ್ರಗಳನ್ನು ಕನ್ನಡ ನಾಡಿಗೆ ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟಂತಹ ಕಾಣಿಕೆ ಎಂದರೆ, ದೊಡ್ಡ ಜೀವನ ಮೌಲ್ಯಗಳಿರುವಂತಹ ಚಿತ್ರಗಳನ್ನು ಕನ್ನಡ ನಾಡಿಗೆ ಕನ್ನಡ ಸಾರಸ್ವತ ಲೋಕಕ್ಕೆ ಕೊಟ್ಟಿದ್ದಾರೆ. ಅವರ ಚಿತ್ರಗಳು ಎಲ್ಲಾ ಜನರ ಮೆಚ್ಚಿಗೆಯನ್ನು ಪಡೆದಂತಹವು ಮತ್ತು ಅವರ ನೀಡಿದಂತಹ ಈ ಚಲನ ಚಿತ್ರದ ಬೆಳವಣಿಗೆಗೆ ಕೊಡುಗೆಯನ್ನು ನಾವೆಲ್ಲರೂ ಸ್ಮರಿಸಿಕೊಳ್ಳಬೇಕಾಗುತ್ತದೆ. ಅನೇಕ ನಟರನ್ನೂ ಸಹಿತ ಅವರು ಬೆಳವಣಿಗೆ ಮಾಡಿದಂತಹ ವ್ಯಕ್ತಿಗಳಾಗಿದ್ದಾರೆ. ಶ್ರೀ ಕೆ.ಎಸ್. ನರಸಿಂಹ ಸ್ವಾಮಿಯವರು ಮತ್ತು ಶ್ರೀ ಎ. ಎನ್. ಮೂರ್ತಿರಾವ್‌ರ ಇವರು ಬಹಳ ದೊಡ್ಡಕವಿ ಮತ್ತು ಸಾಹಿತಿಗಳಾಗಿ ಈ ಕನ್ನಡ ಸಾರಸ್ವತ ಲೋಕಕ್ಕೆ ನೀಡಿದಂತಹ ಸಾಹಿತ್ಯದ ಕೊಡುಗೆ, ಅವರು ಸಾಹಿತ್ಯದ ಬೆಳವಣಿಗೆಗೆ ಮಾಡಿದಂತಹ ಸೇವೆಯನ್ನು ನಾವು ಇವತ್ತು ಅವರನ್ನು ಸ್ಮರಿಸಿಕೊಳ್ಳಬೇಕಾಗುತ್ತದೆ. ಜೊತೆಗೆ ಶ್ರೀ ಆರ್.ಕೆ.ಸೂರ್ಯನಾರಾಯಣ್ ಅವರ ವಿಚಾರ. ಶ್ರೀಯುತರು ಖ್ಯಾತ ವೀಣಾ ವಿದ್ವಾನ್. ಇವರ ಜೊತೆ ನನಗೆ ಸಮೀಪದ ಸಂಪರ್ಕ 1985ರಲ್ಲಿ ಬಂದಿತ್ತು. ಒಬ್ಬ ಚಿಕ್ಕ ವಯಸ್ಸಿನಲ್ಲಿಯೇ ವೀಣಾ ವಿದ್ವಾನ್ ಆಗಿ ಅನೇಕ ಪ್ರಶಸ್ತಿಗಳನ್ನು ಪಡೆದಂತಹವರು. ಅವರೂ ಸಹಿತ ನಮ್ಮಿಂದ ಇವತ್ತು ಅಗಲಿದ್ದಾರೆ. ಅವರು ದೊಡ್ಡ ವಿದ್ವಾನ್ ಆಗಿ ನಮ್ಮ ನಾಡಿಗೆ ತಮ್ಮ ಸೇವೆ ಮಾಡಿದಂತಹ ವೀಣಾ ವಾದಕರಾಗಿದ್ದರು. ಮತ್ತೊಬ್ಬರು ಹಿರಿಯ ನಟ ಶ್ರೀ ಗಂಗಾಧರ್ ಅವರು. ಬಹಳ ಚಿಕ್ಕ ವಯಸ್ಸಿನಲ್ಲಿಯೇ ಇವತ್ತು ಮೆಕ್ಯಾನಿಕಲ್ ಇಂಜಿನಿಯರ್ ಆಗಿದ್ದಂತಹವರು, ಸಂತಾಪ ಸೂಚನೆಯಲ್ಲಿ ಅವರ ಹೆಸರು, ಬಿಟ್ಟು ಹೋಗಿರುವುದನ್ನು ತಾವು ಸೇರಿಸಿಕೊಳ್ಳಬೇಕಾಗುತ್ತದೆ.

**ಅಧ್ಯಕ್ಷರು** : ಬೈ ಮಿಸ್ಟೇಕ್ ಆಗಿದೆ. ಸೇರಿಸಿಕೊಳ್ಳೋಣ.

**ಶ್ರೀ ಚಂದ್ರಕಾಂತ್ ಬೆಲ್ಲದ ಗುರಪ್ಪ** : ಶ್ರೀಯುತ ಗಂಗಾಧರ್ ಅವರು ಕನ್ನಡ ಚಿತ್ರರಂಗದ ಹಿರಿಯ ಪ್ರತಿಭಾವಂತ ನಟ. ಕನ್ನಡ ಚಲನಚಿತ್ರ ರಂಗಕ್ಕೆ ಅವರ ಕೊಡುಗೆ ಏನು ಇದೇ? ಅವರು ಏನು ಕೊಡುಗೆಯನ್ನು ಕೊಟ್ಟಿದ್ದಾರೆ. ಅದನ್ನು ಸಹಿತ ತಾವು ಇವತ್ತು ಸೇರಿಸಿದ್ದೀರಿ. ಸಂತೋಷ ಉಳಿದ ಅಗಲಿದ ಎಲ್ಲಾ ನಾಯಕರಿಗೆ, ನಮ್ಮ ನಾಡಿಗೆ, ಕನ್ನಡ ನಾಡಿಗೆ ಸೇವೆ ಮಾಡಿರುವಂತಹ ಎಲ್ಲಾ ಶಾಸಕರುಗಳಿಗೆ ಲೋಕಸಭಾ ಸದಸ್ಯರುಗಳಿಗೆ ಮತ್ತು ಸಾಹಿತಿಗಳಿಗೆ ಯಾವತ್ತು ಈ ಜನ ನೀಡಿದಂತಹ ಸೇವೆಯನ್ನು ನಾವು ಸ್ಮರಿಸಿಕೊಂಡು ಈ ನಾಡು ಅವರ ಆದರ್ಶವಾದಂತಹ ಜೀವನವನ್ನು ನಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ನಮ್ಮ ಕಾರ್ಯವನ್ನು ಮಾಡೋಣ. ಮತ್ತು ಅವರ ಕುಟುಂಬಕ್ಕೆ ಅವರ ಅಗಲಿಕೆಯಿಂದ ಉಂಟಾದ ದುಃಖವನ್ನು ಭರಿಸುವಂತಹ ಶಕ್ತಿ ದೇವರು ನೀಡಲಿ ನಾವೆಲ್ಲರೂ

ಅವರ ಆತ್ಮಕ್ಕೆ ಶಾಂತಿಯನ್ನು ಕೋರೋಣ ಎಂದು ಹೇಳಿ ತಾವು ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಬಿ.ಆರ್. ಯಾವಗಲ್(ನರಗುಂದ)** : ಸನ್ಮಾನ್ಯ ಅಧ್ಯಕ್ಷರೆ, ಇವತ್ತಿನ ಈ ಸಂತಾಪ ಸೂಚನೆಯನ್ನು ಏನು ಇದೆ, ಇದರ ಬಗ್ಗೆ ನನ್ನ ಬೆಂಬಲವನ್ನು ವ್ಯಕ್ತ ಮಾಡುತ್ತಾ ವಿಶೇಷವಾಗಿ ಹಲವಾರು ದಿಗ್ಗಜಗಳಲ್ಲಿ ರಾಜಕೀಯ ಕ್ಷೇತ್ರದಿಂದ ಬಂದಂತಹ ನೇರವಾಗಿ ನಮ್ಮ ಜೊತೆ ಸಂಬಂಧ ಹೊಂದಿದ್ದಂತಹ ಸನ್ಮಾನ್ಯ ಶ್ರೀ ವೈ.ಕೆ. ರಾಮಯ್ಯನವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನನ್ನ ಪಕ್ಕದ ಸೀಟಿನಲ್ಲಿ ಅವರು ಆಸೀನರಾಗುತ್ತಿದ್ದರು. ಬಹುತೇಕ ಅವರು ಸದನದಲ್ಲಿದ್ದಾಗಲೆಲ್ಲಾ ಬಹಳ ಗಂಭೀರವಾಗಿ ಚರ್ಚೆಯ ಆಗು ಹೋಗುಗಳ ಬಗ್ಗೆ ಕೇಳುತ್ತಿದ್ದರು. ಗಮನ ಹರಿಸುತ್ತಿದ್ದರು. ಅದೂ ವಿಶೇಷವಾಗಿ ವಿರೋಧ ಪಕ್ಷದ ನಾಯಕರ ಭಾಷಣಗಳನ್ನು ಬಹಳ ಗಂಭೀರವಾಗಿ ಆಲಿಸುತ್ತಿದ್ದರು. ವಿಶಿಷ್ಟ ವ್ಯಕ್ತಿತ್ವ ಹೊಂದಿದ್ದರಲ್ಲದೆ, ಕೃಷಿ, ರೈತ ಮತ್ತು ಗ್ರಾಮದ ಬಗ್ಗೆ ಶ್ರೇಷ್ಠವಾದ ಸಾಮಾಜಿಕ ಕಳಕಳಿ ಹೊಂದಿದಂಥ ಜನರನ್ನು ನೋಡುವುದೇ ಬಹಳ ದುರ್ಲಭವೆಂಬ ಭಾವನೆ ನನಗಿದೆ. ಇದರ ಜೊತೆಗೆ ಮಾನ್ಯ ಸದಸ್ಯರಾದ ಶ್ರೀ ಎಸ್.ಪಿ. ಮುದ್ದಹನುಮೇಗೌಡರು ಹೇಳಿರುವಂತೆ ಅವರಲ್ಲಿದ್ದಂಥ ಆಕ್ರೋಶ, ಸಿಟ್ಟು, ಎಷ್ಟಿತ್ತೆಂದರೆ, ನೂರಾರು ಜನರ ಸಿಟ್ಟು ಸೇರಿದರೆ ಎಷ್ಟಾಗುತ್ತಿತ್ತೋ ಅಷ್ಟಾಗುವುದಕ್ಕೆ ಸಾಧ್ಯವಿತ್ತು ಎನ್ನುವ ಭಾವನೆಯಿತ್ತು. ಕ್ಷಣಕ್ಷಣಕ್ಕೂ ಅವರು ಸಿಟ್ಟಾಗುತ್ತಿದ್ದರು. ಕೆಲವು ಸಂದರ್ಭದಲ್ಲಿ ಅವರು ಅನಾವಶ್ಯಕವಾಗಿ ಸಿಟ್ಟುಗೊಳ್ಳುತ್ತಿದ್ದರು. ಇಂತಹ ವ್ಯಕ್ತಿತ್ವವನ್ನು ಕಾಣುವುದು ಬಹಳ ಅಪರೂಪ. ಅದರಲ್ಲೂ ವಿಶೇಷವಾಗಿ ಅಧಿಕಾರಶಾಹಿ ಹಾಗು ಆಡಳಿತದ ಪ್ರಶ್ನೆ ಬಂದಾಗ ಅವರು ಉರಿದು ಕೆಂಡವಾಗುವಂತಹ ಸನ್ನಿವೇಶವನ್ನು ನಾವು ಕಾಣುತ್ತಿದ್ದೆವು. ಶ್ರೀಯುತರು ಸಮಿತಿ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಸಮಿತಿ ಅಧ್ಯಯನ ಪ್ರವಾಸ ಕೈಗೊಂಡ ಸಂದರ್ಭದಲ್ಲಿ ಮತ್ತು ನಾನು ಅಧ್ಯಕ್ಷನಾಗಿದ್ದ ಒಂದು ಸಮಿತಿಯಲ್ಲಿ ಅವರು ಸದಸ್ಯರಾಗಿ ಮಾತನಾಡುತ್ತಿದ್ದರೆ ಬೇರೆಯವರಿಗೆ ಅವಕಾಶವಿರುತ್ತಿರಲಿಲ್ಲ! ಅವರು ಹೇಳುವಂತಹ ವಿಚಾರಕ್ಕೆ ಪ್ರತಿಯಾಗಿ ಹೇಳುವಂಥ ದಾಷ್ಟ್ಯತೆ ಅಲ್ಲಿದ್ದ ಯಾರಿಗೂ ಇರುತ್ತಿರಲಿಲ್ಲ! ಮತ್ತು ಅವರು ಹೇಳಿದ್ದನ್ನು ಯಾರಿಗೂ ಹೇಳುವುದಕ್ಕೆ ಸಾಧ್ಯವಿರುತ್ತಿರಲಿಲ್ಲ. ಇದಕ್ಕೆ ಒಂದು ತರಹ ಅಂಜಿಕೆ ಅಥವಾ ಮುಜುಗರ ಕಾರಣವಿರಬಹುದು. ಆದರೆ, ಅವರಲ್ಲಿ ಈ ಅಂಜಿಕೆಯಾಗಲಿ, ಮುಜುಗರವಾಗಲಿ ಯಾವುದೂ ಇರಲಿಲ್ಲ. ಸತ್ಯದ ಸಮೀಪ ಹೋಗಿ ಪ್ರಶ್ನಿಸುವ ಅವರ ನಡವಳಿಕೆ ಬಹಳ ಅಪರೂಪದ್ದು ಹಾಗೂ ಮೆಚ್ಚುವಂಥಾದ್ದು ವಿಶೇಷವಾಗಿ ಕುವೆಂಪು ಸಾಹಿತ್ಯ ಹಾಗು ಅವರ ವ್ಯಕ್ತಿತ್ವದ ವಿಚಾರಧಾರೆಗಳಲ್ಲಿ ತೀವ್ರವಾದ ತಾದಾತ್ಮ ಹೊಂದಿ ಅದರಲ್ಲೇ ಆಳವಾಗಿ ಮುಳುಗಿದ್ದರು. ಖಾಸಗಿಯಾಗಿ 'ವಿಶ್ವಮಾನವ' ವೇದಿಕೆಯನ್ನು ಹುಟ್ಟುಹಾಕುವತ್ತಿದ್ದರು ಸದರಿ ವೇದಿಕೆಗೆ ನನ್ನನ್ನು ಪ್ರಧಾನ ಕಾರ್ಯದರ್ಶಿಯನ್ನಾಗಿ ಸಹ ನೇಮಿಸಿದ್ದರು ವಿಶ್ವಮಾನವ ವೇದಿಕೆಯನ್ನು ಎಲ್ಲಾ ಕಡೆಗಳಲ್ಲೂ ಸ್ಥಾಪಿಸುವ ಬಗ್ಗೆ ಅಗಾಧ ಕಳಕಳಿ, ಆಸಕ್ತಿ ಹೊಂದಿ ಅದರಲ್ಲೇ ತಮ್ಮನ್ನು ಆಳವಾಗಿ ತೊಡಗಿಸಿಕೊಂಡಿದ್ದ ಅವರು, ಕುವೆಂಪು ಜನ್ಮ ಶತಮಾನೋತ್ಸವ ಆಚರಿಸುತ್ತಿರುವ ಸಂದರ್ಭದಲ್ಲಿ ಅವೆಲ್ಲವೂ ಪರ್ಯಾವಸಾನಗೊಂಡಿತೆಂದು ನಾನು ಭಾವಿಸುತ್ತೇನೆ. ಕೊನೆಯದಾಗಿ ಹೇಳುವುದಾದರೆ, ಅವರಲ್ಲಿ ಕೆಲವು ಚಿಂತನೆಗಳಿದ್ದವು. ಅವರಿಗೆ ಯಾವ ಅವಕಾಶಗಳು ಸಿಗಬೇಕಿತ್ತೋ ಅದು ಸಿಗಲಿಲ್ಲವೆಂದು ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿರುವ ಮಾತು ಸತ್ಯವಾದುದು. ಅವರು ರಾಜಕೀಯ ಧ್ರುವೀಕರಣಗಳಿಂದಾಗಿ ಬದಿಗೆ

ಸರಿಸಲ್ಪಟ್ಟಂಥವರು. ಈ ರಾಜ್ಯ ಅವರಿಂದ ಬಹಳಷ್ಟು ಸೇವೆ ನಿರೀಕ್ಷಿಸಿತ್ತು. ಆ ಮಟ್ಟದ ವ್ಯಕ್ತಿತ್ವ ಹೊಂದಿದವರಾಗಿದ್ದರು. ಅವರಿಗೆ ಅವಕಾಶ ಸಿಗದಿದ್ದಾಗ್ಯೂ ಅವರ ಕರ್ತವ್ಯ ಶಕ್ತಿ ಹಾಗು ತಮ್ಮ ಕಾರ್ಯಕ್ಷೇತ್ರಕ್ಕೆ ತೆರಳಿದ್ದಾಗ ಅವರು ಬಹಳಷ್ಟು ಶ್ರದ್ಧೆಯಿಂದ ತಮ್ಮನ್ನು ತೊಡಗಿಸಿಕೊಳ್ಳುತ್ತಿದ್ದರು. ಅವರಲ್ಲಿ ಕೊಂಚ ಹಠಮಾರಿತನವು ಮೈಗೂಡಿತ್ತು. ಅವರು ಯಾರ ಮೇಲೂ ಅವಲಂಬಿಸಿರಲಿಲ್ಲ. He is one man army. ಯಾರ ಸಹಾಯವು ಬೇಕಾಗಿಲ್ಲವೆನ್ನುವ, ತಮ್ಮದೇ ಆದಂಥ ವಿಶಿಷ್ಟ ವ್ಯಕ್ತಿತ್ವ ಬೆಳೆಸಿಕೊಂಡಂಥ ಅವರನ್ನು ಸಮೀಪದಿಂದ ಕಂಡಾಗ ಇದು ಗೊತ್ತಾಯಿತು. ಇಂತಹವರ ನಿಧನದಿಂದ ನಮಗೆ, ಈ ಸದನಕ್ಕೆ ಹಾಗೂ ರಾಜ್ಯಕ್ಕೆ ನಷ್ಟವುಂಟಾಗಿದೆಯೆಂದು ಭಾವಿಸಿದರೆ ತಪ್ಪಾಗಲಾರದು.

ಇನ್ನು ನಮ್ಮ ಜೊತೆಗಿದ್ದ ಇತ್ತೀಚೆಗೆ ನಿಧನರಾದ ಅನೇಕ ಹಿರಿಯರು, ಅವರು ಶ್ರೀ ಅಶೋಕ ನಾರಾಯಣ ಪಾಟೀಲರಿರಬಹುದು, ಶ್ರೀ ಬಿ. ಅಪ್ಪಾಜಿಗೌಡರು, ಶ್ರೀ ಕೆ.ಪಿ.ಶಾಂತಮೂರ್ತಿಯವರು ಇರಬಹುದು. ಇಷ್ಟೇ ಅಲ್ಲದೇ, ನಾಡಿನ ಹಿರಿಯ ಸಾಹಿತಿಗಳು ನಿಧನರಾಗಿದ್ದು, ಇವರೆಲ್ಲರ ಆತ್ಮಗಳಿಗೆ ಶಾಂತಿ ಕೋರುತ್ತಾ, ಇವರುಗಳ ಅಗಲಿಕೆಯಿಂದಾಗಿರುವ ದುಃಖವನ್ನು ಭರಿಸುವ ಶಕ್ತಿ ಅವರ ಕುಟುಂಬ ವರ್ಗದವರಿಗೆ ಲಭ್ಯವಾಗಲೆಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು ಕನ್ನಡ ಚಿತ್ರರಂಗದ ಹಿರಿಯ, ಪ್ರತಿಭಾವಂತ ನಟ ಶ್ರೀ ಗಂಗಾಧರ್ ಅವರು 1926 ರಲ್ಲಿ ಜನಿಸಿದ್ದರು. ಮೆಕ್ಯಾನಿಕಲ್ ಇಂಜಿನಿಯರ್ ಆದ ಶ್ರೀಯುತರು ಎಚ್.ಎ.ಎಲ್.ನಲ್ಲಿ ಉದ್ಯೋಗಿಯಾಗಿದ್ದು, ನಾಟಕಗಳಲ್ಲಿ ಅಭಿನಯಿಸುತ್ತಿದ್ದರು. ಶ್ರೀಯುತರು ಜಿ.ವಿ.ಅಯ್ಯರ್ ಅವರ ಮೂಲಕ ಚಿತ್ರರಂಗ ಪ್ರವೇಶಿಸಿದ್ದು, ಸುಮಾರು 80 ಚಿತ್ರಗಳಲ್ಲಿ ನಟಿಸಿ, ಮುಖ್ಯವಾಗಿ 'ಗೆಜ್ಜೆಪೂಜೆ', 'ಶರಪಂಜರ' ಚಿತ್ರದಿಂದ ಜನಪ್ರಿಯತೆ ಪಡೆದರು, ರಾಜ್ಯಸರ್ಕಾರವು 1980ರಲ್ಲಿ ಕರ್ನಾಟಕ ರಾಜ್ಯ ಪ್ರಶಸ್ತಿ 2003ನೇ ನವೆಂಬರ್‌ನಲ್ಲಿ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ.

ಶ್ರೀಯುತರು ದಿನಾಂಕ 27ನೇ ಡಿಸೆಂಬರ್ 2003ರಲ್ಲಿ ನಿಧನ ಹೊಂದಿದರು.

ಮೃತರ ಆತ್ಮಕ್ಕೆ ಶಾಂತಿ ಕೋರುವ ಸಲುವಾಗಿ ಈಗ ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಕಾಲ ಮೌನವನ್ನಾಚರಿಸಬೇಕೆಂದು ಕೋರುತ್ತೇನೆ.

(ಮೃತರ ಗೌರವಾರ್ಥ ಸದನವು ಒಂದು ನಿಮಿಷ ಮೌನವನ್ನಾಚರಿಸಿತು)

**ಅಧ್ಯಕ್ಷರು** : ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿಕೊಡಲಾಗುವುದು.

ಈಗ ಸದನವನ್ನು ನಾಳೆ ಬೆಳಿಗ್ಗೆ 11.00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ,

(ಸದನವು ಮಧ್ಯಾಹ್ನ 12 ಗಂಟೆ 55 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ ದಿನಾಂಕ 7ನೇ ಜನವರಿ 2004ರ ಬುಧವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

---

(+ ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

*****